1945

ಹಿಂದ ಪದ್ಧತಿಯ

ಜಮಾಖರ್ಚು

ಭಾಗ ೨

ಎಚ್. ಬಿ. ಉಮಡಿಕರ, ಎಮ್. ಎ.

ಧಾರವಾಡ

ಇವರು ರಚಿಸಿದರು.

ಬೆಲೆ ೧೨ ಆಣೆ

ಶ್ರೀ ಶಂಕರ ಕರ್ನಾಟಕ ಪುಸ್ತಕ ಭಂಡಾರ
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.

ಹಿಂದ ಪದ್ಧತಿಯ

ಜಮಾಖರ್ಚು

ಭಾಗ ೨

ಎಚ್. ಬಿ. ಉಮಡಿಕರ, ಎಸ್. ಎ. ಧಾರವಾಡ
ಇವರು ರಚಿಸಿದರು.

ಬೆಲೆ ೧೨ ಆಣೆ

ಶ್ರೀ ಶೆಂಗೆ ಕರ್ನಾಟಕ ಪುಸ್ತಕ ಭಾಂಡಾರ.
ಪ್ರಕಾಶಕರು, ಪುಸ್ತಕ ವ್ಯಾಪಾರಿಗಳು.
ಮಾಳಮಡ್ಡಿ, ಧಾರವಾಡ.

೧೯೪೫

ಧಾರವಾಡ

ವಿಜಯ ಮುದ್ರಾಲಯದಲ್ಲಿ ಶ್ರೀ ಎನ್. ಎಸ್. ಬೆಂಗೇರಿ
ಇವರಿಂದ ಮುದ್ರಿಸಲ್ಪಟ್ಟಿತು.

ಶ್ರೀ ರಾಮರಾವ ಕೃಷ್ಣರಾವ ಕುಲಕರ್ಣಿ, ಮಾಳಮಡ್ಡಿ, ಧಾರವಾಡ
ಇವರಿಂದ ಪ್ರಕಟಿಸಲ್ಪಟ್ಟಿತು.

ಪ್ರಸ್ತಾವನೆ

ನಮ್ಮ ಹಿಂದ ಪದ್ಧತಿಯ ಮೊದಲನೆಯ ಭಾಗ ಜಮಾಖರ್ಚಿನ ಪುಸ್ತ-ಕದಲ್ಲಿ ವಿವರಿಸಿದ ಜಮಾಖರ್ಚಿನ ಮೂಲ ತತ್ವಗಳನ್ನು ಬೇರೆ ಬೇರೆ ಖಾತೆಗಳಿಗೂ ವ್ಯಾಪಾರಗಳಿಗೂ ಹ್ಯಾಗೆ ಸರಿ ಹೊಂದಿಸಬೇಕೆಂಬ ಕ್ರಮವನ್ನು ಈ ಪುಸ್ತಕದಲ್ಲಿ ವಿಸ್ತಾರವಾಗಿ ಹೇಳಿದೆ. ಆದುದರಿಂದ ಇದು ಮೊದಲನೆಯ ಭಾಗದ ಪರಿಪೂರಕವೆಂದು ಅನ್ನಬಹುದು. ಹೀಗೆ ಏಕಕೇಂದ್ರ ಪದ್ಧತಿಯಿಂದ ಬರೆಯಲಾಗಿದೆ.

ಹವಾಲಿ, ಸುಂಜಾಯತ, ದಲಾಲಿ, ತಸಲಮಾತ, ಅಮಾನತ, ಹುಂಡಿ, ಚೆಕ್ಕು, ಸಾವುಕಾರಿಕೆ ಮೊದಲಾದವುಗಳನ್ನು ಪ್ರಚಲಿತ ಪರಿಸ್ಥಿತಿಗೆ ತಕ್ಕಂತೆ ತಿಳಿಸಿರುವದಲ್ಲದೆ ಒಂದು ತಿಂಗಳ ಜಮಾಖರ್ಚನ್ನು ಬರೆದು ಇಂಗ್ಲಿಷ ಪದ್ಧತಿಯಲ್ಲಿರುವಂತೆ ಬಾಕಿಗಳ ತಾಳೆ, ಖರೀದಿ ವಿಕ್ರಿಖಾತೆ, ಲಾಭಹಾನಿ ಖಾತೆ, ಆಢಾವೆಗಳನ್ನು ರಚಿಸಿ ತೋರಿಸಿರುವೆವು. ವ್ಯಾಖ್ಯೆಗಳನ್ನು ಒಂದೆಡೆಯಲ್ಲಿ ಸಂಗ್ರಹಿಸಿರುವೆವು. ಪ್ರತಿಯೊಂದು ಪ್ರಕರಣದ ಕೊನೆಗೆ ಅಭ್ಯಾಸದ ಪ್ರಶ್ನಗಳನ್ನು ಕೊಟ್ಟಿರುವದಲ್ಲದೆ ಕೊನೆಗೆ ಪ್ರಾಥಮಿಕ ವಿದ್ಯಾರ್ಥಿ, ಶಿಕ್ಷಕರಿಗೆಲ್ಲ ಅವಶ್ಯವಾಗಿರುವ ಗಿಳಿಖರ ಪರೀಕ್ಷೆಯ ಪ್ರಶ್ನಗಳನ್ನು ಕೊಟ್ಟಿ-ರುವೆವು.

ಈ ಮೂರನೆಯ ಆವೃತ್ತಿಯನ್ನು ಪ್ರಕಟಿಸಲು ತಕ್ಕ ಕಾಲದಲ್ಲಿ ಕಾಗದ ದೊರಕಿಸಲು ಶ್ರೀ. ಆರ್. ಜಿ. ಹುಕ್ಕೇರಿ ಅವರು ಸಹಾಯ ಮಾಡಿದರು. ಅ್ಯಗ್ರಿಕಲ್ಚರಲ್ ಅ್ಯಂಡ್ ಇಂಡಸ್ಟ್ರಿಯಲ್ ಬ್ಯಾಂಕಿನ ಧಾರವಾಡ ಶಾಖೆಯ ಏಜಂಟರಾದ ಶ್ರೀ. ಏ. ಎಸ್. ನಾಯಿಕ ಬಿ. ಎ. ಬಿ. ಟಿ. ಅವರು ಚಕ್ಕಿನ ವಿಷಯದಲ್ಲಿ ಕೆಲವು ಸೂಚನೆಗಳನ್ನು ಮಾಡಿದರು. ವಿಜಯ ಮುದ್ರಣಾಲಯದ ಒಡೆಯರಾದ ಶ್ರೀ. ನಾರಾಯಣಾಚಾರ್ಯ ಹೊಸಕೇರಿ ಅವರು ಅಂದವಾಗಿ ಮುದ್ರಿಸಿಕೊಟ್ಟರು. ಇದನ್ನು ತಿಳಿಸಲು ಆನಂದವಾಗುತ್ತದೆ.

ತಾರೀಖು. ಎಚ್. ಬಿ. ಉಮಡಿಕರ

ಅನುಕ್ರಮಣಿಕೆ

೧	ಕೆಲವು ಮುಖ್ಯ ಖಾತೆಗಳು	....	....	೧—೨೫
೨.	ಸೂಟ-ಸಂಜಾಯತ ದಲಾಲಿ	....	....	೨೩—೪೦
೩.	ಹುಂಡಿ	....	....	೪೧—೬೪
೪.	ಸಾವುಕಾರಿಕೆ	....	....	೬೫—೮೯
೫.	ಒಂದು ತಿಂಗಳ ಜನಾಖರ್ಚು	....	....	೯೦—೧೦೮
೬.	ವ್ಯಾಖ್ಯೆಗಳು	....	....	೧—೬
೭.	ಪರೀಕ್ಷೆಯ ಪ್ರಶ್ನೆಗಳು	....	....	೭—೧೬

೧ನೆಯ ಪ್ರಕರಣ

●

ಕೆಲವು ಮುಖ್ಯ ಖಾತೆಗಳು

(೧) ತಸಲಮಾತ ಖಾತೆ.
(೨) ಅಮಾನತ ಖಾತೆ.
(೩) ಹವಾಲಿ.
(೪) ಬರತಕ್ಕ ಚಿಲ್ಲರ ರಕಮು.
(೫) ಕೊಡತಕ್ಕ ಚಿಲ್ಲರ ರಕಮು.
(೬) ಬಾದ ಖಾತೆ.
(೭) ಪ್ರಶ್ನಗಳು.

ಒಂದು ಸಣ್ಣ ವ್ಯಾಪಾರದ ವ್ಯವಹಾರವನ್ನು ಕೀರ್ದಿ-ಖತಾವಣಿಗಳಲ್ಲಿ ಬರೆದು ಖಾತೆಗಳನ್ನು ಬಾಯಿಗೂಡಿಸಿದರೆ, ಆ ವ್ಯಾಪಾರದ ಲಾಭಹಾನಿಗಳನ್ನೂ ಅಥಾವೆಯನ್ನೂ ತೆಗೆಯಲಿಕ್ಕೆ ಬರುವದೆಂಬದನ್ನು ಮೊದಲಿನ ಪುಸ್ತಕದಲ್ಲಿ ತೋರಿಸಿರುತ್ತದೆ. ಇದರಂತೆ ಬೇಕಾದ ವ್ಯಾಪಾರದ ಕೀರ್ದಿ-ಖತಾವಣಿಗಳನ್ನು ಬರೆದರೆ, ಅದರ ಲಾಭಹಾನಿಗಳನ್ನೂ ಅಥಾವೆಯನ್ನೂ ಬೇಕಾದಾಗ ತೆಗೆಯಲಿಕ್ಕೆ ಬರುತ್ತದೆ. ವ್ಯಾಪಾರಗಳು ಭಿನ್ನವಾದರೂ ಜಮಾಖರ್ಚಿನ ಮೂಲತತ್ವಗಳಲ್ಲಿ ಹೆಚ್ಚುಕಡಿಮೆಯಾಗುವದಿಲ್ಲ. ವ್ಯವಹಾರಗಳಿಗನುಸಾರವಾಗಿ ಖಾತೆಗಳು ಮಾತ್ರ ಭಿನ್ನವಾಗುವವು. ಆದುದರಿಂದ ಎಲ್ಲ ಪ್ರಕಾರದ ವ್ಯಾಪಾರಗಳಿಗೆ ವಿಶೇಷವಾಗಿ ಉಪಯೋಗ ಬೀಳುವಂಥ ಖಾತೆಗಳನ್ನೂ ಅವುಗಳನ್ನು ಬರೆಯುವ ಕ್ರಮವನ್ನೂ ಬಾಯಿಗೂಡಿಸುವದನ್ನೂ ಈ ಪ್ರಕರಣದಲ್ಲಿ ಹೇಳಿದೆ.

೧. **ತಸಲಮಾತ ಖಾತೆ:—** ಯಾವದೊಂದು ಕೆಲಸಕ್ಕೆ ಕೆಲವೊಂದು ಖರ್ಚುಮಾಡಬೇಕೆಂದು ಗೊತ್ತಾಗಿದ್ದರೂ. ಒಮ್ಮೊಮ್ಮೆ ಇಂತಿಷ್ಟೇ ರಕಮು ಹಿಡಿಯುವದೆಂಬದು ಮೊದಲೇ ನಿಶ್ಚಯಿಸಲು ಬಾರದು. ಇಂಥ ಪ್ರಸಂಗಗಳಲ್ಲಿ ಕೆಲವೊಂದು ರಕಮನ್ನು ಇಂಥದಕ್ಕೇ ಖರ್ಚುಮಾಡಬೇಕೆಂದು ಹೇಳಿ ಒಬ್ಬನ ಕಡೆಗೆ ಒಪ್ಪಿಸಿಕೊಡುವ ರಕಮಿಗೆ **ತಸಲಮಾತ** ಅನ್ನುವರು. ಇಂಥ ರಕಮುಗಳನ್ನು ಬರೆದಿಡುವ ಖಾತೆಗೆ **ತಸಲಮಾತ ಖಾತೆ** ಅನ್ನುವರು.

ವಿಷಯು ಗೊತ್ತಾಗಿದ್ದರೂ, ರಕಮು ಗೊತ್ತಾಗದೆ ಇದ್ದಾಗ ಈ ಖಾತೆಯನ್ನು ಉಪಯೋಗಿಸುವರು.

ಮನೆಯನ್ನು ಕಟ್ಟಿಸುವದಕ್ಕೆ, ಬಾವಿಯನ್ನು ತೋಡಿಸುವದಕ್ಕೆ, ಲಗ್ನ ಮುಂತಾದವುಗಳನ್ನು ಮಾಡುವದಕ್ಕೆ ಎಷ್ಟು ಖರ್ಚಾಗುವದೆಂಬದು ಮೊದಲು ತಿಳಿಯುವದಿಲ್ಲ. ಆದುದರಿಂದ ಕೆಲವೊಂದು ರಕಮನ್ನು ಯಾವನಾದರೊಬ್ಬನ ಕಡೆಗೆ ಕೊಡುವ ರೂಢಿಯುಂಟು. ದೊಡ್ಡ ದೊಡ್ಡ ಅಂಗಡಿಗಳಲ್ಲಿ ಇಲ್ಲವೆ ಸಂಘಗಳಲ್ಲಿ ಚಿಲ್ಲರ ಖರ್ಚಿನ ಸಲುವಾಗಿ ೪೦—೫೦ ರೂ. ಗಳನ್ನು ಕಾರಕೂನನ ಕೈಯಲ್ಲಿ ವೆಚ್ಚಮಾಡುವದಕ್ಕೆ ಕೊಡುವರು. ಇಂಥ ರಕಮುಗಳನ್ನು ತೆಸಲಮಾತ ಖಾತೆಗೆ ಖರ್ಚು ಬರೆಯಬೇಕು. ಮುಂದೆ ತಪಶೀಲು ಗೊತ್ತಾದಂತೆ ರಕಮನ್ನು ತಸಲಮಾತ ಖಾತೆಗೆ ಜಮೆ ಮಾಡಿ ಯೋಗ್ಯ ಖಾತೆಗೆ ಖರ್ಚು ಬರೆಯಬೇಕು. ಈ ಖಾತೆಯ ಬಾಕಿಯು (ಉಳಿದಿದ್ದರೆ) ಪಕ್ಕಾ ಬಾಕಿಯಾಗುವದರಿಂದ ಬಾಯಿಗೂಡಿಸುವ ಕಾಲಕ್ಕೆ ಅಘಾವೆಗೆ ಎತ್ತಬೇಕು.

ಉದಾ:— (೧) ತಾ. ೨—೫—೪೫ ಇ. ಸವಡಿ ಬಸಪ್ಪನು ಕಾರಕೂನ ನಿಂಗಪ್ಪನ ಕಡೆಗೆ ಅಂಗಡಿಯ ಖರ್ಚಿಗಾಗಿ ೫೦ ರೂ. ೧ ತಿಂಗಳ ಮಟ್ಟಿಗೆ ಕೊಟ್ಟನು. ಕಾರಕೂನನು ತಿಂಗಳ ಅಂತ್ಯಕ್ಕೆ ಲೆಕ್ಕವನ್ನು ಒಪ್ಪಿಸಿದ ವಿವರ:— ತಾ. ೨೮-೫-೪೫ ಇ. ೫ ರೂ. ಪೋಸ್ಟ (ಕಾರ್ಡು ಪಾಕೇಟ, ಟಿಕೀಟ) ಖರ್ಚು; ೧೦ ರೂ. ಕಾಗದ ಮಸಿಗಳ ಖರ್ಚು; ೬ ರೂ. ದೀಪದ ಖರ್ಚು; ೫ ರೂ. ಕೂಲಿಯ ಖರ್ಚು; ೧೦ ರೂ. ಲೆಕ್ಕ ಬರೆಯುವ ಪುಸ್ತಕ ಕೊಂಡ ಖರ್ಚು; ಇವುಗಳನ್ನು ತಾ. ೧—೬—೪೫ ಇ. ದಿವಸ ಬಾಯಿಗೂಡಿಸುವದನ್ನು ಮಾಡಿರಿ.

ಸವಡಿ ಬಸಪ್ಪನ ಕೀರ್ದಿ ತಾ. ೨—೫—೪೫ ಇ. ಪಾನು ೨೫

ಜಮೆ	ರೂ.	ಖರ್ಚು	ರೂ.
		ತಸಲಮಾತ ಖಾತೆ:— ಅಂಗಡಿಯ ಚಿಲ್ಲರ ಖರ್ಚಿನ ಸಲುವಾಗಿ ಕಾರಕೂನ ನಿಂಗಪ್ಪನ ಕೈಯಲ್ಲಿ ಕೊಟ್ಟದ್ದು. ಖಾ. ಪಾ.	೫೦

ಖತಾವಣಿ—ತಸಲಮಾತ ಖಾತೆ. ಪಾನು. ೪೮

ಜಮೆ	ರೂ.	ಖರ್ಚು	ರೂ.
೩೬ ಕೀ. ಪಾ. ೫೮ ತಾ. ೨೮—೫—೪೫		೫೦ ಕೀ. ಪಾ. ೨೫ ತಾ. ೨—೫—೪೫ ಇ.	
೧೪ ತೋ. ಮಿ. ೬೦ ತಾ. ೧—೬—೪೫			
—		—	
೫೦		೫೦	

ಕೀರ್ದಿ—ತಾ. ೨೮—೫—೪೫ ಪಾನು. ೫೮

ಜಮೆ	ರೂ.	ಖರ್ಚು	ರೂ.

೩೬ ತಸಲಮಾತ ಖಾತೆ:— ಕಾರಕೂನ ನಿಂಗಪ್ಪನಿಂದ ಬಂದ ಖರ್ಚಿನ ವಿವರ:—

೫ ರೂ. ಪೋಸ್ಟ ಖರ್ಚು
೧೦ ರೂ. ಕಾಗದ, ಮಸಿ
೬ ರೂ. ದೀಪದ ಖರ್ಚು
೧೦ ರೂ. ಪುಸ್ತಕ ಕೊಂಡ ಖರ್ಚು
೫ ರೂ. ಕೂಲಿ ಕೊಟ್ಟದ್ದು
——
೩೬ ರೂ. ಈ ಪ್ರಕಾರ ಬಂದದ್ದರಿಂದ ಆಯಾ ಖಾತೆಗಳಿಗೆ ಖರ್ಚು

ಖಾ. ಪಾ. ೪೮

೩೧ ಸಾದಿಲವಾರ ಖಾತೆ:— ಅಂಗಡಿಗೆ ಖರ್ಚಾದ ಹಣದ ವಿವರ:—

೫ ರೂ. ಪೋಸ್ಟ ಖರ್ಚು
೧೦ ರೂ. ಕಾಗದ, ಮಸಿ
೬ ರೂ. ದೀಪದ ಖರ್ಚು
೧೦ ರೂ. ಪುಸ್ತಕ ಕೊಂಡ ಖರ್ಚು
——
೩೧ ರೂ. ತಸಲಮಾತ ಖಾತೆಗೆ ಜಮೆ.

ಖಾ. ಪಾ. ೪೯

೫ ಕೂಲಿಯ ಖಾತೆ:— ಅಂಗಡಿಗೆ ಮಾಲನ್ನು ತರುವಾಗ ಕೂಲಿ ಕೊಟ್ಟದ್ದು; ತಸಲಮಾತ ಖಾತೆಗೆ ಜಮೆ.

ಖಾ. ಪಾ. ೫೦

ಸಾದಿಲವಾರ ಖಾತೆ ಪಾನು. ೪೯ ಖತಾವಣಿ ಕೂಲಿಯ ಖಾತೆ ಪಾ. ೫೦

ಜಮೆ	ರೂ.	ಖರ್ಚು	ರೂ.	ಜಮೆ	ರೂ.	ಖರ್ಚು	ರೂ.
		೩೧ ಕೀ. ಪಾ. ೫೮ ತಾ. ೨೮-೫-೪೫				೫ ಕೀ. ಪಾ. ೫೮ ತಾ. ೨೮-೫-೪೫	

ಅಥಾವೆ ಖಾತೆ ಪಾನು. ೧೦೧

ಜಮೆ	ರೂ.	ಖರ್ಚು	ರೂ.
		೧೪ ತಸಲವಾತ	

ಕೀರ್ದಿ ತಾ. ೧—೬—೪೫ ಪಾನು ೭೦

ಜಮೆ	ರೂ.	ಖರ್ಚು	ರೂ.
೧೪ ತಸಲವಾತ ಖಾತೆ:— ಕಾರಕೂನ ನಿಂಗಪ್ಪನಿಂದ ಬರತಕ್ಕದ್ದಿದ್ದದರಿಂದ ಅಥಾವೆಗೆ ಖರ್ಚು. ಖಾ. ಪಾ. ೪೮		೧೪ ಅಥಾವೆಯ ಖಾತೆ :— ತೋಂಡಮಿಳವಣಿ. ತಸಲವಾತ ಖಾತೆಗೆ ಜಮೆ. ಖಾ. ಪಾ. ೧೦೧	

೨. **ಅಮಾನತ ಖಾತೆ:**— ಒಬ್ಬರ ಕಡೆಯಿಂದ ಹಣವು ಬಂದರೂ ಒಮ್ಮೊಮ್ಮೆ ಯಾತರ ಸಲುವಾಗಿ ಕಳಿಸಿದರೆಂಬದನ್ನು ಅವರು ತಿಳಿಸಿರುವದಿಲ್ಲ. ಯಾವದೊಂದು ಕಾರಣದಿಂದ ತಮಗೆ ಬರತಕ್ಕ ಬಡ್ಡಿ, ಬಾಡಿಗೆ, ಮೊದಲಾದವುಗಳ ಹಣವನ್ನು ಅವರು ತೆಗೆದುಕೊಂಡು ಹೋಗಿರುವದಿಲ್ಲ; ಮತ್ತು ಏನು ಮಾಡಬೇಕೆಂಬದನ್ನೂ ತಿಳಿಸಿರುವದಿಲ್ಲ. ಇಂಥ ರಕಮುಗಳನ್ನು ಬರೆದಿಡುವ ಖಾತೆಗೆ **ಅಮಾನತ ಖಾತೆ** ಅನ್ನುವರು. ರಕಮು ಗೊತ್ತಾದರೂ ವಿಷಯ ಗೊತ್ತಾಗದೆ ಇದ್ದಾಗ ಅಮಾನತ ಖಾತೆಯನ್ನು ಉಪಯೋಗಿಸುವರು.

ಈ ತರದ ರಕಮುಗಳನ್ನು ಅಮಾನತ ಖಾತೆಗೆ ಜಮೆ ಮಾಡಬೇಕು ಹಣ ಕಳಿಸಿದ ಕಾರಣವು ತಿಳಿದ ಮೇಲೆ ಅದೇ ಖಾತೆಗೆ ಖರ್ಚು ಬರೆದು ರೋಖ ರಕಮು ಕೊಡದಿದ್ದರೆ ಯೋಗ್ಯ ಖಾತೆಗೆ ಜಮೆ ಮಾಡಬೇಕು. ಈ ಖಾತೆಯ ಬಾಕಿಯು (ಎಂದಾದರೂ ಬರುವ ಕಾರಣ) ಪಕ್ಕಾ ಆಗುವದರಿಂದ ಅದನ್ನು ಅಥಾವೆಗೆ ಎತ್ತಬೇಕು.

ಉದಾ:—(೨) ತಾ. ೯—೬—೪೫ ನೆಯ ದಿವಸ ಅ ನಿಗೆ ದೇಸಾಯಿ ನಾಗಪ್ಪನು ೧೦೫೦ ರೂ. ಕಳಿಸಿದನು. ಹಣದ ವ್ಯವಸ್ಥೆಯ ಬಗ್ಗೆ ಏನೂ ತಿಳಿಸಿಲ್ಲ. ತಾರೀಖು ೧೬—೬—೪೫ ನೆಯ ದಿವಸ ನೀಲಿ ಸಂಗಪ್ಪನು ತಾನು ಒಯ್ಯತಕ್ಕ ಬಡ್ಡಿಯ ಹಣ ೫೦ ರೂ. ತೆಗೆದುಕೊಂಡು ಹೋಗಿಲ್ಲ. ನಿಷ್ಕಾರಣ ನಮ್ಮಲ್ಲಿ ಬಿಟ್ಟಿದ್ದಾನೆ.

ತಾ. ೩೦—೬—೧೯೪೫ ನೆಯ ದಿವಸ ಅಥಾವೆಯನ್ನು ತೆಗೆಯಿರಿ.

ಆನ ಕೀರ್ದಿ ತಾ. ೯—೬—೪೫ ಪಾನು. ೬೦

ಜಮೆ	ರೂ.	ಖರ್ಚು	ರೂ.
೧೦೫೦	ಅವಮಾನತ ಖಾತೆ:—ದೇಸಾಯಿ ನಾಗಪ್ಪನು ಕಾರಣ ತಿಳಿಸದೆ ರೂ. ಗಳನ್ನು ಕಳಿಸಿರುವನು. ಖಾ. ಪಾ. ೫೦		

ಕೀರ್ದಿ ತಾ. ೧೬—೬—೪೫ ಪಾನು ೮೦

ಜಮೆ	ರೂ.	ಖರ್ಚು	ರೂ.
೫೦	ಅವಮಾನತ ಖಾತೆ:— ನೀಲೀ ಸಂಗಪ್ಪನು ಬಡ್ಡಿಯು ಹಣವನ್ನು ಒಯ್ಯಲಿಲ್ಲ. ಬಡ್ಡಿಯು ಖಾತೆಗೆ ಖರ್ಚು. ಖಾ ಪಾ. ೫೧	೫೦	ಬಡ್ಡಿಯು ಖಾತೆ — ಅಮಾನತ ಖಾತೆಗೆ ಜಮೆಯಾದದ್ದರಿಂದ. ಖಾ. ಪಾ. ೫೨

ಕೀರ್ದಿ ತಾ. ೩೦—೬—೪೫ ಪಾನು ೧೦೦

ಜಮೆ	ರೂ.	ಖರ್ಚು	ರೂ.
೧೧೦೦	ಅಧಾವೆಯು ಖಾತೆ:—ತೋಂಡ ಮಿಳವಣಿ ಅವಮಾನತ ಖಾತೆಗೆ ಖರ್ಚು. ಖಾ. ಪಾ. ೨೦೧	೧೧೦೦	ಅವಮಾನತ ಖಾತೆ:—ತೋಂಡ ಮಿಳವಣಿ ಅಧಾವೆಗೆ ಜಮೆ. ಖಾ. ಪಾ. ೫೧

ಖತಾವಣಿ

ಅವಮಾನತ ಖಾತೆ. ಪಾ. ನಂ. ೫೧

ಜಮೆ	ರೂ.	ಖರ್ಚು	ರೂ.
೧೦೫೦	ಕೀ. ಪಾ. ೬೦ ತಾ. ೯-೬-೪೫	೧೧೦೦	ತೋಂ. ಮಿ. ತಾ. ೩೦-೬-೪೫
೫೦	ಕೀ. ಪಾ. ೮೦ ತಾ. ೧೬-೬-೪೫		
೧೦೦೦		೧೧೦೦	

ಅಧಾವೆಯು ಖಾತೆ. ೨೦೧

ಜಮೆ	ರೂ.	ಖರ್ಚು	ರೂ.
೧೧೦೦	ಅಮಾನತ		

೩. **ಹವಾಲಿ**:—ಸಾವುಕಾರನ ಮನಸ್ಸಿಗೆ ಬಂದ ಮನುಷ್ಯನು, ಸಾಲಗಾರನು ಕೊಡಬೇಕಾದ ಹಣವನ್ನು ತಾನು ಕೊಡುವೆನೆಂದು ಒಪ್ಪಿಕೊಳ್ಳು, ವದಕ್ಕೆ ಹವಾಲಿ ಹಿಡಿಯೋಣವೆನ್ನುವರು. ಈ ವ್ಯವಹಾರಕ್ಕೆ (೧) ಸಾವುಕಾರ, (೨) ಸಾಲಗಾರ, (೩) ಹವಾಲಿ ಹಿಡಿದವ ಹೀಗೆ ಮೂವರು ಬೇಕು. ಆದುದರಿಂದ ಹವಾಲಿಯ ವ್ಯವಹಾರದ ಜಮಾಖರ್ಚನ್ನು ಈ ಮೂವರ ಕೀರ್ದಿಗಳಲ್ಲಿ ಬರೆಯಬೇಕು. ಈ ವ್ಯವಹಾರದಿಂದ ರೋಖು ಶಿಲಕಿನಲ್ಲಿ ಹೆಚ್ಚುಕಡಿಮೆಯಾಗುವದಿಲ್ಲ. ಆದುದರಿಂದ ಇದರ ರಕಮು ಪರಭಾರೆ ಇರುತ್ತದೆ.

(೧) **ಸಾವುಕಾರನಲ್ಲಿ ಹವಾಲಿ ಜಮಾಖರ್ಚು ಮಾಡುವ ಕ್ರಮು**—ಸಾಲಗಾರನಿಂದ ಹಣ ಬಂತೆಂದು ತಿಳಿದು ಅವನ ಖಾತೆಗೆ ಜಮೆ ಮಾಡಬೇಕು. ಹವಾಲಿ ಹಿಡಿದವನಿಗೆ ಹಣ ಕೊಟ್ಟಿತೆಂದು ತಿಳಿದು ಅವನ ಖಾತೆಗೆ ಖರ್ಚು ಬರೆಯಬೇಕು.

ಅಥಾವೆಯನ್ನು ತೆಗೆಯುವದರೊಳಗಾಗಿ ಹವಾಲಿ ಹಿಡಿದವನು ಹಣ ಕೊಟ್ಟರೆ, ಅವನ ಹೆಸರಿನಿಂದ ಜಮೆ ಹಿಡಿಯಬೇಕು. ಕೊಡದಿದ್ದರೆ ಇಸಮಿನ ಖಾತೆಯಂತೆ ಬಾಯಿಗೂಡಿಸಬೇಕು.

(೨) **ಸಾಲಗಾರನಲ್ಲಿ**:—ಸಾವುಕಾರನ ಖಾತೆಗೆ ರಕಮು ಖರ್ಚು ಬರೆದು ಹವಾಲಿ ಹಿಡಿದವನ ಖಾತೆಗೆ ಜಮೆ ಮಾಡಬೇಕು. ತಾನು ಅಥಾವೆ ತೆಗೆಯುವದರೊಳಗಾಗಿ ಹಣ ಕೊಟ್ಟರೆ, ಹವಾಲಿ ಹಿಡಿದವನ ಖಾತೆಗೆ ಖರ್ಚು ಬರೆಯಬೇಕು. ಕೊಡದಿದ್ದರೆ ಇಸಮಿನ ಖಾತೆಯಂತೆ ಬಾಯಿಗೂಡಿಸಬೇಕು.

(೩) **ಹವಾಲಿ ಹಿಡಿದವನಲ್ಲಿ**:—ಸಾವುಕಾರನ ಖಾತೆಗೆ ರಕಮು ಜಮೆ ಮಾಡಿ ಸಾಲಗಾರನ ಖಾತೆಗೆ ಖರ್ಚು ಬರೆಯಬೇಕು.

ಅಥಾವೆ ತೆಗೆಯುವದರೊಳಗಾಗಿ ಸಾಲಗಾರನಿಂದ ಹಣ ಬಂದರೆ ಅವನ ಹೆಸರಿನಿಂದ ಜಮೆ ಹಿಡಿದು, ಸಾವುಕಾರನಿಗೆ ಕೊಟ್ಟ ಬಳಿಕ ಅವನ ಹೆಸರಿಲೆ ಖರ್ಚು ಬರೆಯಬೇಕು. ಮುದತಿನೊಳಗಾಗಿ ಹಣ ಬರದಿದ್ದರೆ, ಅಷ್ಟು ರಕಮನ್ನು ಸಾವುಕಾರನಿಗೆ ಕೊಟ್ಟು ಖರ್ಚು ಬರೆಯಬೇಕು. ಅಥಾವೆಯ ಕಾಲಕ್ಕೆ ಸಾಲಗಾರನಿಂದಾಗಲಿ, ತನ್ನಿಂದಾಗಲಿ, ಸಾವುಕಾರನಿಗೆ ಹಣ ಮುಟ್ಟದಿದ್ದರೆ ಸಾವುಕಾರನ ಮತ್ತು ಸಾಲಗಾರನ ಖಾತೆಗಳೆರಡನ್ನೂ ಅಥಾವೆಗೆ ಎತ್ತಬೇಕು.

ಉದಾ:—(೩) ತಾ. ೫-೬-೪೫ ಇ. ಬ ನು ಅ ನಿಗೆ ತಾ. ೩-೪-೪೫ನೆಯ ದಿವಸ ಕೊಡತಕ್ಕ ೨೦೦ ರೂ. ಗಳಿಗೆ ಕ ನನ್ನು ಹವಾಲಿ ಕೊಟ್ಟನು. ಅಧಾವೆಯ ಕಾಲಕ್ಕೆ ತಾ ೯-೬-೪೫ಕ್ಕೆ ಹಣ ಬಂದಿಲ್ಲ. ಮೂವರ ಕೀರ್ದಿ ಖತಾವಣಿಗಳನ್ನು ಬರೆದು ಅಧಾವೆಯನ್ನು ತೆಗೆಯುತಕ್ಕದ್ದು.

ಅ (ಸಾವುಕಾರ) ನ ಕೀರ್ದಿ ತಾ. ೫-೬-೪೫ ಪಾ. ೮

ಜಮೆ	ರೂ.	ಖರ್ಚು	ರೂ.
೨೦೦ ಬ ನ ಖಾತೆ:—ನಮಗೆ ಕೊಡತಕ್ಕ ಹಣಕ್ಕೆ ಕ ನನ್ನು ಹವಾಲಿ ಕೊಟ್ಟದ್ದರಿಂದ ಕ ನ ಖಾತೆಗೆ ಖರ್ಚು. ಖಾ. ಪಾ. ೨೦		೨೦೦ ಕ ನ ಖಾತೆ:—ಬ ನಿಂದ ಬರತಕ್ಕ ಹಣಕ್ಕೆ ಹವಾಲಿ ಹಿಡಿದದ್ದರಿಂದ ಅವನ ಖಾತೆಗೆ ಜಮೆ. ಖಾ. ಪಾ. ೨೧	

ಖತಾವಣಿ

ಬ ನ ಖಾತೆ ಪಾನು ೨೦ — ಕ ನ ಖಾತೆ ಪಾನು ೨೧

ಜಮೆ ರೂ.	ಖರ್ಚು ರೂ.	ಜಮೆ ರೂ.	ಖರ್ಚು ರೂ.
೨೦೦ ಕೀ. ಪಾ. ೮ ತಾ. ೫-೬-೪೫	೨೦೦ ಕೀ. ಪಾ. ತಾ. ೩-೪-೪೫	೨೦೦ ಕೀ. ಪಾ. ತೊ. ವಿ. ತಾ. ೯-೬-೪೫	೨೦೦ ಕೀ. ಪಾ. ೮ ೫-೬-೪೫

ಅಧಾವೆ ಪಾನು ೨೦೧

ಜಮೆ	ರೂ.	ಖರ್ಚು	ರೂ.
		೨೦೦ ಕ ನ ಖಾತೆ	

ಕೀರ್ದಿ ತಾ. ೯—೬—೪೫

ಜಮೆ	ರೂ.	ಖರ್ಚು	ರೂ.
೨೦೦ ಕ ನ ಖಾತೆ:—ತೋಂಡ ವಿಳವಣಿ ಅಧಾವೆಗೆ ಖರ್ಚು ಖಾ. ಪಾ. ೨೧		೨೦೦ ಅಧಾವೆಯ ಖಾತೆ:—ತೋಂಡ ವಿಳವಣಿ ಕ ನ ಖಾತೆಗೆ ಜಮೆ. ಖಾ. ಪಾ. ೨೦೧	

ಬ (ಸಾಲಗಾರ) ನ ಕೀರ್ದಿ ತಾ. ೫—೬—೪೫ ಪಾನು ೨೫

ಜಮೆ	ರೂ.	ಖರ್ಚು	ರೂ.
ಕ ನ ಖಾತೆ:—ಅ ನಿಗೆ ಕೊಡತಕ್ಕ ೨೦೦ ರೂ. ಗಳಿಗೆ ಹವಾಲಿ ಹಿಡಿದದ್ದರಿಂದ ಅ ನ ಖಾತೆಗೆ ಖರ್ಚು. ಖಾ. ಪಾ. ೨೯	೨೦೦	ಅ ನ ಖಾತೆ—ಇವನಿಗೆ ಕೊಡತಕ್ಕ ಹಣಕ್ಕೆ ಕ ನು ಹವಾಲಿ ಕೊಟ್ಟದ್ದರಿಂದ ಕ ನ ಖಾತೆಗೆ ಜಮೆ. ಖಾ. ಪಾ. ೩೦	೨೦೦

ಖತಾವಣಿ

ಕ ನ ಖಾತೆ ಪಾ. ೨೯ — ಅ ನ ಖಾತೆ ಪಾ. ೩೦

ಜಮೆ—ರೂ.	ಖರ್ಚು—ರೂ.	ಜಮೆ—ರೂ.	ಖರ್ಚು—ರೂ.
೨೦೦ ಕೀ. ಪಾ. ೨೫ ತಾ. ೫-೬-೪೫	೨೦೦ ಕೀ. ಪಾ. ತೊ. ವಿ. ೯-೬-೪೫	೨೦೦ ಕೀ. ಪಾ. ತಾ. ೩-೪-೪೫	೨೦೦ ಕೀ. ಪಾ. ೨೫ ತಾ. ೫-೬-೪೫

ಅಧಾವೆ ಪಾನು. ೩೦೧

ಜಮೆ	ರೂ.	ಖರ್ಚು	ರೂ.
ಕ ನ ಖಾತೆ.	೨೦೦		

ಕೀರ್ದಿ ತಾ. ೯—೬—೪೫ ಪಾನು ೩೬

ಜಮೆ	ರೂ.	ಖರ್ಚು	ರೂ.
ಅಧಾವೆಯು ಖಾತೆ :— ತೋಂಡ ಮಿಳವಣಿ ಕ ನ ಖಾತೆಗೆ ಖರ್ಚು. ಖಾ. ಪಾ. ೩೦೧	೨೦೦	ಕ ನ ಖಾತೆ :— ತೋಂಡಮಿಳವಣಿ ಅಧಾವೆಗೆ ಜಮೆ. ಖಾ. ಪಾ. ೨೯	೨೦೦

ಕ (ಹವಾಲಿ ಹಿಡಿದವ)ನ ಕೀರ್ದಿ ತಾ. ೫—೬—೪೫ ಪಾನು ೩೧

ಜಮೆ	ರೂ.	ಖರ್ಚು	ರೂ.
ಅ ನ ಖಾತೆ:— ಬ ನ ಹಣಕ್ಕೆ ಹವಾಲಿ ಹಿಡಿದದ್ದರಿಂದ ಬ ನ ಖಾತೆಗೆ ಖರ್ಚು. ಖಾ. ಪಾ.	೨೦೦	ಬ ನ ಖಾತೆ :— ಅ ನ ಹಣಕ್ಕೆ ಹವಾಲಿ ಕೊಟ್ಟದ್ದರಿಂದ ಅವನ ಖಾತೆಗೆ ಜಮೆ. ಖಾ. ಪಾ.	೨೦೦

ಖತಾವಣಿ

ಅ ನ ಖಾತೆ	ಪಾ. ೬೦	ಬ ನ ಖಾತೆ	ಪಾ. ೬೦
ಜಮೆ ___ ರೂ.	ಖರ್ಚು ___ ರೂ.	ಜಮೆ ___ ರೂ.	ಖರ್ಚು ___ ರೂ.
೧೦೦ ಕೆ. ಪಾ.	೧೦೦ ತೋಂ. ಮಿ.	೧೦೦ ತೋಂ. ಮಿ.	೧೦೦ ಕೀ. ಪಾ.
ತಾ. ೫-೬-೪೫	೯-೫-೪೫	೯-೬-೪೫	೫-೬-೪೫
೧೦೦	೧೦೦	೧೦೦	೧೦೦

ಅಢಾವೆ

ತಾ. ೯—೬—೪೫ ಪಾ. ೧೦೧

ಜಮೆ ರೂ.	ಖರ್ಚು ರೂ.
೧೦೦ ಅ ನ ಖಾತೆ	೧೦೦ ಬ ನ ಖಾತೆ.

ಕೀರ್ದಿ

ತಾ. ೯—೬—೪೫

ಜಮೆ ರೂ.	ಖರ್ಚು ರೂ.
೧೦೦ ಅಢಾವೆ:— ಅ ನ ಬಾಬತು ಹವಾಲಿ ಅ ನ ಖಾತೆಗೆ ಖರ್ಚು. ಖಾ. ಪಾ. ೧೦೧	೧೦೦ ಅ ನ ಖಾತೆ:— ತೋಂಡಮಿಳವಣೆ ಅಢಾವೆಗೆ ಜಮೆ. ಖಾ. ಪಾ. ೬೦
೧೦೦ ಬ ನ ಖಾತೆ:— ತೋಂಡಮಿಳವಣೆ ಅಢಾವೆಗೆ ಖರ್ಚು ಖಾ. ಪಾ. ೬೧	೧೦೦ ಅಢಾವೆ:— ಬ ನ ಬಾಬತು ಹವಾಲಿ ಬ ನ ಖಾತೆಗೆ ಜಮೆ. ಖಾ. ಪಾ ೧೦೧

೪ **ಬರತಕ್ಕ ಚಿಲ್ಲರ ರಕಮು:**— ಅಢಾವೆ ತೆಗೆಯುವ ಕಾಲಕ್ಕೆ ಕೆಲವರಿಂದ ಸಣ್ಣ ಸಣ್ಣ ರಕಮುಗಳು ಬರತಕ್ಕವಿರುತ್ತವೆ. ಉದಾಹರಣೆ:— ಮಾಸಪತ್ರಿಕೆ, ವರ್ತಮಾನಪತ್ರಗಳ ಚಂದಾ ಹಣವು, ಅಂಗಡಿಯ ಪಟ್ಟಿ,

ಮುಂತಾದ ರಕಮುಗಳನ್ನು ಮುಂಗಡವಾಗಿ ಕೊಡುವ ರೂಢಿಯುಂಟು. ಅಖಾವೆಯ ಕಾಲಕ್ಕೆ ಇಂಥ ರಕಮುಗಳ ಪೈಕಿ ಕೆಲವು ಪೂರ್ಣ ಖರ್ಚಾಗಿರುವದಿಲ್ಲ. ಪೂರ್ಣ ಖರ್ಚಾಗಿದೆ ಎಂದು ತಿಳಿದರೆ ಲಾಭವು ನಿಜವಾಗಿ ಲಾಭವಾಗುವದಕ್ಕಿಂತ ಕಡಿಮೆಯಾಗುತ್ತದೆ. ಆದದರಿಂದ ಲಾಭಹಾನಿಯ ಖಾತೆಯು ನಿಜವಾದ ಸ್ಥಿತಿಯನ್ನು ತೋರಿಸುವದಿಲ್ಲ. ಇಂಥ ರಕಮುಗಳ ಜಮಾಖರ್ಚನ್ನು ಎರಡು ರೀತಿಗಳಿಂದ ಮಾಡುವರು. ಈ ವ್ಯವಹಾರಗಳಿಂದ ರೋಖು ಶಿಲಕಿನಲ್ಲಿ ಹೆಚ್ಚುಕಡಿಮೆಯಾಗುವದಿಲ್ಲ. ಆದದರಿಂದ ಇವುಗಳ ರಕಮು ಪರಭಾರೆ ಇರುತ್ತದೆ. ಆ ಎರಡು ರೀತಿಗಳು ಯಾವವೆಂದರೆ:—

೧ನೆಯ ರೀತಿ:— ಹಲವು ಸಣ್ಣ ರಕಮುಗಳು ಬರತಕ್ಕವಿದ್ದರೆ, ಆಯಾ ಖಾತೆಗಳಿಗೆ ಜಮೆ ಮಾಡಿ ಚಿಲ್ಲರ ಬರತಕ್ಕ ಖಾತೆಗೆ ಖರ್ಚು ಬರೆಯಬೇಕು. ಈ ಖಾತೆಯು ಪಕ್ಕಾ ಇರುವದರಿಂದ ಅಖಾವೆಗೆ ಎತ್ತಬೇಕು. (ಹೀಗೆ ಮಾಡಿದರೆ ಲಾಭಹಾನಿಯ ಖಾತೆಯ ಖರ್ಚು, ಚಿಲ್ಲರ ಬರತಕ್ಕ ರಕಮುಗಳಷ್ಟು ಕಡಿಮೆಯಾಗುತ್ತದೆ. ಆದದರಿಂದ ಬರತಕ್ಕ ಚಿಲ್ಲರ ರಕಮುಗಳನ್ನು ಬಾಬಿನ ಖಾತೆಗಳಿಗೆ ಜಮೆ ಮಾಡಿದ ಕೂಡಲೆ ಬರತಕ್ಕ ಚಿಲ್ಲರ (ಚಿ. ಬ.) ಖಾತೆಗೆ ಖರ್ಚು ಬರೆಯಬೇಕು.) ಮುದ್ದತು ಮುಗಿದ ಮೇಲೆ ಹೊಸ ವಹಿಗಳಲ್ಲಿ ತಕ್ಕ ಖಾತೆಗೆ ಆಯಾ ರಕಮು ಖರ್ಚು ಬರೆಯಬೇಕು.

ಉದಾ:— (೪) ಅ ನು ಸನ್ ೪೪—೪೫ ಇ. ಬಾಬತ ತಾ. ೫-೪-೪೪ ನೆಯ ದಿವಸ ೫೦ ರೂ. ನಳಪಟ್ಟಿ ಕೊಟ್ಟಿದ್ದನು. ಕರ್ಮವೀರ ಪತ್ರದ ಚಂದಾ (೪೪—೪೫ ಇ. ಬಾ.) ತಾ. ೫-೭-೪೪ ನೆಯ ದಿವಸ ೪ ರೂ. ಕೊಟ್ಟನು. ತಾ. ೫-೧೦-೪೪ ನೆಯ ದಿವಸ ತೋಂಡಮಿಳವಣಿಯನ್ನು ಮಾಡತಕ್ಕದ್ದು.

ಇಲ್ಲಿ ತಾ. ೫—೪—೪೪ ನೆಯ ದಿವಸ ೫೦ ರೂ. ಗಳನ್ನು ಕೊಟ್ಟಿರುತ್ತದೆ. ತಾ. ೫—೧೦—೪೪ ಇ. ದಿವಸ ಅಖಾವೆ ತೆಗೆದದ್ದರಿಂದ ೨೫ ರೂ. ಗಳು ಆ ವರ್ಷದ ಸಂಬಂಧದಿಂದ ಖರ್ಚಾದ ಹಾಗಾಯಿತು. ತಾ. ೫—೭—೪೪ ರಿಂದ ೫—೧೦—೪೪ ರ ವರೆಗೆ ಅಂದರೆ ಮೂರು ತಿಂಗಳಿಗೆ ಕರ್ಮವೀರ ಪತ್ರಕ್ಕೆ ೧ ರೂ. ಖರ್ಚಾದಂತಾಯಿತು.

ಅ ನ ಕೀರ್ದಿ ತಾ. ೫—೪—೧೯೪೪

ಜಮೆ	ರೂ.	ಖರ್ಚು	ರೂ.
		೫೦ ನಳದಪಟ್ಟೀ ಖಾತೆ:—೪೪—೪೫ ಬಾ. ನಳಪಟ್ಟಿ ಕೊಟ್ಟದ್ದು.	
		ಖಾ. ಪಾ.	

ತಾ. ೫—೭—೪೪

ಜಮೆ	ರೂ.	ಖರ್ಚು	ರೂ.
		೪ ಕರ್ಮವೀರ ಪತ್ರದ ಖಾತೆ:— ಸನ್ ೪೪—೪೫ ಇ. ಬಾಬತ ಸದರ ಪತ್ರದ ವರ್ಗಣಿ ಕೊಟ್ಟದ್ದು.	
		ಖಾ. ಪಾ.	

ಖತಾವಣಿ

ನಳಪಟ್ಟಿ ಖಾತೆ.

ಜಮೆ	ರೂ.	ಖರ್ಚು	ರೂ.
೨೫ ಕೀ. ಪಾ. ೨೦ ತಾ. ೫.೧೦-೪೪		೫೦ ಕೀ. ಪಾ. ೧ ೫.೪.೪೪	
೨೫ ಲಾ. ಹಾ. ತಾ. ೫-೧೦.೪೪		೫೦	
೫೦			

ಕರ್ಮವೀರ ಪತ್ರದ ಖಾತೆ.

ಜಮೆ	ರೂ.	ಖರ್ಚು	ರೂ.
೩ ಕೀ. ಪಾ. ೨೦ ೫.೧೦-೪೪		೪ ಕೀ. ಪಾ. ೧ ೫.೭.೪೪	
೧ ಲಾ. ಹಾ.		೪	
೪			

ಅಡಾವೆ ಖಾತೆ.

ಜಮೆ	ರೂ.	ಖರ್ಚು	ರೂ.
		೨೮ ಚಿ. ಬ. ಖಾತೆ	

ಚಿಲ್ಲರ ಬರತಕ್ಕ ಖಾತೆ

ಜಮೆ	ರೂ.	ಖರ್ಚು	ರೂ.
೨೮ ತೋ. ವಿ. ೫.೧೦.೪೪		೨೫ ಕೀ. ಪಾ. ೨೦ ೫.೧೦.೪೪	
೨೮		೩ ಕೀ. ಪಾ. ೨೦ ತಾ ೫.೧೦.೪೪	
		೨೮	

ಕೀರ್ದಿ.

ತಾ. ೫—೧೦—೪೪ ಇ.

ಜಮೆ — ರೂ.

೨೫ ನಳಪಟ್ಟಿ ಖಾತೆ:—ಚಿಲ್ಲರ ಬರತಕ್ಕ ಖಾತೆಗೆ ಖರ್ಚು.

ಖಾ. ಪಾ.

೩ ಕರ್ಮವೀರ ಪತ್ರದ ಖಾತೆ:—ಚಿಲ್ಲರ ಬರತಕ್ಕ ಖಾತೆಗೆ ಖರ್ಚು.

ಖಾ. ಪಾ.

೨೫ ನಳಪಟ್ಟಿ ಖಾತೆ:—ಲಾಭಹಾನಿಯ ಖಾತೆಗೆ ಖರ್ಚು

ಖಾ. ಪಾ.

೧ ಕರ್ಮವೀರ ಪತ್ರದ ಖಾತೆ:—ಲಾಭಹಾನಿಯ ಖಾತೆಗೆ ಖರ್ಚು

ಖಾ. ಪಾ.

೨೮ ಚಿಲ್ಲರ ಬರತಕ್ಕ ಖಾತೆ—ತಪಶೀಲು

೨೫ ರೂ. ನಳದ ಪಟ್ಟಿ

೩ ರೂ. ಕರ್ಮವೀರ ಪತ್ರ.

—

೨೮ ಅಢಾವೆಗೆ ಖರ್ಚು

ಖಾ. ಪಾ.

ಖರ್ಚು — ರೂ.

೨೮ ಚಿಲ್ಲರ ಬರತಕ್ಕ ಖಾತೆ:—ತಪಶೀಲು

೨೫ ರೂ. ನಳಪಟ್ಟಿ.

೩ ರೂ. ಕರ್ಮವೀರ ಪತ್ರ

—

೨೮ ರೂ. ಆಯಾ ಖಾತೆಗೆ ಜಮೆ.

ಖಾ. ಪಾ.

೨೬ ಲಾಭಹಾನಿಯ ಖಾತೆ:—ತಪಶೀಲು

೨೫ ರೂ. ನಳಪಟ್ಟಿ

೧ ರೂ. ಕರ್ಮವೀರ ಪತ್ರ

—

೨೬ ರೂ. ಆಯಾ ಖಾತೆಗೆ ಜಮೆ

ಖಾ. ಪಾ.

೨೮ ಅಢಾವೆ ಖಾತೆ:— ತೋಂಡವಿಳವಣಿ ಚಿಲ್ಲರ ಬರತಕ್ಕ ಖಾತೆಗೆ ಜಮೆ

ಖಾ. ಪಾ.

ಲಾಭಹಾನಿಯ ಖಾತೆ

ಜಮೆ — ರೂ.

ಖರ್ಚು — ರೂ.

೨೫ ನಳಪಟ್ಟಿ

೧ ಕರ್ಮವೀರ ಪತ್ರ

೨ನೆಯ ರೀತಿಯು:— ೨೫ ರೂ. ಗಳನ್ನು ನಳಪಟ್ಟ ಖಾತೆಗೆ ಮತ್ತು ೩ ರೂ. ಗಳನ್ನು ಸ. ಕರ್ನಾಟಕ ಪತ್ರದ ಖಾತೆಗೆ ಜಮೆ ಹಿಡಿದು ಅಷ್ಟು ಹಣವನ್ನು ಒಮ್ಮೆಲೆ ಅಧಾವೆಗೆ ಖರ್ಚು ಬರೆಯಬೇಕು. ಮುಂದೆ ಬಾಬಿನ ಖಾತೆಯಂತೆ ಬಾಯಿಗೂಡಿಸಬೇಕು.

ಜಮೆ	ರೂ.	ಖರ್ಚು	ರೂ.
೨೫	ನಳಪಟ್ಟ ಖಾತೆ:— ಬರತಕ್ಕದ್ದಿದ್ದದರಿಂದ ಅಧಾವೆಗೆ ಖರ್ಚು ಖಾ. ಪಾ.	೨೮	ಅಧಾವೆಯ ಖಾತೆ:— ತೋಂಡ ಮಿಳವಣಿ ತಪಶೀಲು— ೨೫ ರೂ. ನಳಪಟ್ಟ ೩ ರೂ. ಕರ್ಮವೀರ ಪತ್ರ — ೨೮ ರೂ. ಆಯಾ ಖಾತೆಗೆ ಜಮೆ ಖಾ. ಪಾ.
೩	ಸ. ಕರ್ನಾಟಕ ಪತ್ರದ ಖಾತೆ:— ಬರತಕ್ಕದ್ದಿದ್ದದರಿಂದ ಅಧಾವೆಗೆ ಖರ್ಚು ಖಾ. ಪಾ.		
೨೫	ನಳಪಟ್ಟ ಖಾತೆ:— ತೋಂಡಮಿಳವಣಿ ಲಾಭಹಾನಿ ಖಾತೆಗೆ ಖರ್ಚು ಖಾ. ಪಾ.	೨೬	ಲಾಭಹಾನಿಯ ಖಾತೆ:—ತೋಂಡ ಮಿಳವಣಿಯ ತಪಶೀಲು— ೨೫ ನಳಪಟ್ಟ ೧ ರೂ. ಕರ್ಮವೀರ ಪತ್ರ — ೨೬ ರೂ. ಆಯಾ ಖಾತೆಗೆ ಜಮೆ ಖಾ. ಪಾ.
೧	ಕರ್ಮವೀರ ಪತ್ರದ ಖಾತೆ:— ತೋಂಡಮಿಳವಣಿ, ಲಾಭಹಾನಿ ಖಾತೆಗೆ ಖರ್ಚು ಖಾ. ಪಾ.		

ಖತಾವಣಿ

ನಳಪಟ್ಟ ಖಾತೆ:		ಕರ್ಮವೀರ ಪತ್ರದ ಖಾತೆ:	
ಜಮೆ ರೂ.	ಖರ್ಚು ರೂ.	ಜಮೆ ರೂ.	ಖರ್ಚು ರೂ.
೨೫ ಕೀ. ಪಾ. ೫ ತಾ. ೫—೧೦—೪೪	೫೦ ಕೀ. ಪಾ. ತಾ. ೫—೪—೪೪	೩ ಕೀ. ಪಾ. ೫ ತಾ. ೫—೧೦—೪೪	೪ ಕೀ. ಪಾ. ತಾ. ೫—೬—೪೪
೨೫ ಕೀ. ತೋ. ವಿ. ತಾ. ೫-೧೦-೪೪		೧ ತೋ. ವಿ. ತಾ. ೫-೧೦-೪೪	
೫೦	೫೦	೪	೪

ಅಥಾವೆ.				ಲಾಭಹಾನಿಯ ಖಾತೆ.			
ಜಮೆ	___ ರೂ.	ಖರ್ಚು	___ ರೂ.	ಜಮೆ	___ ರೂ.	ಖರ್ಚು	___ ರೂ.
	೨೫ ನಳಪಟ್ಟಿ				೨೫ ನಳಪಟ್ಟಿ		
	೩ ಕರ್ಮವೀರ ಪತ್ರ				೧ ಕರ್ಮವೀರ ಪತ್ರ		

೫. **ಕೊಡತಕ್ಕ ಚಿಲ್ಲರ ರಕಮು:—** ಅಥಾವೆಯ ಕಾಲಕ್ಕೆ ಕೆಲ ಕೆಲವು ರಕಮುಗಳನ್ನು ಕೊಡುವದು ಸರ್ವಸಾಧಾರಣವಾದ ಮಾತು. ಆದದರಿಂದ ಆಯಾ ಬಾಬಿನ ಖಾತೆಗಳಿಗೆ ಕೊಡತಕ್ಕ ರಕಮುಗಳನ್ನು ಏರಿಸದಿದ್ದರೆ ಆ ಅವಧಿಯ ಲಾಭಹಾನಿಯ ಖಾತೆಯ ಬಾಕಿಯು ನಿಜವಾದ ಲಾಭಕ್ಕಿಂತ ಹೆಚ್ಚು ಲಾಭವನ್ನು ತೋರಿಸುವದು.

ಉದಾಹರಣಾರ್ಥ:— ಮನೆಯ ಪಟ್ಟಿ, ಪಗಾರ, ಬಾಡಿಗೆ ಮೊದಲಾದ ಬಾಬಿನ ಸಂಬಂಧದ ಸಣ್ಣ ಸಣ್ಣ ರಕಮುಗಳನ್ನು ಕೊಡುವದು ಉಳಿದಿರುತ್ತದೆ ಇಂಥ ವ್ಯವಹಾರದಿಂದ ಶಿಲಕಿನಲ್ಲಿ ಹೆಚ್ಚುಕಡಿಮೆಯಾಗುವದಿಲ್ಲ. ಆದುದರಿಂದ ಇವುಗಳ ರಕಮುಗಳು ಪರಭಾರೆ ಇರುತ್ತವೆ. ಇವುಗಳ ಜಮಾಖರ್ಚು ಮಾಡುವ ರೀತಿಗಳು ಎರಡು ಇರುತ್ತವೆ. ಅವು ಯಾವವೆಂದರೆ:

(೧) ಕೊಡತಕ್ಕ ರಕಮುಗಳು ಸಣ್ಣವಿದ್ದು ಬಹಳವಿದ್ದರೆ:— ಚಿಲ್ಲರ ಕೊಡತಕ್ಕವರ (ಚಿ. ಕೊ.) ಖಾತೆಯೆಂದು ಹೊಸ ಖಾತೆಯನ್ನು ಹಾಕಿ, ಯೋಗ್ಯ ಬಾಬಿನ ಖಾತೆಗೆ ಆಯಾ ರಕಮುಗಳನ್ನು ಖರ್ಚು ಬರೆದು ಆ ರಕಮನ್ನು ಚಿ ಕೊ. ಖಾತೆಗೆ ಜಮೆ ಮಾಡಬೇಕು. ಈ ಖಾತೆಯ ಬಾಕಿಯು ಪಕ್ಕಾ ಇರುವದರಿಂದ ಅದನ್ನು ಅಥಾವೆಗೆ ಎತ್ತಬೇಕು.

ಉದಾ :— (೫) ತಾ. ೩-೭-೪೪ ನೆಯ ದಿವಸ ನೂಲವಿ ನಾಗಪ್ಪನ ಕೀರ್ದಿಯಲ್ಲಿ ಮ್ಯುನಸಿಪಾಲಿಟಿ ಕರ, ಪಗಾರ, ಮನೆಯ ಬಾಡಿಗೆ, ಖಾತೆಗಳ ಖರ್ಚಿನ ಬಾಕಿಗಳು ಕ್ರಮವಾಗಿ ೫೦, ೫೦೦, ೬೦ ರೂ. ಇದ್ದವು. ತಾ. ೩೧—೭—೪೪ ಇ. ದಿವಸ ಅಥಾವೆಯ ಕಾಲಕ್ಕೆ ೧೦ ರೂ. ಮ್ಯು. ಕರ, ೧೦೦ ಪಗಾರ, ೧೨ ರೂ. ಬಾಡಿಗೆ ಕೊಡತಕ್ಕದ್ದಿರುತ್ತದೆ. ಇವುಗಳ ಕೀರ್ದಿ ಖತಾವಣಿಗಳನ್ನು ಬರೆದು ತೋಂಡ ಮಿಳವಣಿ ಮಾಡಿರಿ.

ನೂಲವಿ ನಾಗಪ್ಪನ ಕೀರ್ದಿ

ತಾ. ೩೧—೭—೪೪ ಇ.

ಜಮೆ — ರೂ.

೧೨೨ ಚಿಲ್ಲರ ಕೊಡತಕ್ಕವರ ಖಾತೆ:—
ತಪಶೀಲು—
೧೦ ರೂ. ಮ್ಯು. ಪಾ. ಕರ
೧೦೦ ರೂ. ಪಗಾರ
೧೨ ರೂ. ಮನೆಯು ಬಾಡಿಗೆ

೧೨೨ ರೂ. ಆಯಾ ಖಾತೆಗೆ ಖರ್ಚು
ಖಾ. ಪಾ.

೬೦ ಮ್ಯು. ಪಾ. ಕರದ ಖಾತೆ:— ತೋಂಡ ಮಿಳವಣಿ ಲಾಭಹಾನಿ ಖಾತೆಗೆ ಖರ್ಚು
ಖಾ. ಪಾ.

೬೦೦ ಪಗಾರ ಖಾತೆ :— ತೋಂಡಮಿಳವಣಿ ಲಾಭಹಾನಿ ಖಾತೆಗೆ ಖರ್ಚು
ಖಾ. ಪಾ.

೭೨ ಮನೆಯು ಬಾಡಿಗೆ ಖಾತೆ :— ತೋಂಡ ಮಿಳವಣಿ ಲಾಭಹಾನಿ ಖಾತೆಗೆ ಖರ್ಚು
ಖಾ. ಪಾ.

೧೨೨ ಅಢಾವೆ ಖಾತೆ:— ತೋಂಡಮಿಳವಣಿ. ಚಿಲ್ಲರ ಕೊಡತಕ್ಕವರ ಖಾತೆಗೆ ಖರ್ಚು
ಖಾ. ಪಾ.

ಖರ್ಚು — ರೂ.

೧೦ ಮ್ಯು. ಪಾ. ಕರದ ಖಾತೆ:— ಕೊಡತಕ್ಕ ಕರ ಕೊಟ್ಟಿಲ್ಲವಾದ್ದರಿಂದ ಚಿ. ಕೊ. ಖಾತೆಗೆ ಜಮೆ
ಖಾ. ಪಾ.

೧೦೦ ಪಗಾರ ಖಾತೆ:— ಕೊಡತಕ್ಕ ಪಗಾರ ಕೊಟ್ಟಿಲ್ಲವಾದ್ದರಿಂದ ಚಿ. ಕೊ. ಖಾತೆಗೆ ಜಮೆ
ಖಾ. ಪಾ.

೧೨ ಮನೆಯು ಬಾಡಿಗೆ ಖಾತೆ:- ಕೊಡತಕ್ಕ ಬಾಡಿಗೆಯನ್ನು ಕೊಟ್ಟಿಲ್ಲವಾದ್ದರಿಂದ ಚಿ. ಕೊ, ಖಾತೆಗೆ ಜಮೆ
ಖಾ. ಪಾ.

೭೩೨ ಲಾಭಹಾನಿ ಖಾತೆ:— ತೋಂಡ ಮಿಳವಣಿ ತಪಶೀಲು :—
೬೦ ರೂ. ಮ್ಯು. ಪಾ. ಕರ
೬೦೦ ರೂ. ಪಗಾರ
೭೨ ರೂ. ಮನೆಯು ಬಾಡಿಗೆ

೭೩೨ ರೂ. ಆಯಾ ಖಾತೆಗೆ ಜಮೆ
ಖಾ. ಪಾ.

೧೨೨ ಚಿಲ್ಲರ ಕೊಡತಕ್ಕವರ ಖಾತೆ— ತೋಂಡಮಿಳವಣಿ ಅಢಾವೆ ಜಮೆ
ಖಾ. ಪಾ.

ಖತಾವಣಿ

ಮನೆಯ ಬಾಡಿಗೆಯ ಖಾತೆ

ಜಮೆ——ರೂ.	ಖರ್ಚು——ರೂ.
೭೨ ತೊ. ಮಿ. ತಾ. ೩೧-೭.೪೪	೬೦ ಕೀ. ಪಾ. ೧ ತಾ. ೩-೭-೪೪
	೧೨ ಕೀ. ಪಾ. ೧ ತಾ. ೩೧-೭.೪೪
೭೨	೭೨

ಚಿಲ್ಲರ ಕೊಡತಕ್ಕವರ ಖಾತೆ

ಜಮೆ——ರೂ.	ಖರ್ಚು——ರೂ.
೧೨೨ ಕಿ. ಪಾ. ೧ ೩೧-೭.೪೪	೧೨೨ ತೊ. ಮಿ. ತಾ. ೩೧.೭.೪೪
೧೨೨	೧೨೨

ಲಾಭಹಾನಿಯ ಖಾತೆ

ಜಮೆ——ರೂ.	ಖರ್ಚು——ರೂ.
	೬೦ ಮ್ಯು. ಪಾ. ಕರ
	೬೦೦ ಪಗಾರ
	೭೨ ಬಾಡಿಗೆ

ಅಢಾವೆ

ಜಮೆ ರೂ.	ಖರ್ಚು——ರೂ.
೧೨೨ ಚಿ. ಕೊ. ಖಾತೆ	

ಮ್ಯು. ಪಾ. ಕರದ ಖಾತೆ

ಜಮೆ——ರೂ.	ಖರ್ಚು——ರೂ.
೬೦ ತೊ. ಮಿ. ತಾ. ೩೧-೭.೪೪	೫೦ ಕೀ. ಪಾ. ೩.೭.೪೪
	೧೦ ಕೀ. ಪಾ. ೩.೭.೪೪
೬೦	೬೦

ಪಗಾರ ಖಾತೆ

ಜಮೆ——ರೂ.	ಖರ್ಚು——ರೂ.
೬೦೦ ತೊ. ಮಿ. ತಾ. ೩೦-೭-೪೪	೫೦೦ ಕೀ. ಪಾ. ೧ ೩-೭.೪೪
	೧೦೦ ಕೀ. ಪಾ. ೩೧-೭-೪೪
೬೦೦	೬೦೦

ಇಲ್ಲಿ ಕೊಟ್ಟ ಮತ್ತು ಕೊಡತಕ್ಕ ರಕಮುಗಳು ಲಾಭಹಾನಿಯ ಖಾತೆಗೆ ಖರ್ಚು ಬೀಳುತ್ತವೆ. ಕೊಡತಕ್ಕ ರಕಮುಗಳನ್ನು ಮಾತ್ರ ಚಿ. ಕೊ ಖಾತೆಗೆ ಜಮೆ ಮಾಡಬೇಕು. ಮುಂದೆ ಹೊಸದಾಗಿ ಖತಾವಣಿಯನ್ನು ಬರೆಯುವಾಗ ಕೊಡತಕ್ಕ ರಕಮನ್ನು ಯೋಗ್ಯ ಖಾತೆಗೆ ಜಮೆ ಮಾಡಿ, ರಕಮನ್ನು ಕೊಟ್ಟ ಬಳಿಕ ಅದೇ ಖಾತೆಗೆ ಖರ್ಚು ಬರೆಯಬೇಕು.

೨ನೆಯ ರೀತಿ:— ೧೦, ೧೦೦, ೧೩ ರೂ. ಗಳನ್ನು ಕ್ರಮವಾಗಿ ಮ್ಯು. ಪಾ. ಪಗಾರ, ಬಾಡಿಗೆ ಖಾತೆಗಳಿಗೆ ಖರ್ಚು ಬರೆದು ಒಮ್ಮೆಲೆ ಅಢಾವೆಗೆ ಜಮೆ ಮಾಡಬೇಕು; ಮುಂದೆ ಬಾಬಿನ ಖಾತೆಯಂತೆ ಬಾಯಿ ಗೂಡಿಸಬೇಕು.

ಕೀರ್ದಿಯನ್ನು ಹಿಂದಿನಂತೆಯೇ ಬರೆಯತಕ್ಕದ್ದು.

ಖತಾವಣಿ

ಮ್ಯು. ಪಾ. ಕರದ ಖಾತೆ

ಜಮೆ — ರೂ.	ಖರ್ಚು — ರೂ.
೬೦ ತೆರೀ. ವಿ. ತಾ. ೩೧-೭-೪೪	೫೦ ಕೀ. ಪಾ. ೧ ೩-೭-೪೪
	೧೦ ಕೀ. ಪಾ. ೩೧-೪೪-೪೪
೬೦	೬೦

ಪಗಾರ ಖಾತೆ

ಜಮೆ — ರೂ.	ಖರ್ಚು — ರೂ.
೬೦೦ ತೆರೀ. ವಿ. ೩೧-೭-೪೪	೫೦೦ ಕೀ. ಪಾ. ೩-೭-೪೪
	೧೦೦ ಕೀ. ಪಾ. ೩೧-೭-೪೪
೬೦೦	೬೦೦

ಮನೆಯ ಬಾಡಿಗೆಯ ಖಾತೆ

ಜಮೆ ರೂ.	ಖರ್ಚು ರೂ
೭೩ ತೆರೀ. ವಿ. ತಾ. ೩ -೭-೪೪	೬೦ ಕೀ. ಪಾ. ೧ ತಾ. ೩-೭-೪೪
	೧೩ ಕೀ. ಪಾ. ತಾ. ೩೧-೭-೪೪
೭೩	೭೩

ಕೀರ್ದಿಯನ್ನು ಹಿಂದಿನಂತೆಯೇ ಬರೆಯತಕ್ಕದ್ದು

ಖತಾವಣಿ

ಅಢಾವೆ

ತಾ. ೩೧—೭—೪೪

ಜಮೆ — ರೂ.	ಖರ್ಚು — ರೂ.
೧೦ ಮ್ಯು. ಪಾಲಿಟಿ ಕರ	
೧೦೦ ಪಗಾರ	
೧೩ ಮನೆ ಬಾಡಿಗೆ	

ಲಾಭಹಾನಿಯ ಖಾತೆ

೩—೭—೪೪ ರಿಂದ ೩೧—೭—೪೪ ವರೆಗೆ

ಜಮೆ — ರೂ.	ಖರ್ಚು — ರೂ.
	೬೦ ಮ್ಯು. ಪಾ. ಕರ
	೬೦೦ ಪಗಾರ
	೭೩ ಮನೆ ಬಾಡಿಗೆ

೬. ಬಾಡ ಖಾತೆ:— ಸಾಲಗಾರರು ಬಹಳ ಜನರಿದ್ದರೆ ಯಾವ ದಾದರೊಂದು ಕಾರಣದಿಂದ ಬರತಕ್ಕ ಹಣದಲ್ಲಿ ಕೆಲವಾದರೂ ಮುಳುಗು ವದು ನಿಜವಾಗಿ ಮುಳುಗಿದಷ್ಟು ರಕಮನ್ನು ಖರ್ಚು ಬರೆಯುವ ಖಾತೆಗೆ

ಬಾದಖಾತೆ ಅನ್ನುವರು. ಮುಳುಗಿದ ರಕಮುಗಳು ಪರಭಾರೆ ಇದ್ದದರಿಂದ ಯೋಗ್ಯ ಇಸಮಿನ ಖಾತೆಗೆ ಜಮೆ ಬರೆದು ಬಾದಖಾತೆಗೆ ಖರ್ಚು ಬರೆಯುಬೇಕು.

ಮುಂದೆ ಎಂದಾದರೂ ಖಟ್ಟ ಬಾಕಿಯು ಬಂದರೆ ಅದನ್ನು ಬಾದ ಖಾತೆಗೆ ಜಮೆ ಮಾಡಬೇಕು. ಇಸಮಿನ ಖಾತೆಗೆ ಜಮೆ ಮಾಡಬಾರದು. ಯಾಕೆಂದರೆ ಈ ರಕಮು ಮೊದಲು ಬಾದ ಖಾತೆಗೆ ಖರ್ಚು ಬಿದ್ದದರಿಂದ ಯಾರಿಗೂ ಎಂದೂ ಕೊಡತಕ್ಕದ್ದಿರುವದಿಲ್ಲ.

ಕೆಲವು ಸಾಲ ಬರುವದು ಸಂಶಯುವಿರುವದು; ಇವುಗಳ ಜಮಾಖರ್ಚು ಮಾಡುವ ರೀತಿಗಳು ಎರಡು; ಯಾವವೆಂದರೆ:—

೧ನೆಯ ರೀತಿಯು:— ಪ್ರತಿಯೊಂದು ಸಾಲದ ಮೇಲೆ ಕೆಲವೊಂದು ರಕಮನ್ನು ಕಾದಿಡುವದು.

ಇಂಥ ಸಾಲಗಳು ಬಹಳವಿದ್ದರೆ, ಸಣ್ಣ ರಕಮುಗಳು ಇದ್ದರೆ, ಪ್ರತಿಯೊಂದು ಸಂಶಯುಯುಕ್ತ ಸಾಲದ ಮೇಲೆ ಕೆಲವೊಂದು ರಕಮು ತೆಗೆದಿಟ್ಟು ಇವುಗಳ ರಕಮನ್ನು ಸಂಶಯುಯುಕ್ತ ಬಾದ ಖಾತೆಗೆ ಜಮೆ ಮಾಡಿ ಬಾದ ಖಾತೆಗೆ ಖರ್ಚು ಬರೆಯುಬೇಕು.

ಉದಾ:— (೬) ಆ ಸಿಗೆ ತಾ. ೧೦-೯-೪೪ನೆಯು ದಿವಸ ನೇಕಾರ ಶಾಚಪ್ಪನು ಕೊಡತಕ್ಕ ೬೦೦ ರೂಪಾಯಿಗಳಲ್ಲಿ ೧ ರೂ. ಗೆ ೪ ಆಣೆಯಂತೆ ಬಾದ ಆಗಬಹುದು. ಮಠದ ಸಂಗಯ್ಯನು ೧೬೦೦ ರೂ. ಕೊಡತಕ್ಕದ್ದಿದ್ದು ಅದರಲ್ಲಿ ೧ ರೂ. ಗೆ ೨ ಆಣೆಯಂತೆ ಬಾದ ಆಗಬಹುದು. ಇವುಗಳ ಜಮಾಖರ್ಚು ಬರೆದು ತೋಂಡಮಿಳವಣ ಮಾಡಿರಿ.

ಆ ನ ಕೀರ್ದಿ ತಾ. ೧೦—೯—೪೪ನೇ ಇ.

ಜಮೆ ರೂ.		ಖರ್ಚು ರೂ.	
೩೫೦	ಸಂಶಯುಯುಕ್ತ ಬಾದ ಖಾತೆ:— ತಪಶೀಲು— ೧೫೦ ರೂ. ನೇಕಾರ ಶಾಚಪ್ಪ ೨೦೦ ರೂ. ಮಠದ ಸಂಗಯ್ಯ ೩೫೦ ರೂ. ರೂ. ಬಾದ ಕಾದಿಟ್ಟದ್ದರಿಂದ ಬಾದಖಾತೆಗೆ ಖರ್ಚು ಖಾ. ಪಾ.	೫೦	ಬಾದ ಖಾತೆ:—ಸಂಶಯುಯುಕ್ತ ಬಾದ ಖಾತೆಗೆ ಜಮೆ. ಖಾ. ಪಾ.

ಖತಾವಣಿ

ಸಂಶಯಯುಕ್ತ ಬಾದ ಖಾತೆ.		ಬಾದ ಖಾತೆ.	
ಜಮೆ—ರೂ	ಖರ್ಚು—ರೂ.	ಜಮೆ—ರೂ.	ಖರ್ಚು—ರೂ.
೩೫೦ ಕೀ. ಪಾ. ತಾ. ೧೦-೯-೪೪	೩೫೦ ತೋ. ನಿ. ೧೦-೯-೪೪	೩೫೦ ತೋ. ನಿ. ತಾ. ೧೦-೯-೪೪	೩೫೦ ಕೀ. ಪಾ. ೧೦-೯-೪೪
೩೫೦	೩೫೦	೩೫೦	೩೫೦

ಲಾಭಹಾನಿಯ ಖಾತೆ

ಜಮೆ—ರೂ.	ಖರ್ಚು—ರೂ.
	೩೫೦ ಬಾದ ಖಾತೆ.

ಕೀರ್ದಿ ತಾ. ೧೦—೯—೪೪

ಜಮೆ—ರೂ.	ಖರ್ಚು—ರೂ.
೩೫೦ ಅಧಾವೆ ಖಾತೆ:— ತೋಂಡನಿಳವಣಿ ಸಂಶಯಯುಕ್ತ ಬಾದ ಖಾತೆಗೆ ಖರ್ಚು ಖಾ. ಪಾ.	೩೫೦ ಸಂಶಯಯುಕ್ತ ಬಾದ ಖಾತೆ— ತೋಂಡನಿಳವಣಿ ಅಧಾವೆಗೆ ಜಮೆ ಖಾ. ಪಾ.
೩೫೦ ಬಾದ ಖಾತೆ:— ತೋಂಡನಿಳವಣಿ ಲಾಭಹಾನಿ ಖಾತೆಗೆ ಖರ್ಚು ಖಾ. ಪಾ.	೩೫೦ ಲಾಭಹಾನಿಯ ಖಾತೆ:-ತೋಂಡನಿಳವಣಿ ಬಾದ ಖಾತೆಗೆ ಜಮೆ ಖಾ. ಪಾ.

ತೋಂಡನಿಳವಣಿಯ ಕಾಲಕ್ಕೆ ಸಂಶಯಯುಕ್ತ ಬಾದ ಖಾತೆಯ ಬಾಕಿಯು ಪಕ್ಕಾ ಇರುವದು. ಅದನ್ನು ಅಧಾವೆಗೆ ಒಯ್ಯುವ ರೀತಿಗಳು ಎರಡು ಇರುವವು;

೧ನೆಯ ರೀತಿ:

ಆಧಾವೆಯ ಖಾತೆ.

ಜಮೆ—ರೂ.	ಖರ್ಚು—ರೂ.
೩೫೦ ಸ. ಬಾದಖಾತೆ (ಕಾದಿಟ್ಟದ್ದು)	೨೨೦೦ ಸಾಲ

೨ನೆಯ ರೀತಿ:

ಆಧಾವೆಯ ಖಾತೆ.

ಜಮೆ—ರೂ.	ಖರ್ಚು—ರೂ.
	೧೮೫೦ ಸಾಲ ತಪಶೀಲ ೬೦೦ ರಾಚಪ್ಪ ೧೬೦೦ ಸಂಗಯ್ಯ ೨೨೦೦ ಸಾಲ ೩೫೦ ಬಾದ (ಕಾದಿಟ್ಟದ್ದು) ೧೮೫೦ ರೂ.

೨ನೆಯ ರೀತಿಯು:— ಒಟ್ಟು ಸಾಲದ ಮೇಲೆ ೧೦೦ಕ್ಕೆ ಇಂತಿಷ್ಟು ಎಂದು ತೆಗೆದಿಡುವದು. ಹಿಂದಿನ ವರ್ಷ ಕಾದಿಟ್ಟ ರಕಮನ್ನು ಮೊದಲು ಸಂಶಯಯುಕ್ತ ಬಾದ ಖಾತೆಗೆ ಜಮೆ ಮಾಡಿ ಬಾದ ಆದ ಸಾಲದ ರಕಮನ್ನು ಸಂ. ಬಾದ ಖಾತೆಗೆ ಖರ್ಚು ಬರೆಯಬೇಕು. ತೋಂಡಮಿಳವಣಿಯ ಕಾಲಕ್ಕೆ ಮುಂದಿನ ವರ್ಷದ ಸಲುವಾಗಿ ಬೇಕಾಗುವಷ್ಟು ರಕಮನ್ನು ಇದೇ ಖಾತೆಗೆ ಬರೆದು ಅಥಾವೆಗೆ ಜಮೆ ಮಾಡಬೇಕು. ಈ ಖಾತೆಯ ಬಾಕಿ (ಬಾದ ಖಾತೆಯ ಬಾಕಿ) ಯನ್ನಾದರೂ ಬಾಬಿನ ಖಾತೆಯ ಬಾಕಿಯಂತೆ ಲಾಭಹಾನಿಯ ಖಾತೆಗೆ ಒಯ್ಯಬೇಕು.

ಉದಾ:— (೭) ತಾ. ೧—೪—೪೪ ಮತ್ತು ತಾ. ೩೧—೩—೪೫ ಇ. ದಿವಸ ಅ ನ ಸಾಲಗಾರರು ಕೊಡತಕ್ಕ ರಕಮುಗಳು ಕ್ರಮವಾಗಿ ೫೦,೦೦೦ ಮತ್ತು ೬೦,೦೦೦ ರೂ. ಇರುವವು. ಆವನು ೧೦೦ಕ್ಕೆ ೫ ರಂತೆ ಸಾಲದ ಮೇಲೆ ಸಂ. ಬಾದ ಖಾತೆಗೆ ತೆಗೆದಿಟ್ಟಿದ್ದಾನೆ. ಮತ್ತು ಅದೇ ವರ್ಷವೇ ೧,೦೦೦ ರೂ. ಗಳು ಮುಳುಗಿರುತ್ತವೆ. ಸಂ. ಬಾದ ಖಾತೆಯನ್ನು ಬರೆದು ತೋಂಡಮಿಳವಣಿಯನ್ನು ಮಾಡಿರಿ.

ಇಲ್ಲಿ ಹಿಂದಿನ ವರ್ಷದ ಸಾಲದ ಸಂಬಂಧ ೧೦೦ಕ್ಕೆ ೫ ರಂತೆ ೫೦,೦೦೦ ರೂ. ಸಾಲದ ಮೇಲೆ ೨,೫೦೦ ರೂ. ಕಾದಿಟ್ಟಿದ್ದಾರೆ. ಆದ್ದರಿಂದ ತಾ. ೧—೪—೪೪ ಇ. ಸಂಬಂಧ ಸಂ. ಬಾದ ಖಾತೆಯ ಜಮೆಯ ಬಾಕಿಯು ೨,೫೦೦ ರೂ. ಆಯಿತು. ಇನ್ನು ನಡೆದ ವರ್ಷದಲ್ಲಿ ೧೦೦೦ ರೂ. ಬಾದ ಆಗಿದೆ. ಅದರಿಂದ ೧೦೦೦ ರೂ. ಇದೇ ಖಾತೆಗೆ ಖರ್ಚು ಬರೆದು ಯೋಗ್ಯ ಖಾತೆಗಳಿಗೆ ಜಮೆ ಮಾಡಬೇಕು. ಇಲ್ಲಿ ಅವು ಬ, ಕ, ಡ, ಖಾತೆಗಳೆಂದು ಭಾವಿಸಿದೆ. ತಾ. ೩೧—೩—೪೫ ಇಸವಿಗೆ (ವರ್ಷಾಂತ್ಯಕ್ಕೆ) ೬೦,೦೦೦ ರೂ. ಸಾಲದ ಮೇಲೆ ೧೦೦ಕ್ಕೆ ೫ ರಂತೆ ೩,೦೦೦ ರೂ. ಕಾದಿಡಬೇಕಾಗಿದೆ. ಈ ರಕಮು ಪರಭಾರೆ ಇದ್ದದರಿಂದ ಸಂ. ಬಾದ ಖಾತೆಗೆ ಖರ್ಚು, ಅಥಾವೆಯ (ಸಾಲಗಾರರ) ಖಾತೆಗೆ ಜಮೆ ಬರೆಯಬೇಕು. ಮುಂದೆ ಸಂಯುಕ್ತ ಬಾದ ಖಾತೆಯನ್ನು ಬಾಬಿನ ಖಾತೆಯಂತೆ ಬಾಯಿಗೂಡಿಸಬೇಕು. ಅಂದರೆ ಸಂ. ಬಾದ ಖಾತೆಯ ಖರ್ಚಿನ ಕಡೆಗೆ ೪,೦೦೦ ರೂ. ಜಮೆಯ ಕಡೆಗೆ ೨,೫೦೦ ರೂ. ಸಂ. ಬಾದ ಖಾತೆಗೆ ಜಮೆ, ಲಾಭಹಾನಿಯ ಖಾತೆಗೆ ಖರ್ಚು ಬರೆಯಬೇಕು. ಅಂದರೆ ಈ ವರ್ಷ ೧೫೦೦ ರೂ. ಕಾದಿಡಬೇಕಾಯಿತು.

ಕೀರ್ದಿ ತಾ. ೩೧—೩—೪೫

ಜಮೆ ರೂ.	ಖರ್ಚು ರೂ.
೧೦೦೦ ಬ, ಕ, ಡ, ಖಾತೆ:-ಮುಳುಗಿದ್ದರಿಂದ ಸಂ. ಬಾದ ಖಾತೆಗೆ ಖರ್ಚು ಖಾ. ಪಾ.	೧೦೦೦ ಸಂಶಯಯುಕ್ತ ಬಾದಖಾತೆ:- ಬ, ಕ, ಡ, ಖಾತೆಗಳಿಗೆ ಜಮೆ ಖಾ. ಪಾ.

೩೦೦೦ ಅಧಾವೆಯ ಖಾತೆ:-ಕಾದಿಟ್ಟದ್ದರಿಂದ ಸಂ. ಬಾದ ಖಾತೆಗೆ ಖರ್ಚು ಖಾ. ಪಾ.	೩೦೦೦ ಸಂಶಯಯುಕ್ತ ಬಾದ ಖಾತೆ-ಸಂಶಯಯುಕ್ತ ಸಾಲದ ಮೇಲೆ ಕಾದಿಟ್ಟದ್ದು ಅಧಾವೆಗೆ ಜಮೆ ಖಾ. ಪಾ.
೧೫೦೦ ಸಂಶಯಯುಕ್ತ ಬಾದ ಖಾತೆ-ತೋಂಡ ನಿಳವಣಿ ಲಾಭಹಾನಿಯ ಖಾತೆಗೆ ಖರ್ಚು ಖಾ. ಪಾ.	೧೫೦೦ ಲಾಭಹಾನಿಯ ಖಾತೆ:—ತೋಂಡ ನಿಳವಣಿ ಸಂ. ಬಾದ ಖಾತೆಗೆ ಜಮೆ ಖಾ. ಪಾ.

ಖತಾವಣಿ

ಸಂಶಯಯುಕ್ತ ಬಾದ ಖಾತೆ

ಜಮೆ ರೂ.	ಖರ್ಚು ರೂ.
೨೫೦೦ (ಹಿಂದಿನ ಬಾಕಿ) ಕೀ. ಪಾ. ತಾ.	೧೦೦೦ ಕೀ. ಪಾ. ತಾ. ೩೧-೩-೪೫
೧೫೦೦ ತೋ. ನಿ. ತಾ. ೩೧-೩-೪೫	೩೦೦೦ ಕೀ. ಪಾ. ತಾ. ೩೧-೩-೪೫
೪೦೦೦	೪೦೦೦

ಅಧಾವೆ ಖಾತೆ ತಾ. ೩೧—೩—೪೫		ಅಧಾವೆ ಖಾತೆ ತಾ. ೩೧—೩—೪೫	
ಜಮೆ — ರೂ.	ಖರ್ಚು — ರೂ.	ಜಮೆ — ರೂ.	ಖರ್ಚು — ರೂ.
೩೦೦೦ ಸಂ. ಬಾದ ಖಾತೆ	೬೦,೦೦೦ ಸಾಲಗಾರರು		೬೦,೦೦೦ ಸಾಲಗಾರರು ೩೦೦೦ ಕಾದಿಟ್ಟದ್ದು ೫೭,೦೦೦ ರೂ.

ಲಾಭಹಾನಿಯ ಖಾತೆ

ಜಮೆ ರೂ.	ಖರ್ಚು ರೂ.
	೧೫೦೦ ಬಾದ ಖಾತೆ

೩. ಪ್ರಶ್ನೆಗಳು:—

೧. ತಸಲಮಾತ, ಅಮಾನತ ಅಂದರೇನು? ಅವುಗಳಲ್ಲಿ ಭೇದವೇನು?

೨. ಅಮಾನತ ಖಾತೆಯನ್ನು ಹೇಗೆ ಬಾಯಿಗೂಡಿಸಬೇಕೆಂಬದನ್ನು ಹೇಳಿ ಉದಾಹರಣೆಯಿಂದ ಸ್ಪಷ್ಟೀಕರಿಸಿರಿ.

೩. ಹವಾಲಿ ಅಂದರೇನು? ಅದರ ಜಮಾಖರ್ಚನ್ನು ಅದಕ್ಕೆ ಸಂಬಂಧಪಟ್ಟ ಮೂವರಲ್ಲಿ ಹೇಗೆ ಮಾಡಬೇಕು?

೪. ಹವಾಲಿ ರಕಮು ಆಢಾವೆಯು ಕಾಲಕ್ಕೆ ಸಾಲಗಾರನಿಗೆ ಮುಟ್ಟದಿದ್ದರೆ ಹವಾಲಿ ತೆಗೆದುಕೊಂಡವನು ಅದರ ಜಮಾಖರ್ಚು ಹೇಗೆ ಮಾಡುವನು?

೫. ಬರತಕ್ಕ ಚಿಲ್ಲರ ರಕಮಿನ ಜಮಾಖರ್ಚನ್ನು ಆಢಾವೆಯ ಕಾಲಕ್ಕೆ ಹೇಗೆ ಮಾಡುವರು?

೬. ಬಾಧ ಖಾತೆ ಅಂದರೇನು? ಈ ಖಾತೆಯ ಅವಶ್ಯಕತೆ ಏನು?

೭. ಸಂಶಯಯುಕ್ತ ಬಾಧ ಖಾತೆ ಅಂದರೇನು?

೨ನೆಯ ಪ್ರಕರಣ

ಸೂಟ-ಸಂಜಾಯತ-ದಲಾಲಿ

೧. (ಅ) ಸೂಟ. (ಬ) ಕಮಿಶನ್ ಮತ್ತು ವರ್ತಾವಳಿ.
೨. ಸಂಜಾಯತ. ೩. ದಲಾಲಿ. ೪. ಪ್ರಶ್ನಗಳು.

೧. (ಅ) **ಸೂಟ**:— ವ್ಯಾಪಾರಸ್ಥರು ರೋಖು ಖರೀದಿ ಮಾಡಿದವರಿಗೆ ೧೦೦ಕ್ಕೆ ಕೆಲಕೆಲವೊಂದು ರಕಮನ್ನು ಬಿಡುವರು. ಆ ಬಿಡುವ ಹಣಕ್ಕೆ **ಸೂಟ** (ಹಿಡಿತ) ಅನ್ನುವರು.

ಇಂಥ ವ್ಯವಹಾರಗಳ ರಕಮು ಸೂಟ ಕೊಟ್ಟವನಲ್ಲಿ ಸೂಟ ಖಾತೆಗೆ ಖರ್ಚು, ಸೂಟ ಸಿಕ್ಕವನಲ್ಲಿ ಸೂಟ ಖಾತೆಗೆ ಜಮೆ ಮಾಡಬೇಕು. ಈ ಖಾತೆಯನ್ನು ಬಾಬಿನ ಖಾತೆಯಂತೆ ಬಾಯಿಗೂಡಿಸಬೇಕು.

ಉದಾ:— (೧) ತಾ. ೩—೪—೪೫ ಇ. ದಿವಸ ಅನು ಬನ ಅಂಗಡಿಯಲ್ಲಿ ಬೆಲ್ಲ ಹೇರು ೧೫, ದರ ೫೦ ರೂ. ಪ್ರಕಾರ ಕೊಂಡದ್ದರಿಂದ ಅನಿಗೆ ೧೦೦ಕ್ಕೆ ೧೦ ರಂತೆ ಸೂಟ ಸಿಕ್ಕಿತು. ಸೂಟ ಖಾತೆಯನ್ನು ಮಾತ್ರ ಇವರಿಬ್ಬರ ಕೀರ್ದಿ ಖತಾವಣಿಗಳಲ್ಲಿ ಬರೆದು ತಾ. ೭—೪—೪೫ ಇ. ದಿವಸ ಬಾಯಿಗೂಡಿಸಿರಿ.

ಅ ನ ಕೀರ್ದಿ ತಾ. ೩—೪—೧೯೪೫

ಜಮೆ	ರೂ.	ಖರ್ಚು	ರೂ
೭೫ ಸೂಟ ಖಾತೆ:— ಬನಲ್ಲಿ ಗೋದಿ ಹೇರು ದರ ೫೦ ರೂ. ಪ್ರ. ರೋಖು ಕೊಂಡದ್ದರಿಂದ ೧೦೦ಕ್ಕೆ ೧೦ ರಂತೆ ಸೂಟ ಸಿಕ್ಕಿತು. ಖಾ. ಪಾ.			

ಖತಾವಣಿ

ಸೂಟ ಖಾತೆ

ಜಮೆ—ರೂ.	ಖರ್ಚು—ರೂ.
೭೫ ಕೀ. ಪಾ. ೧ ತಾ. ೩-೪-೩೭	೭೫ ತೋ. ನಿ. ೭-೬-೩೭
೭೫	೭೫

ಲಾಭಹಾನಿ ಖಾತೆ

ಜಮೆ—ರೂ.	ಖರ್ಚು—ರೂ.
೭೫ ಸೂಟ ಖಾತೆ	

ಕೀರ್ದಿ

ಜಮೆ ರೂ.	ಖರ್ಚು ರೂ.
೭೫ ಲಾಭಹಾನಿಯು ಖಾತೆ:-ತೋಂಡನಿಳವಣ ಸೂಟ ಖಾತೆಗೆ ಖರ್ಚು ಖಾ. ಪಾ.	೭೫ ಸೂಟ ಖಾತೆ:—ತೋಂಡನಿಳವಣ ಲಾಭಹಾನಿಯು ಖಾತೆಗೆ ಜಮೆ ಖಾ. ಪಾ.

ಬ ನ ಕೀರ್ದಿ ತಾ. ೩—೪—೪೫ ಇ,

ಜಮೆ ರೂ.	ಖರ್ಚು ರೂ.
	೭೫ ಸೂಟ ಖಾತೆ—ಅ ನಿಗೆ ಬೆಲ್ಲ ಹೇರು ೧೫ ದರ ೫೦ ರೂ. ಪ. ರೋಖು ಮಾರಿದ್ದರಿಂದ ೧೦೦ ಕ್ಕೆ ೧೦ ರಂತೆ ಸೂಟ ಕೊಟ್ಟಿತು. ಖಾ. ಪಾ.

ಖತಾವಣಿ

ಸೂಟ ಖಾತೆ

ಜಮೆ—ರೂ.	ಖರ್ಚು—ರೂ.
೭೫ ತೊ. ನಿ. ತಾ. ೭-೪-೪೫	೭೫ ಕೀ. ಪಾ. ೧ ೩-೪-೬೫
೭೫	೭೫

ಲಾಭಹಾನಿಯು ಖಾತೆ

ಜಮೆ ರೂ.	ಖರ್ಚು—ರೂ.

ಕೀರ್ದಿ

ಜಮೆ ರೂ.	ಖರ್ಚು ರೂ.
೭೫ ಸೂಟ ಖಾತೆ—ತೋಂಡನಿಳವಣಿ ಲಾಭಹಾನಿ ಖಾತೆಗೆ ಖರ್ಚು ಖಾ. ಪಾ.	೭೫ ಲಾಭಹಾನಿಯು ಖಾತೆ—ತೋಂಡ ನಿಳವಣಿ ಸೂಟ ಖಾತೆಗೆ ಜಮೆ ಖಾ. ಪಾ.

(ಬ) **ಕಮಿಶನ್ ಮತ್ತು ವರ್ತಾವಳಿ**:— ದೊಡ್ಡ (ಜೀನಸಿನ) ವ್ಯಾಪಾರದಲ್ಲಿ ಬಹಳ ರಕಮಿನ ಜೀನಸು ಮಾರಾಟವಾದರೆ, ಮಾರಿದವನು ಕೊಂಡವನಿಗೆ ಅವನು ಕೊಡತಕ್ಕ ರಕಮಿನಲ್ಲಿ ೧೦೦ ಕ್ಕೆ ಕೆಲವೊಂದು ರಕಮನ್ನು ಬಿಡುವನು. ಈ ಬಿಡುವ ಹಣಕ್ಕೆ **ಕಮಿಶನ್** ಅನ್ನುವರು. ಅಥವಾ ನೂರಕ್ಕೆ (೧೦೦ ಜೀನಸುಗಳಿಗೆ) ಕೆಲವು ಜೀನಸುಗಳನ್ನು ಹೆಚ್ಚು ಕೊಡುವನು. ಆ ಕೊಟ್ಟ ಜೀನಸುಗಳಿಗೆ **ವರ್ತಾವಳಿ** ಅನ್ನುವರು. ಈ ಖಾತೆಯನ್ನು ಬಾಬಿನ ಖಾತೆಯಂತೆ ಬಾಯಿಗೂಡಿಸಬೇಕು.

ಉದಾ—(೨) ತಾ. ೪-೫-೪೪ ಇ. ದಿವಸ ಅ ನು ಬೆಲ್ಲ ಹೇರು ೧೫ ದರ ೪೦ ರೂ. ಪ್ರ. ಕೊಂಡನು. ೧೦೦ ಕ್ಕೆ ೫ ರಂತೆ ಕಮಿಶನ್ ಸಿಕ್ಕಿತು. ತಾ. ೩೧-೧೨-೪೪ ಇ. ದಿವಸ ತೋಂಡಮಿಳವಣೆ ಮಾಡಿರಿ.

ಆ ನ ಕೀರ್ದಿ ತಾ. ೪—೫—೪೪ ಇ.

ಜಮೆ ರೂ.		ಖರ್ಚು ರೂ.	
೩೦	ಕಮಿಶನ್ ಖಾತೆ:—ಬಲಕ್ಕೆ ಬರೆದಂತೆ ಬೆಲ್ಲ ಖರೀದಿ ಮಾಡಿದಾಗ ಕಮಿಶನ್ ಬಂದದ್ದು. ಖಾ. ಪಾ.	೬೦೦	ಬೆಲ್ಲದ ಖಾತೆ:—ಬೆಲ್ಲ ಹೇರು ೧೫ ದರ ೪೦ ರೂ. ಪ್ರ. ರೋಖ ಖರೀದಿ ಮಾಡಿತು. (೧೦೦ಕ್ಕೆ ೫ ರಂತೆ) ೩೦ ರೂ. ಕಮಿಶನ್ ಸಿಕ್ಕದ್ದರಿಂದ ಆ ಖಾತೆಗೆ ಜಮೆ ಖಾ. ಪಾ.

ಖತಾವಣಿ

ಕಮಿಶನ್ ಖಾತೆ

ಜಮೆ—ರೂ.		ಖರ್ಚು—ರೂ.	
೩೦	ಕೀ. ಪಾ. ತಾ. ೪-೫-೪೪	೩೦	ತೋ. ಮಿ. ೩೧-೧೨-೪೪
೩೦		೩೦	

ಬೆಲ್ಲದ ಖಾತೆ

ಜಮೆ—ರೂ.		ಖರ್ಚು—ರೂ.	
		೬೦೦	ಕೀ. ಪಾ. ತಾ. ೪-೫-೪೪

ಕೀರ್ದಿ ತಾ. ೩—೧೨—೪೪

ಜಮೆ ರೂ.		ಖರ್ಚು ರೂ.	
೩೦	ಲಾಭಹಾನಿಯ ಖಾತೆ—ತೋಂಡಮಿಳವಣೆ ಕಮಿಶನ್ ಖಾತೆಗೆ ಖರ್ಚು ಖಾ. ಪಾ.	೩೦	ಕಮಿಶನ್ ಖಾತೆ:— ತೋಂಡಮಿಳವಣೆ ಲಾಭಹಾನಿ ಖಾತೆಗೆ ಜಮೆ ಖಾ. ಪಾ.

ಖತಾವಣಿ

ಲಾಭಹಾನಿಯ ಖಾತೆ

ತಾ. ೪—೫—೪೪ ರಿಂದ ೩೧—೧೨—೪೪ ರ ವರೆಗೆ

ಜಮೆ	ರೂ.	ಖರ್ಚು	ರೂ.
		೩೦ ಕಮಿಶನ್	

ಉದಾ:— (೩) ತಾ. ೮—೧೦—೪೪ ನೇ ಇ. ದಿವಸ ಆ ನ ಕೋಟಿನ ಅರಿವೆ ವಾರ ೧೦೦, ದರ ೮ ರೂ. ಪ್ರ. ರೋಖು ಕೊಂಡದ್ದರಿಂದ ೧೦ ವಾರ ಅರಿವೆಯನ್ನು ಹೆಚ್ಚು ಕೊಟ್ಟರು. ತಾ. ೩೧—೧೨—೪೪ ಇ. ದಿವಸ ತೋಂಡಮಿಳವಣಿ ಮಾಡಿರಿ

ಆ ನ ಕೀರ್ದಿ ತಾ. ೮—೧೦—೪೪

ಜಮೆ	ರೂ.	ಖರ್ಚು	ರೂ.
೮೦ ವರ್ತಾವಳಿ ಖಾತೆ:— ಕೋಟಿನ ಅರಿವೆ ವಾರ ೧೦೦ ದರ ೮ ರೂ. ಪ್ರ. ಕೊಂಡದ್ದರಿಂದ ೧೦ ವಾರ ಅರಿವೆ ಹೆಚ್ಚಿಗೆ ಬಂದದ್ದು. ಖಾ. ಪಾ.		೮೮೦ ಕೋಟಿನ ಅರಿವೆ ಖಾತೆ:—	
		೮೦೦ ಕೋಟಿನ ಅರಿವೆ ವಾರ ೧೦೦ ದರ ೮ ರೂ. ಪ್ರ. ಕೊಂಡದ್ದರಿಂದ	
		೮೦ ರೂ. ೧೦ ವಾರ ಅರಿವೆ ವರ್ತಾವಳಿ ಬಂದದ್ದು. ಆ ಖಾತೆಗೆ ಜಮೆ	
		೮೮೦	

ಖತಾವಣಿ

ವರ್ತಾವಳಿ ಖಾತೆ

ಜಮೆ—ರೂ.	ಖರ್ಚು—ರೂ.
೮೦ ಕೀ. ಪಾ. ತಾ. ೮-೧೦-೪೪	೮೦ ತೋ. ಮಿ. ೩೧-೧೨-೪೪
೮೦	೮೦

ಕೋಟಿನ ಅರಿವೆ ಖಾತೆ

ಮೆ—ರೂ.	ಖರ್ಚು—ರೂ.
	೮೮೦ ಕೀ. ಪಾ. ತಾ. ೮-೧೦-೪೪

ಕೇರ್ದಿ ತಾ. ೩೧—೧೨—೪೪

ಜಮೆ	ರೂ.	ಖರ್ಚು	ರೂ.
೮೦ ಲಾಭಹಾನಿಯ ಖಾತೆ—ತೋಂಡ ಮಿಳವಣಿ ವರ್ತಾವಳಿ ಖಾತೆಗೆ ಖರ್ಚು ಖಾ. ಪಾ.		೮೦ ವರ್ತಾವಳಿ ಖಾತೆ—ತೋಂಡಮಿಳ ವಣಿ ಲಾಭಹಾನಿ ಖಾತೆಗೆ ಜಮೆ ಖಾ. ಪಾ.	

ಲಾಭಹಾನಿಯ ಖಾತೆ

ಜಮೆ	ರೂ.	ಖರ್ಚು	ರೂ.
೮೦ ವರ್ತಾವಳಿ			

೨. **ಸಂಜಾಯತ:**— ಒಬ್ಬ ವ್ಯಾಪಾರಸ್ಥನು ಮತ್ತೊಬ್ಬನಲ್ಲಿ ಜೀನಸನ್ನು ಕೊಳ್ಳುವಾಗ ಕೆಲವೊಂದು ಮುದ್ದತಿನೊಳಗೆ ಮಾರಿದಷ್ಟು ಜೀನಸಿನ ಬೆಲೆಯನ್ನೂ ಶಿಲಕುಳಿದ ಜೀನಸನ್ನೂ ತಿರುಗಿ ಕೊಡುವೆನೆಂದು ಮಾಡಿದ ಕರಾರಿಗೆ **ಸಂಜಾಯತ** ಅನ್ನುವರು.

ಈ ಕರಾರಿನಿಂದ ಮಾಡಿದ ವ್ಯವಹಾರಗಳ ಜಮಾಖರ್ಚು ಜೀನಸು ಮಾರಿದವನಲ್ಲಿ ಹೀಗೆ ಮಾಡಬೇಕು :—

ಸಂಜಾಯತ ಕರಾರಿನಿಂಡ ಮಾಲನ್ನು ಕೊಟ್ಟರೆ, ಅದು ಮಾರಾಟ ವಾಗದಿದ್ದರೂ, ಮಾರಾಟವಾಗಿದೆಯೆಂದು ತಿಳಿಯಬೇಕು. ಇಂಥ ವ್ಯವಹಾರಗಳ ರಕಮು ಪರಭಾರೆ ಇರುತ್ತದೆ. ಮೊದಲು ಜೀನಸಿನ ಖಾತೆಗೆ ಅದರ ಬೆಲೆಯನ್ನು ಜಮೆ ಹಿಡಿದು, ಅಷ್ಟೇ ರಕಮನ್ನು ತೆಗೆದುಕೊಂಡವನ ಖಾತೆಗೆ ಖರ್ಚು ಬರೆಯಬೇಕು. ಮುದ್ದತಿನೊಳಗಾಗಿ ಜೀನಸು ಬರದಿದ್ದರೆ, ಆ ಜೀನಸು ಉದ್ದರೀ ಮಾರಾಟವಾದಂತಾಯಿತು. ಪುನಃ ಜಮಾಖರ್ಚು ಮಾಡಬಾರದು. ಮುದ್ದತಿನೊಳಗಾಗಿ (ಅ) ಪೂರ್ಣ ರಕಮನ್ನು ತಂದು ಕೊಟ್ಟರೆ— ತೆಗೆದುಕೊಂಡವನ ಹೆಸರಿನಿಂದ ಜಮೆ ಹಿಡಿಯಬೇಕು. (ಬ) ಎಲ್ಲ ಜೀನಸನ್ನು ತಂದುಕೊಟ್ಟರೆ, ಅದರ ಬೆಲೆಯನ್ನು ಅವನ ಹೆಸರಿನಿಂದ ಜಮೆ ಮಾಡಿ ಅಷ್ಟೇ ರಕಮನ್ನು ಅದೇ ಜೀನಸಿನ ಖಾತೆಗೆ ಖರ್ಚು ಬರೆಯಬೇಕು. (ಕ) ಕೆಲವು ಹಣ, ಕೆಲವು ಜೀನಸು ತಂದುಕೊಟ್ಟರೆ—ಪೂರ್ಣ

ರಕಮನ್ನು ಅವನ ಹೆಸರಿನಿಂದ ಜಮೆ ಮಾಡಿ, ತಿರುಗಿ ಬಂದಷ್ಟು ಮಾಲಿನ ಬೆಲೆಯನ್ನು ಆ ಜೀನಸಿನ ಖಾತೆಗೆ ಅಥವಾ ವಾಪಸ ಬಂದ ಖಾತೆಗೆ ಖರ್ಚು ಬರೆಯಬೇಕು.

ಇಂಥ ವ್ಯವಹಾರಗಳು ೧೦–೧೫ ದಿವಸದವಿರುವದರಿಂದ ಈ ಖಾತೆಯ ಬಾಕಿಯು ಸಾಧಾರಣವಾಗಿ ತೋಂಡಮಿಳವಣಿಯ ಕಾಲಕ್ಕೆ ಶಿಲಕು ಉಳಿಯುವದಿಲ್ಲ. ಒಂದು ವೇಳೆ ಗಿರಾಕಿಯಲ್ಲಿ ಮಾಲು ಶಿಲಕು ಉಳಿದರೆ– ಶಿಲಕುಮಾಲಿನ ರಕಮನ್ನು ಅವನ ಹೆಸರಲೆ ಜಮೆ ಮಾಡಿ, ಜೀನಸಿನ ಖಾತೆಗೆ ಖರ್ಚು ಬರೆಯಬೇಕು. ಯಾಕೆಂದರೆ, ಅವನಲ್ಲಿ ಉಳಿದ ಜೀನಸು ಮಾಲಕನದು ಇರುವದರಿಂದ ಇಂಥವನಲ್ಲಿ ಶಿಲಕು ಉಳಿದಿರುವದೆಂದು ಬರೆದು ಮಾಲಕನ ಶಿಲಕುಮಾಲಿನಲ್ಲಿ ಅದನ್ನು ಕೂಡಿಸಬೇಕು.

ಸಂಜಾಯತ ಕರಾರಿನಿಂದ ಜೀನಸನ್ನು ಕೊಂಡವನಲ್ಲಿ ಈ ರೀತಿ ಜಮಾ ಖರ್ಚು ಮಾಡಬೇಕು:—

ಮುದ್ದತು ಮೀರುವ ತನಕ ಇಂಥ ಜೀನಸು ತಂದವನದಾಗುವದಿಲ್ಲ. ಆದರೂ ಅವುಗಳ ಮಾರಾಟವಾದಂತೆ ತಿಳಿದು ಸಂಜಾಯತ ಜೀನಸಿನ ಖಾತೆಗೆ ಜಮೆ ಮಾಡಬೇಕು. ಮುಂದಿನ ಜಮಾಖರ್ಚನ್ನು ಜೀನಸು ಮಾರಿದವನ ಕೀರ್ದಿಯ ವಿರುದ್ಧ ಕ್ರಮದಿಂದ ಬರೆಯಬೇಕು, ಗೊತ್ತಾದ ಮುದ್ದತು ಮೀರಿದರೆ, ಸಂಜಾಯತ ಜೀನಸು ಕೊಂಡಂತೆ ಆಗುವದು. ಮುದ್ದತಿನೊಳಗಾಗಿ ಅಥಾವೆಯನ್ನು ತೆಗೆದರೆ ಸಂಜಾಯತ ಮಾಲು, ತನ್ನದಾಗದ್ದರಿಂದ, ಅದರ ಬೆಲೆಯನ್ನು ತನ್ನ ಶಿಲಕು ಮಾಲಿನಲ್ಲಿ ಕೂಡಿಸಬಾರದು. ಇಂಥ ಜೀನಸಿನ ಬೆಲೆಯನ್ನು ಮಾಲಕನ ಖಾತೆಗೆ ಖರ್ಚು ಬರೆದು ಸಂಜಾಯತ ಜೀನಸಿನ ಖಾತೆಗೆ ಜಮೆ ಬರೆಯಬೇಕು.

ಸಂಜಾಯತ ಕರಾರಿನಿಂದ ಬಹಳ ಬೆಲೆಯುಳ್ಳ ಬಹಳ ಜೀನಸನ್ನು ತಂದರೆ, ಅಥವಾ ಕೊಟ್ಟರೆ, ಇಂಥ ವ್ಯವಹಾರಗಳ ಜಮಾಖರ್ಚನ್ನು ಮಾಡಲಿಕ್ಕೆ ಬೇರೆ ಕೀರ್ದಿ ಖತಾವಣಿಗಳನ್ನಿಡಬೇಕು.

ಉದಾ:— (೪) ತಾ. ೭-೬-೪೫ ಇ ದಿವಸ ನವಲಿ ನೀಲಪ್ಪನು ಗದಗ ಬಸಪ್ಪನಲ್ಲಿ ಧೋತರ ಜೋಡು ೫೦, ದರ ೫ ರೂ. ಪ್ರಕಾರ ಸಂಜಾಯತ ಕರಾರಿನಿಂದ

ತಂದನು. ಆಢಾವೆಯ ಕಾಲಕ್ಕೆ ಅಂದರೆ ತಾ. ೧೫-೬-೪೫ ಇ. ದಿವಸ ೧೦೦ ರೂ. ಗಳನ್ನು ಕೊಟ್ಟನು. ಶಿಲಕು ಮಾಲನ್ನು ಕಳಿಸುವೆನೆಂದು ಹೇಳಿದನು. ಇವುಗಳ ಜಮಾಖರ್ಚುಗಳನ್ನು ಇಬ್ಬರಲ್ಲಿಯೂ ಬರೆಯಿರಿ

ಗದಗ ಬಸಪ್ಪನ ಕೀರ್ದಿ ತಾ. ೭—೬—೪೫

ಜಮೆ	ರೂ.	ಖರ್ಚು	ರೂ.
೨೫೦ ಧೋತರ ಖಾತೆ:— ಧೋತರ ಜೋಡು ೫೦, ದರ ೫ ರೂ. ಪ್ರ. ನವಲೀ ನೀಲಪ್ಪನಿಗೆ ಸಂಜಾಯತ ಕರಾರಿನಿಂದ ಮಾರಿದ್ದರಿಂದ ಅವನ ಖಾತೆಗೆ ಖರ್ಚು ಖಾ. ಪಾ.		೨೫೦ ನವಲೀ ಬಸಪ್ಪನ ಖಾತೆ:— ಇವನಿಗೆ ಧೋತರ ಜೋಡು ೫೦ ದರ ೫ ರೂ. ಪ್ರ. ಸಂಜಾಯತ ಕರಾರಿನಿಂದ ಮಾರಿದ್ದರಿಂದ ಧೋತರ ಖಾತ್ರೆಗೆ ಜಮೆ ಖಾ. ಪಾ.	

ಖತಾವಣಿ

ಧೋತರ ಖಾತೆ

ಜಮೆ—ರೂ.	ಖರ್ಚು—ರೂ.
೨೫೦ ಕೀ. ಪಾ. ೧ ೭-೬-೪೫	೧೫೦ ಕೀ. ಪಾ. ೪ ೧೫-೬-೪೫

ಖಾತೆ:— ನೀಲಪ್ಪ ನವಲಿ ಸಾ. ಗದಗ

ಜಮೆ—ರೂ.	ಖರ್ಚು—ರೂ.
೨೫೦ ಕೀ. ಪಾ. ೪ ೧೫-೬-೪೫	೨೫೦ ಕೀ. ಪಾ. ೧ ೭-೬-೪೫

ಕೀರ್ದಿ ತಾ. ೧೫—೬—೪೫

ಜಮೆ	ರೂ.	ಖರ್ಚು	ರೂ.
೨೫೦ ನವಲೀ ನೀಲಪ್ಪನ ಖಾತೆ:— ಇವನಿಗೆ ಧೋತರ ಜೋಡು ೫೦ ದರ ೫ ರೂ. ಪ್ರ. ಸಂಜಾಯತ ಕರಾರಿನಿಂದ ಮಾರಿದ್ದರಿಂದ ಅವನು ೧೦೦ ರೂ. ರೋಖು ಕೊಟ್ಟು ೧೫೦ ರೂ. ಮಾಲನ್ನು ತಿರುಗಿ ಕೊಟ್ಟದ್ದರಿಂದ ಧೋತರ ಖಾತೆಗೆ ಖರ್ಚು ಖಾ. ಪಾ.		೧೫೦ ಧೋತರ ಖಾತೆ:— ನವಲೀ ನೀಲಪ್ಪನು ಧೋತರ ಜೋಡು ೫೦, ದರ ೫ ರೂ. ಪ್ರ. ೨೫೦ ರೂ. ಮಾಲನ್ನು ಸಂಜಾಯತ ಕರಾರಿನಿಂದ ಒಯ್ದು ೧೦೦ ರೂ. ರೋಖ ೧೫೦ ರೂ. ಮಾಲು ಕೊಟ್ಟದ್ದರಿಂದ ಅವನ ಖಾತೆಗೆ ಜಮೆ ಖಾ. ಪಾ.	

ನವಲಿ ನೀಲಪ್ಪನ ಕೀರ್ದಿ ತಾ. ೭—೬—೪೫

ಜಮೆ	ರೂ.	ಖರ್ಚು	ರೂ.
೨೫೦	ಗದಗ ಬಸಪ್ಪನ ಖಾತೆ:— ಇವನಲ್ಲಿ ಧೋತರ ಜೋಡು ೫೦, ದರ ೫ ರೂ. ಪ್ರ. ಸಂಜಾಯುತ ಕರಾರಿನಿಂದ ತಂದದ್ದರಿಂದ ಸಂಜಾಯುತ ಧೋತರ ಖಾತೆಗೆ ಖರ್ಚು ಖಾ. ಪಾ.	೨೫೦	ಸಂಜಾಯುತ ಧೋತರ ಖಾತೆ:— ಗದಗ ಬಸಪ್ಪನಲ್ಲಿ ಧೋತರ ಜೋಡು ೫೦, ದರ ೫ ರೂ. ಪ್ರ. ಸಂಜಾಯುತ ಕರಾರಿನಿಂದ ತಂದದ್ದರಿಂದ ಅವನ ಖಾತೆಗೆ ಜಮೆ ಖಾ. ಪಾ.

ಖತಾವಣಿ

ಖಾತೆ:—ಬಸಪ್ಪ ಗದಗ ಸಾ. ಗದಗ

ಜಮೆ—ರೂ.	ಖರ್ಚು—ರೂ.
೨೫೦ ಕೀ. ಪಾ. ೧ ೭-೬-೪೫	೨೫೦ ಕೀ. ಪಾ. ೭ ೧೫-೬-೪೫
೨೫೦	೨೫೦

ಸಂಜಾಯುತ ಧೋತರ ಖಾತೆ

ಜಮೆ—ರೂ.	ಖರ್ಚು—ರೂ.
೧೫೦ ಕೀ. ಪಾ. ೮ ೧೫-೬-೪೫	೨೫೦ ಕೀ. ಪಾ. ೧ ೭-೬-೪೫

ಕೀರ್ದಿ ತಾ. ೧೫—೬—೪೫

ಜಮೆ	ರೂ.	ಖರ್ಚು	ರೂ.
೧೫೦	ಸಂಜಾಯುತ ಧೋತರ ಖಾತೆ:— ಗದಗ ಬಸಪ್ಪನಲ್ಲಿ ಧೋತರ ಜೋಡು ೫೦, ದರ ೫ ರೂ. ಪ್ರ. ಸಂಜಾಯುತ ಕರಾರಿನಿಂದ ತಂದದ್ದರಲ್ಲಿ ೧೦೦ ರೂಪಾಯಿಗಳನ್ನೂ ಉಳಿದ ಮಾಲನ್ನೂ ಕೊಟ್ಟದ್ದರಿಂದ ಅವನ ಖಾತೆಗೆ ಖರ್ಚು ಖಾ. ಪಾ.	೨೫೦	ಗದಗ ಬಸಪ್ಪನ ಖಾತೆ:— ಇವನಲ್ಲಿ ಧೋತರ ಜೋಡು ೫೦, ದರ ೫ ರೂ. ಪ್ರ. ಸಂಜಾಯುತ ಕರಾರಿನಿಂದ ತಂದದ್ದರಲ್ಲಿ ೧೦೦ ರೂ. ರೋಖು ಕೊಟ್ಟು ೧೫೦ ರೂ. ಮಾಲನ್ನು ಕಳಿಸಿದ್ದರಿಂದ ಸಂಜಾಯುತ ಧೋತರ ಖಾತೆಗೆ ಜಮೆ ಖಾ. ಪಾ.

೩. **ದಲಾಲಿ**:— ಮಾರುವವನ ಕಡೆಯಿಂದಾಗಲಿ, ಕೊಳ್ಳುವವನ ಕಡೆಯಿಂದಾಗಲಿ, ಅಥವಾ ಇವರಿಬ್ಬರ ಕಡೆಯಿಂದಾಗಲಿ, ವ್ಯಾಪಾರದಲ್ಲಿ ಮಧ್ಯಸ್ಥಿಕೆಯನ್ನು ಮಾಡಿದವನು ತನ್ನ ಶ್ರಮದ ಸಲುವಾಗಿ, ತೆಗೆದುಕೊಳ್ಳುವ ಹಣಕ್ಕೆ **ದಲಾಲಿ**ಯೆಂತಲೂ, ಮಧ್ಯಸ್ಥನಿಗೆ **ದಲಾಲ**ನೆಂತಲೂ ಅನ್ನುವರು.

ದಲಾಲಿ ಜೀನಸಿನ ಜಮಾಖರ್ಚನ್ನು ಮಾಡುವ ರೀತಿಗಳು ಎರಡು:- (೧) ದಲಾಲರಿಗೆ ವರ್ಷಾನುವರ್ಷ ಕಳುಹಿದ ಜೀನಸುಗಳ ಜಮಾಖರ್ಚು; (೨) ದಲಾಲರ ಕಡೆಗೆ ಎಂದಾದರೂ ಒಮ್ಮೆ ಮಾರಲಿಕ್ಕೆ ಕಳುಹಿದ ಜೀನಸಿನ ಮೇಲೆ ಲಾಭಹಾನಿಯನ್ನು ಗೊತ್ತು ಮಾಡುವದು.

(೧) ಮಾಲಕನಲ್ಲಿ:— ದಲಾಲರಲ್ಲಿ ಮಾರಲಿಕ್ಕೆ ಜೀನಸನ್ನು ಕಳುಹಿದರೆ, ಅದು ಮಾರಿದಂತಾಗುವದಿಲ್ಲ. ಆದುದರಿಂದ ಇಂಥ ವ್ಯವಹಾರಗಳ ಜಮಾಖರ್ಚು ಮಾಡಲಿಕ್ಕೆ ಬರುವದಿಲ್ಲ. ಆದರೆ ಹೀಗೆ ಕಳಿಸಿದ ಜೀನಸನ್ನು ಜೀನಸಿನ ಯಾದಿಯಲ್ಲಿ ಖರ್ಚು ಬರೆದು, “ಇಂಥವರಿಗೆ ಕಳಿಸಿದೆ” ಎಂದು ಶರಾ ಬರೆಯಬೇಕು. ದಲಾಲರಿಂದ ಜೀನಸು ಮಾರಿ ರೋಖು ರಕಮು ಬಂದರೆ, ಮಾರಿದ ಜೀನಸಿನ ಬೆಲೆಯ ರಕಮನ್ನು ಆಯಾ ಜೀನಸುಗಳ ಖಾತೆಗಳಿಗೆ ಜಮೆ ಹಿಡಿದು ಬಾಡಿಗೆ, ಕೂಲಿ, ಇತ್ಯಾದಿ ಖರ್ಚುಗಳನ್ನು ಆಯಾ ಬಾಬಿನ ಖಾತೆಗಳಿಗೆ ಖರ್ಚು ಬರೆಯಬೇಕು. ರಕಮು ರೋಖು ಬರದೆ ದಲಾಲನಿಂದ ಯಾದಿಯು ಬಂದರೆ, ಆ ಎಲ್ಲ ರಕಮನ್ನು ದಲಾಲನ ಖಾತೆಗೆ ಖರ್ಚು ಬರೆಯಬೇಕು. ಉಳಿದ ಬಾಬಿನ ಸಲುವಾಗಿ, ಆದ ಖರ್ಚು ಆಯಾ ಬಾಬಿನ ಖಾತೆಗಳಿಗೆ ಖರ್ಚು ಬರೆದು, ಒಟ್ಟು ಖರ್ಚಾದ ರಕಮನ್ನು ದಲಾಲನ ಖಾತೆಗೆ ಜಮೆ ಹಿಡಿಯಬೇಕು. ಅಖಾವೆಯ ಕಾಲಕ್ಕೆ ಮಾಲಕನು ದಲಾಲನಲ್ಲಿ ಉಳಿದ ಜೀನಸುಗಳನ್ನು ತನ್ನ ಶಿಲಕು ಮಾಲಿನಲ್ಲಿ ಕೂಡಿಸುವನು. ದಲಾಲನು ಮಾರಿದ ಜೀನಸಿನ ಬೆಲೆಯ ಮೇಲೆ ಗೊತ್ತು ಮಾಡಿದ ದರದಂತೆ ದಲಾಲಿಯನ್ನು ಆಕಾರ ಮಾಡಬೇಕು. ಮಾಲಕನು ಈ ಆಕಾರವಾಗಿ ಬಂದ ರಕಮನ್ನು ದಲಾಲೀ ಖಾತೆಗೆ ಖರ್ಚು; ದಲಾಲನ ಖಾತೆಗೆ ಜಮೆ ಮಾಡುತ್ತಾನೆ. ದಲಾಲನ ಖಾತೆಯ ಬಾಕಿಯು (ಉಳಿದಿದ್ದರೆ) ಪಕ್ಕಾ ಬಾಕಿಯಾಗುವದರಿಂದ ಅಖಾವೆಗೆ ಏರುತ್ತದೆ.

ದಲಾಲನಲ್ಲಿ:— ದಲಾಲನಾದರೂ ಬಂದ ಜೀನಸಿನ ಖರೀದಿ ಮಾಡಿರುವದಿಲ್ಲ. ಆದದರಿಂದ ಇಂಥವರಿಂದ ಇಂಥ ಜೀನಸುಗಳು ಬರದವೆಂದು ತನ್ನ ಜೀನಸಿನ ಯಾದಿಯಲ್ಲಿ ಜಮೆ ಹಿಡಿಯುವನು. ಆದರೆ ಆ ಜೀನಸುಗಳು ಯಾರಿಂದ ಬಂದಿರುವವೋ ಅವರವರ ಹೆಸರಿನಿಂದ ಖಾತೆಗಳನ್ನು ಹಾಕಿ ಅವುಗಳಲ್ಲಿ ಅವರಿಗೆ ಕೊಟ್ಟ ರೋಖು ರೂ. ವಖಾರೆ ಬಾಡಿಗೆ, ಜಕಾತಿ ಮುಂತಾದವುಗಳನ್ನು ಖರ್ಚು ಹಾಕುವನು. ಮುಂದೆ ಜೀನಸುಗಳ ಮಾರಾಟದಿಂದ ಬಂದ ಹಣವನ್ನು ಆ ಖಾತೆಗಳಿಗೆ ಜಮೆ ಮಾಡುವನು.

ಜೀನಸು ಮಾರಿ ಬಂದ ರಕಮಿನ ಮೇಲೆ ಕರಾರ ಮಾಡಿದಂತೆ ದಲಾಲಿಯ ಹಣವನ್ನು ಮಾಲಕನ ಖಾತೆಗೆ ಖರ್ಚು ಹಾಕುವನು. ಮತ್ತು ಅಷ್ಟೇ ಹಣವನ್ನು ತನ್ನ ದಲಾಲಿಯ ಖಾತೆಗೆ ಜಮೆ ಹಿಡಿಯುವನು. ಮುಂದೆ ಆ ಖಾತೆಯನ್ನು ಇಸಮಿನ ಖಾತೆಯಂತೆ ಬಾಯಿಗೂಡಿಸುವನು. ಜೀನಸು ಶಿಲಕು ಉಳಿದಿದ್ದರೆ, ಮಾಲಕನಿಗೆ ಕಳಿಸಬೇಕು, ಇಲ್ಲವೆ ತಿಳಿಸಬೇಕು; ತನ್ನ ಜೀನಸಿನಲ್ಲಿ ಕೂಡಿಸಬಾರದು.

(೨) ಮಾಲಕನು ಜೀನಸನ್ನು ಕಳಿಸುವ ಮುಂದೆ ಇಂತಿಷ್ಟು ದರಕ್ಕಿಂತ ಕಡಿಮೆ ದರದಿಂದ ಮಾರಕೂಡದೆಂದು ದಲಾಲನಿಗೆ ತಿಳಿಸುತ್ತಾನೆ. ಈ ದರವು ಯಾವಾಗಲೂ ಮೂಲ ದರಕ್ಕಿಂತ ಹೆಚ್ಚಿಗೆ ಇರುತ್ತದೆ. ದಲಾಲನಿಗೆ ಕಳಿಸಿದ ಜೀನಸಿನ ಮೂಲ ಬೆಲೆಯು ತಿಳಿಯಬಾರದೆಂಬುವದೂ, ಅವನು ಆದಷ್ಟು ಹೆಚ್ಚಿನ ದರಕ್ಕೆ ಅದನ್ನು ಮಾರಬೇಕೆನ್ನುವದೂ ಇದರ ಉದ್ದೇಶವು, ಇದರಿಂದ ದಲಾಲನು ಮಾರಿದ ಜೀನಸಿನ ಮೇಲೆ ಆದ ಲಾಭವು ಅಥವಾ ಹಾನಿಯು ಗೊತ್ತಾಗುವದು. ಕಾಳು, ಹತ್ತಿ ಬೆಳೆದವರು ಕೂಡ ದಲಾಲನ ಕಡೆಗೆ ಅವುಗಳನ್ನು ಮಾರಲಿಕ್ಕೆ ಕಳುಹಿಸುವರು.

ಮಾಲಕನಲ್ಲಿ ಮಾಡುವ ಜಮಾಖರ್ಚು:— ದಲಾಲನಿಗೆ ಮಾಲನ್ನು ಕಳಿಸಿದರೆ ರೋಖು ಶಿಲಕಿನಲ್ಲಿ ಹೆಚ್ಚುಕಡಿಮೆಯಾಗದೆ, ವ್ಯವಹಾರವು ಆದಂತಾಗುವದು. ಆದದರಿಂದ ಇಂಥ ವ್ಯವಹಾರಗಳ ರಕಮುಗಳು ಪರಭಾರೆ ಇರುವವು. ದಲಾಲನಿಗೆ ದರ ತಿಳಿಸಿದಂತೆ ಕಳಿಸಿದ ಜೀನಸಿನ ಬೆಲೆಯನ್ನು ದಲಾಲೀ ಜೀನಸಿನ ಖಾತೆಗೆ ಖರ್ಚು ಬರೆದು, ಯೋಗ್ಯ

ಜೀನಸಿನ ಖಾತೆಗೆ ಜಮೆ ಹಿಡಿಯಬೇಕು. ದಲಾಲನಿಗೆ ಜೀನಸನ್ನು ಕಳಿಸ ಲಿಕ್ಕೆ ಹತ್ತಿದ ಗಾಡಿಯ ಮತ್ತು ರೇಲ್ವೆಯ ಬಾಡಿಗೆ, ಕೂಲಿ ಮುಂತಾದವು ಗಳನ್ನು ದಲಾಲೀ ಜೀನಸಿನ ಖಾತೆಗೆ ಖರ್ಚು ಬರೆಯಬೇಕು. ಉದ್ದರಿ ಇದ್ದರೆ ಆಯಾ ಇಸಮಿನ ಖಾತೆಗೆ ಜಮೆ ಮಾಡಬೇಕು. ದಲಾಲನಿಂದ ರೋಖು ರಕಮನ್ನು ತಕ್ಕೊಂಡರೆ, ಅಷ್ಟು ಹಣವನ್ನು ಅವನ ಖಾತೆಗೆ ಜಮೆ ಮಾಡಬೇಕು. ಮುಂದೆ ದಲಾಲನ ಕಡೆಯಿಂದ ರೋಖ ಹಣ ಬರದೆ ಮಾರಾಟದ ಯಾದಿಯು ಮಾಲಕನ ಕಡೆಗೆ ಬಂದರೆ, ಮಾರಿದ ಜೀನಸಿನ ರಕಮನ್ನು ದಲಾಲಿ ಜೀನಸಿನ ಖಾತೆಗೆ ಜಮೆ ಮಾಡಿ ಅಷ್ಟು ರಕಮನ್ನು ದಲಾಲನ ಖಾತೆಗೆ ಖರ್ಚು ಬರೆಯಬೇಕು. ದಲಾಲನು ಖರ್ಚು ಮಾಡಿದ ರಕಮನ್ನು ದಲಾಲಿ ಜೀನಸಿನ ಖಾತೆಗೆ ಖರ್ಚು, ದಲಾಲನ ಖಾತೆಗೆ ಜಮೆ ಮಾಡಬೇಕು. ಜೀನಸು ಉಳಿದಿದ್ದರೆ, ಅದರ ಬೆಲೆಯನ್ನು ದಲಾಲೀ ಜೀನಸಿನ ಖಾತೆಗೆ ಜಮೆ, ಆಯಾ ಜೀನಸಿನ ಖಾತೆಗೆ ಖರ್ಚು ಬರೆಯಬೇಕು. ದಲಾಲಿ ಜೀನಸಿನ ಖಾತೆಯ ಬಾಕಿಯು ದಲಾಲಿ ವ್ಯಾಪಾರದಿಂದಾದ ಲಾಭವನ್ನು ಇಲ್ಲವೆ ಹಾನಿಯನ್ನು ಮತ್ತು ದಲಾಲನ ಖಾತೆಯ ಬಾಕಿಯು ದಲಾಲನಿಂದ ಬರತಕ್ಕ ರಕಮನ್ನು ತೋರಿಸುತ್ತವೆ. ಆ ರಕಮು ಬಂದ ನಂತರ ದಲಾಲನ ಖಾತೆಗೆ ಜಮೆ ಮಾಡಬೇಕು. ಅಥಾವೆಯ ಕಾಲಕ್ಕೆ ಜೀನಸು ಖರ್ಚಾಗದಿದ್ದರೆ, ದಲಾಲಿಯ ಜೀನಸಿನ ಖಾತೆಯನ್ನು ಇಸಮಿನ ಖಾತೆಯಂತೆ ಬಾಯಿಗೂಡಿಸಬೇಕು.

ಉದಾ:— (೫) ಮುಗಪ್ಪನು ನಾಗಪ್ಪ ದಲಾಲ ಸಾ. ಹುಬ್ಬಳ್ಳಿ ಇವನ ಕಡೆಗೆ ಕೆಳಗಿನ ಜೀನಸನ್ನು ಕಳಿಸಿದನು. ತಾ. ೪—೪—೪೫ ಇ.

ಹತ್ತಿ ನಗ ೨೦, ದರ ಕನಿಷ್ಠ ೨೦೦ ರೂ. ಪ್ರ. ಹೆಸರು ಹೇರು ೧೬, ದರ ಕನಿಷ್ಠ ೨೦ ರೂ. ಪ್ರ. ಮಾರಬೇಕೆಂದು ಹೇಳಿ ೪೦೦ ರೂ. ಗಳನ್ನು ರೋಖು ಒಯ್ದನು ವಖಾರ ಬಾಡಿಗೆ ೧೦ ರೂ. ದಲಾಲಿ ೧೦೦ಕ್ಕೆ ೫ರಂತೆ ಗೊತ್ತು ಮಾಡಿದನು.

ದಲಾಲ ನಾಗಪ್ಪನು ಹತ್ತಿ ನಗ ೨೦ ದರ ೪೦೦ ರೂ. ಪ್ರ. ಹೆಸರು ಹೇರು ೧೦ ದರ ೪೦ ರೂ. ಪ್ರ. ಮಾರಿದನು. ಧರ್ಮಾದಾಯ ೮ ರೂ. ಪೋಷ್ಟ ಖರ್ಚು ೨ ರೂ. ಆದವು. ತಾ. ೧೨—೪—೪೫ ಇ.

ಮಾಳಗಿ ಮುಗಪ್ಪನಲ್ಲಿ ಈ ವ್ಯವಹಾರಗಳ ಜಮಾಖರ್ಚನ್ನು ಬರೆದು ತೋಂಡ ಮಿಳವಣಿ ಮಾಡಿರಿ. ತಾ. ೧೪—೪—೪೫ ಇ.

ನಾಳಗಿ ಮೂಗಪ್ಪ (ಮಾಲಕ)ನ ಕೀರ್ದಿ ತಾ. ೪—೪—೪೫ ಇ.

ಜಮೆ	ರೂ.	ಖರ್ಚು	ರೂ.
೪೦೦೦	ಹತ್ತಿಯ ಖಾತೆ:— ಹತ್ತಿ ನಗ ೨೦, ದರ ಕನಿಷ್ಠ ೨೦೦ ರೂ. ಪ್ರ. ಮಾರಾಟಕ್ಕೆ ನಾಗಪ್ಪ ದಲಾಲ ಇವನ ಕಡೆಗೆ ಕಳಿಸಿದ್ದರಿಂದ ದ. ಮಾ. ಖಾತೆಗೆ ಖರ್ಚು ಖಾ. ಪಾ.	೪೩೨೦	ದಲಾಲಿ ಮಾಲಿನ ಖಾತೆ:— ನಾಗಪ್ಪ ದಲಾಲ ಇವನ ಕಡೆಗೆ ೧೦೦ಕ್ಕೆ ೫ರಂತೆ ದಲಾಲಿ ಗೊತ್ತು ಮಾಡಿ ೪೦೦೦ ರೂ. ಹತ್ತಿ ನಗ ೨೦ ದರ ಕನಿಷ್ಠ ೨೦೦ ರೂ. ಪ್ರ. ೩೨೦ ರೂ. ಹೆಸರು ಹೇರು ೧೬, ದರ ಕನಿಷ್ಠ ೨೦ ರೂ ಪ್ರ. ೪೩೨೦ ಮಾರಬೇಕೆಂದು ಕಳಿಸಿದ್ದರಿಂದ ಆಯಾ ಮಾಲಿನ ಖಾತೆಗೆ ಜಮೆ ಖಾ. ಪಾ.
೩೨೦	ಹೆಸರಿನ ಖಾತೆ:— ಹೆಸರು ಹೇರು ೧೬, ದರ ಕನಿಷ್ಠ ೨೦ ರೂ. ಪ್ರ. ಮಾರಬೇಕೆಂದು ದಲಾಲಿ ನಾಗಪ್ಪನ ಕಡೆಗೆ ಕಳಿಸಿದ್ದರಿಂದ ದಲಾಲಿ ಜೀನಸಿನ ಖಾತೆಗೆ ಖರ್ಚು ಖಾ. ಪಾ.		
೩೦೦	ನಾಗಪ್ಪ ದಲಾಲ ಖಾತೆ:— ಇವನಲ್ಲಿ ರೋಖು ತಂದದ್ದು. ಖಾ. ಪಾ.		

ಖತಾವಣಿ

ಹತ್ತಿಯ ಖಾತೆ

ಜಮೆ	ರೂ.	ಖರ್ಚು	ರೂ.
೪೦೦೦	ಕೀ. ಪಾ. ೧ ೪-೪-೪೫		

ಹೆಸರಿನ ಖಾತೆ

ಮೆ	ರೂ.	ಖರ್ಚು	ರೂ
೩೨೦	ಕೀ. ಪಾ. ೧ ೪-೪-೪೫	೧೨೦	ತೋ೧೦, ವಿ. ೧೪-೪-೪೫

ದಲಾಲಿ ಮಾಲಿನ ಖಾತೆ

ಜಮೆ	ರೂ.	ಖರ್ಚು	ರೂ.
೬೩೦೦	ಕೀ. ಪಾ. ೧೨ ತಾ. ೧೨-೪-೪೫	೪೩೨೦	ಕೀ. ಪಾ. ೧ ತಾ. ೪-೪-೪೫

೧೨೦ ತೋ. ವಿ. ತಾ. ೧೪-೪-೪೫ ಇ.	೩೩೫ ಕೀ. ಪಾ. ೧೨ ತಾ. ೧೨-೪-೪೫
	೧೭೬೫ ತೋ. ವಿ. ತಾ. ೧೪-೪-೪೫
೬೪೨೦	೬೪೨೦

ಖಾತೆ:—ದಲಾಲ ನಾಗಪ್ಪ ಸಾ. ಹುಬ್ಬಳ್ಳಿ

ಜಮೆ ರೂ.	ಖರ್ಚು ರೂ.
೩೦೦ ಕೀ. ಪಾ. ೧ ತಾ. ೪-೪-೪೫	೬೩೦೦ ಕೀ. ಪಾ. ೧೨ ತಾ. ೧೨-೪-೪೫
೩೩೫ ಕೀ. ಪಾ. ೧೨ ತಾ. ೧೨-೪-೪೫	
೫೬೬೫ ತೋ. ವಿ. ತಾ. ೧೪-೪-೪೫	
೬೩೦೦	೬೩೦೦

ಲಾಭಹಾನಿಯ ಖಾತೆ

ತಾ. ೪-೪-೪೫ರಿಂದ ೧೪-೪-೪೫ರ ವರೆಗೆ

ಜಮೆ ರೂ.	ಖರ್ಚು ರೂ.
೧೭೬೫ ದಲಾಲಿ ಮಾಲಿನಿಂದ	

ಅಢಾವೆಯ ಖಾತೆ

ತಾ. ೧೪-೪-೪೫ ಇ.

ಜಮೆ ರೂ.	ಖರ್ಚು ರೂ.
	೫೬೬೫ ನಾಗಪ್ಪ ದಲಾಲ

ಕೀರ್ದಿ

ತಾ. ೧೨—೪—೧೯೪೫

ಜಮೆ ರೂ.	ಖರ್ಚು ರೂ.
೬೩೦೦ ದಲಾಲಿ ಮಾಲಿನ ಖಾತೆ:— ನಾಗಪ್ಪ ದಲಾಲನಿಂದ ಮಾಲು ಮಾರಾಟವಾಗಿ ಬಂದ ತಪಶೀಲು ೬೦೦೦ ರೂ. ಹತ್ತಿ ನಗ ೨೦, ೩೦೦ ರೂ. ಪ್ರ. ೩೦೦ ರೂ. ಹೆಸರು ಹೇರು ೧೦, ದರ ೩೦ ರೂ. ಪ್ರ. ೬೩೦೦ ರೂ. ನಾಗಪ್ಪ ದಲಾಲ ಇವನ ಖಾತೆಗೆ ಖರ್ಚು ಖಾ. ಪಾ.	೬೩೦೦ ನಾಗಪ್ಪ ದಲಾಲನ ಖಾತೆ:— ಮಾಲು ಮಾರಾಟವಾಗಿ ಬಂದ ತಪಶೀಲು:— ೬೦೦೦ ರೂ. ಹತ್ತಿ ನಗ ೨೦ ದರ ೩೦೦ ರೂ. ಪ್ರ. ೩೦೦ ರೂ. ಹೆಸರು ಹೇರು ೧೦, ದರ ೩೦ ರೂ. ಪ್ರ. ೬೩೦೦ ರೂ. ಯಾದಿ ಬಂದದ್ದು ೦ಂದದ ಲಾಲಿ ಮಾಲ ಖಾತೆಗೆ ಜಮೆ ಖಾ. ಪಾ.

೩೩೫ **ದಲಾಲ ನಾಗಪ್ಪನ ಖಾತೆ:—**
ದಲಾಲಿ ಮಾಲಿನ ಸಂಬಂಧದಿಂದ
ಖರ್ಚಾದ್ದರಿಂದ ಆ ಖಾತೆಗೆ
ಖರ್ಚು
ಖಾ. ಪಾ.

---

೩೩೫ **ದಲಾಲಿ ಖಾತೆ:—** ಮಾಲಿನ
ಖರ್ಚಿನ ತಪಶೀಲು:—
೧೦ ರೂ. ವಖಾರ ಬಾಡಿಗೆ
೨ ರೂ. ಪೋಸ್ಟ ಖರ್ಚು
೮ ಧರ್ಮಾದಾವ
೩೧೫ ರೂ. ದಲಾಲಿ ೧೦೦ಕ್ಕೆ ೫ರಂತೆ

೩೩೫ ರೂ. ನಾಗಪ್ಪ ದಲಾಲ
ಖಾತೆಗೆ ಜಮೆ
ಖಾ. ಪಾ.

ಕೇರ್ದಿ

ತಾ. ೧೪—೪—೪೫

ಜಮೆ	ರೂ.	ಖರ್ಚು	ರೂ.

೧೨೦ **ದಲಾಲಿ ಮಾಲಿನ ಖಾತೆ:—**
ಹೆಸರು ಹೇರು ೬, ದರ ಕನಿಷ್ಠ
೨೦ ರೂ. ಪ್ರ. ನಾಗಪ್ಪ ದಲಾಲ
ನಲ್ಲಿ ಶಿಲಕು ಉಳಿದದ್ದು ಆ
ಕಾರಣ ಹೆಸರಿನ ಖಾತೆಗೆ
ಖರ್ಚು
ಖಾ. ಪಾ.

೫೬೬೫ **ನಾಗಪ್ಪ ದಲಾಲನ ಖಾತೆ:—**
ತೋಂಡಮಿಳವಣಿ. ಆಢಾವೆಗೆ
ಖರ್ಚು
ಖಾ. ಪಾ.

೧೭೬೫ **ಲಾಭಹಾನಿ ಖಾತೆ:** – ತೋಂಡ
ಮಿಳವಣಿ. ದಲಾಲಿ ಮಾಲ
ಖಾತೆಗೆ ಖರ್ಚು
ಖಾ. ಪಾ.

---

೧೨೦ **ಹೆಸರಿನ ಖಾತೆ:—** ತೋಂಡ
ಮಿಳವಣಿ ದಲಾಲಿ ಮಾಲ
ಖಾತೆಗೆ ಜಮೆ
ಖಾ. ಪಾ.

೫:೬೫ **ಅಢಾವೆ ಖಾತೆ:—** ತೋಂಡ
ಮಿಳವಣಿ ನಾಗಪ್ಪ ದಲಾಲನ
ಖಾತೆಗೆ ಜಮೆ
ಖಾ. ಪಾ.

೧೭೬೫ **ದಲಾಲಿ ಮಾಲಿನ ಖಾತೆ:—**
ತೋಂಡಮಿಳವಣಿ ಲಾ. ಹಾ.
ಖಾತೆಗೆ ಜಮೆ
ಖಾ. ಪಾ.

ದಲಾಲನಲ್ಲಿ ಮಾಡುವ ಜಮಾಖರ್ಚು:—ಜೀನಸು ಬಂದ ಕೂಡಲೆ ಅದನ್ನು ದಲಾಲೀ ಜೀನಸಿನ ಯಾದಿಯಲ್ಲಿ ಇಂಥವರ ಕಡೆಯಿಂದ ಇಂತಿಷ್ಟು ಜೀನಸು ಇಂತಿಷ್ಟು ದರದಿಂದ ಮಾರಬೇಕೆಂದು ಬಂದಿರುವದೆಂಬದನ್ನು ದಲಾಲನು ಬರೆದುಕೊಳ್ಳುತ್ತಾನೆ. ಮಾರಾಟವಾಗುವ ತನಕ ಈ ಜೀನಸಿನ ಜಮಾಖರ್ಚು ಮಾಡುವದಿಲ್ಲ. ಈ ಜೀನಸು ತನ್ನದಲ್ಲವಾದ್ದರಿಂದ ಅದನ್ನು ತನ್ನ ಜೀನಸಿನಲ್ಲಿ ಕೂಡಿಸದೆ ಬೇರೆ ಇಡುತ್ತಾನೆ. ತನ್ನ ಆಢಾವೆಯಲ್ಲಿ ತೋರಿಸಿದ ಶಿಲಕು ಮಾಲಿನಲ್ಲಿ ಇದನ್ನು ಎಂದೂ ಕೂಡಿಸುವದಿಲ್ಲ.

ಗಾಡಿಯ ಬಾಡಿಗೆ, ವಖಾರದ ಬಾಡಿಗೆ ಕೂಲಿ ಮುಂತಾದ ಖರ್ಚುಗಳನ್ನು ದಲಾಲಿ ಜೀನಸಿನ ಮಾಲಕನ ಖಾತೆಗೆ ಖರ್ಚು ಬರೆದು ಉದ್ದರಿ ಇದ್ದರೆ ಯೋಗ್ಯ ಖಾತೆಗೆ ಜಮೆ ಮಾಡಬೇಕು. ಮಾಲಕನಿಗೆ ಮುಂಗಡ ರಕಮು ಕೊಟ್ಟರೆ, ಆವನ ಖಾತೆಗೆ ಖರ್ಚು ಬರೆಯಬೇಕು. ಮುಂದೆ ಮಾಲಕನಿಗೆ ಮಾರಾಟದ ಜೀನಸಿನ ಯಾದಿಯನ್ನು ಕಳಿಸುವಾಗ ದಲಾಲನು ತನಗೆ ಬರತಕ್ಕ ದಲಾಲಿಯ ರಕಮನ್ನು ಮಾಲಕನ ಖಾತೆಗೆ ಖರ್ಚು ತನ್ನ ದಲಾಲಿ ಖಾತೆಗೆ ಜಮೆ, ಮಾಡಬೇಕು. ಮಾಲಕನ ಖಾತೆಯ ಬಾಕಿಯು ಅವನಿಗೆ ಕೊಡತಕ್ಕ ರಕಮನ್ನು ತೋರಿಸುತ್ತದೆ.

ಉದಾ:— (೬) ಹಿಂದಿನ ಉದಾಹರಣೆಯನ್ನು ದಲಾಲ ನಾಗಪ್ಪನಲ್ಲಿ ಬರೆದು ತೋರಿಸಿರಿ.

ನಾಗಪ್ಪ ದಲಾಲ ಇವನ
ದಲಾಲಿ ಜೀನಸಿನ ಯಾದಿಯು

ತಾರೀಖು	ಯಾರಿಂದ	ವಿವರ	ಹತ್ತಿ ನಗ	ದರ ರೂ.	ಹೆಸರು ಹೇರು	ದರ ರೂ.	ಗೋದಿ ಹೇರು	ದರ ರೂ.	ಶರಾ.
೪-೪-೪೫	ಮಾಳಗಿ ಮಾಗಪ್ಪನಿಂದ	ಜಮೆ	೨೦	೨೦೦	೧೬	೨೦			
೧೨-೪-೪೫		ಖರ್ಚು	೨೦	೩೦೦	೧೦	೩೦			
೧೪-೪-೪೫	ಮಾಳಗಿ ಮಾಗಪ್ಪನಿಂದ	ಶಿಲಕು			೬				

ದಲಾಲ ನಾಗಪ್ಪನ ಕೀರ್ದಿ ತಾ. ೯—೪—೪೫

ಜಮೆ	ರೂ.	ಖರ್ಚು	ರೂ.
		ಮಾಗಪ್ಪ ಮಾಳಗಿ ಖಾತೆ ಇವನು ರೋಖು ಒಯ್ದದ್ದು ಖಾ. ಪಾ.	೩೦೦

ಖತಾವಣಿ

ಖಾತೆ :— ಮಾಗಪ್ಪ ಮಾಳಗಿ ಸಾ. ಗದಗ

ಜಮೆ	ರೂ.	ಖರ್ಚು	ರೂ.
ಕೀ. ಪಾ. ೪ ೧೨-೪-೪೫	೬೩೦೦	ಕೀ. ಪಾ. ೧ ೪-೪-೪೫	೩೦೦
		ಕೀ. ಪಾ. ೪ ೧೨-೪-೪೫	೩೩೫
		ತೋ. ಮಿ. ೧೪-೪-೪೫	೫೬೬೫
	೬೩೦೦		೬೩೦೦

ದಲಾಲಿ ಖಾತೆ

ಜಮೆ	ರೂ.	ಖರ್ಚು	ರೂ.
ಕೀ. ಪಾ. ೪ ೧೨-೪-೪೫	೩೧೫		

ಪ್ರೋಸ್ತ ಖರ್ಚು ಖಾತೆ

ಜಮೆ	ರೂ.	ಖರ್ಚು	ರೂ.
ಕೀ. ಪಾ. ೪ ೧೨-೪-೪೫	೨		

ಘಮಾರ್ದಾವ ಖಾತೆ

ಜಮೆ	ರೂ.	ಖರ್ಚು	ರೂ.
ಕೀ ಪಾ ೪ ೧೨-೪-೪೫	೮		

ಬಾಡಿಗೆ ಖಾತೆ

ಜಮೆ	ರೂ.	ಖರ್ಚು	ರೂ.
ಕೀ. ಪಾ. ೪ ೧೨-೪-೪೫	೧೦		

ಅಢಾವೆ ಖಾತೆ

ಜಮೆ	ರೂ.	ಖರ್ಚು	ರೂ.
ನಾಗಪ್ಪ ಮಾಳಗಿ	೫೬೬೫		

ಕೇರ್ದಿ ತಾ. ೧೨—೪—೪೫

ಜಮೆ	ರೂ.	ಖರ್ಚು	ರೂ.
೬೩೦೦	ಮೂಗಪ್ಪ ಮಾಳಗಿ ಖಾತೆ:— ತಪಶೀಲು:— ೬೦೦೦ ರೂ. ಹತ್ತಿ ನಗ ೨೦, ದರ ೩೦೦ ರೂ. ಪ್ರ. ೩೦೦ ರೂ. ಹೆಸರು ಹೇರು ೧೦, ದರ ೩೦ ರೂ. ಪ್ರ. ——— ೬೩೦೦ ಖಾ. ಪಾ.	೩೩೫	ಮೂಗಪ್ಪ ಮಾಳಗಿ ಖಾತೆ:— ತಪಶೀಲು:— ೩೧೫ ರೂ. ದಲಾಲಿ ೧೦ ರೂ. ವಖಾರದ ಬಾಡಿಗೆ ೮ ರೂ. ಧರ್ಮಾದಾವ ೨ ರೂ. ಪೋಸ್ಟ ಖರ್ಚು ——— ೩೩೫ ರೂ. ಖರ್ಚಾದ್ದರಿಂದ ಆಯಾ ಖಾತೆಗಳಿಗೆ ಜಮೆ ಖಾ. ಪಾ.
೩೧೫	ದಲಾಲಿ ಖಾತೆ:— ಮೂಗಪ್ಪ ಮಾಳಗಿ ಕಡೆಯಿಂದ ದಲಾಲಿ ಬಂದದ್ದು. ಅವನ ಖಾತೆಗೆ ಖರ್ಚು ಖಾ. ಪಾ.		
೧೦	ಬಾಡಿಗಿ ಖಾತೆ:— ಮಾಳಗಿ ಮೂಗಪ್ಪನಿಂದ ವಖಾರದಬಾಡಿಗೆ ಬಂದದ್ದರಿಂದ ಅವನ ಖಾತೆಗೆ ಖರ್ಚು ಖಾ. ಪಾ.		
೮	ಧರ್ಮಾದಾವ ಖಾತೆ:— ಮಾಳಗಿ ಮೂಗಪ್ಪನ ವ್ಯಾಪಾರದಲ್ಲಿ ಧರ್ಮಾದಾವ ಬಂದದ್ದರಿಂದ ಅವನ ಖಾತೆಗೆ ಖರ್ಚು ಖಾ. ಪಾ.		
೨	ಪೋಸ್ಟ ಖರ್ಚ ಖಾತೆ:— ಮೂಗಪ್ಪ ಮಾಳಗಿಯಿಂದ ಬಂದದ್ದರಿಂದ ಅವನ ಖಾತೆಗೆ ಖರ್ಚು ಖಾ. ಪಾ.		

ಕೀರ್ದಿ ತಾ॰ ೧೪—೪—೪೫

ಜಮೆ	ರೂ.	ಖರ್ಚು	ರೂ.
೫೬೬೫ ಅಥಾವೆಯು ಖಾತೆ:—ತೋಂಡ ನಿಂಳವಣಿ ಮಾಳಗಿ ಮೂಗಪ್ಪನಿಗೆ ಕೊಡತಕ್ಕದ್ದು ಖಾ. ಪಾ.		೫೬೬೫ ಮೂಗಪ್ಪ ಮಾಳಗಿ ಖಾತೆ:— ಇವನಿಗೆ ಕೊಡತಕ್ಕದ್ದರಿಂದ ಅಥಾವೆಗೆ ಜಮೆ ಖಾ. ಪಾ.	

೪. **ಪ್ರಶ್ನೆಗಳು:—**

೧. ಸೂಟ, ವರ್ತಾವಳಿ ಅಂದರೇನು?

೨. ಸಂಜಾಯತ ಕರಾರ ಅಂದರೇನು? ಅಥಾವೆಯನ್ನು ತೆಗೆಯುವ ಕಾಲಕ್ಕೆ ಸಂಜಾಯತ ಕರಾರಿನಿಂದ ಕೊಟ್ಟ ಮಾಲಿನ ಜಮಾಖರ್ಚನ್ನು ಹೇಗೆ ಮಾಡುವಿರಿ?

೩. ಮಾಲಿನ ಮಾರಾಟ, ಸಂಜಾಯತ ಕರಾರಿನಿಂದಾದ ಮಾರಾಟ ಇವುಗಳಲ್ಲಿ ಭೇದವೇನು?

೪. ದಲಾಲನಿಗೆ ಕಳಿಸಿದ ಮಾಲು ಯಾವಾಗ ದಲಾಲನದು ಆಗಬಹುದು?

೫. ದಲಾಲಿಯ ಮಾಲು ಬಂದ ಕೂಡಲೆ, ಎಲ್ಲ ಮಾಲನ್ನು ಮಾರಿದ ಮೇಲೆ ದಲಾಲನು ತನ್ನ ಜಮಾಖರ್ಚನ್ನು ಹೇಗೆ ಬರೆಯುವನು?

೬. ಅಥಾವೆಯ ಕಾಲಕ್ಕೆ—

(ಅ) ಮಾಲು ಏನೂ ಮಾರದಿದ್ದರೆ,

(ಬ) ಸ್ವಲ್ಪ ಮಾಲು ಮಾರಿ ಬಂದ ಹಣವನ್ನು ಕಳಿಸಿದರೆ, ಕಳಿಸದಿದ್ದರೆ,

(ಕ) ಎಲ್ಲ ,, ,, ,, ,,

ದಲಾಲನು ಮಾಡುವ ಜಮಾಖರ್ಚನ್ನು ಹೇಳಿ ಉದಾಹರಣೆಗಳಿಂದ ಸ್ಪಷ್ಟೀಕರಿಸಿರಿ.

೭. ವ್ಯಾಪಾರಸ್ಥನು ದಲಾಲನಿಗೆ ಕಳಿಸಿದ ಮಾಲಿನ ಜಮಾಖರ್ಚನ್ನು ತನ್ನಲ್ಲಿ ಅ) ಕಳಿಸಿದ ಕೂಡಲೆ (ಬ) ಮಾರಾಟದ ಯಾದಿಯು ಬಂದ ಮೇಲೆ ಮಾಡುತ್ತಾನೆ?

೮. ಅಥಾವೆಯ ಕಾಲಕ್ಕೆ ವ್ಯಾಪಾರಸ್ಥನು ದಲಾಲನಿಗೆ ಕಳಿಸಿದ ಮಾಲಿನ ರಕಮು ಬರದಿದ್ದರೆ, ಅದರ ಜಮಾಖರ್ಚು ಹೇಗೆ ಮಾಡುವನು?

೩ನೆಯ ಪ್ರಕರಣ

ಹುಂಡಿ

೧. ಹುಂಡಿಯ ಉದ್ದೇಶಗಳು ೨. ಹುಂಡಿಯ ವ್ಯಾಖ್ಯೆ
೩. ಹುಂಡಿಯ ಪ್ರಕಾರಗಳು ಹುಂಡಿಯ ರೂಪಾಂತರಗಳು
೫. ಪೇಠ ಪರಪೇಠಗಳು ೬. ಹುಂಡಿಯ ಸ್ಟ್ಯಾಂಪುಗಳು
೭. ಹುಂಡಿಯ ಜವಾಖರ್ಚು ೮. ಸಕ್ರಾಯಿ, ನಕ್ರಾಯಿ
೯. ಚೆಕ್ ೧೦. ಪ್ರಶ್ನಗಳು

೧. ಹುಂಡಿಯ ಉದ್ದೇಶಗಳು :—

(೧) ಪರಸ್ಥಳಕ್ಕೆ ಹಣವನ್ನು ಕಳಿಸುವ ಭಯವೂ ಖರ್ಚೂ ಕಡಿಮೆಯಾಗಬೇಕು.

(೨) ಜೀನಸನ್ನು ಮಾರಿದವನಿಗೆ ಬೇಕಾದಾಗ ರಕಮು ಸಿಗಬೇಕು.

(೩) ಜೀನಸನ್ನು ಕೊಂಡವರಿಗೆ ರಕಮನ್ನು ಕೊಡಲಿಕ್ಕೆ ವೇಳೆಯು ದೊರೆಯಬೇಕು.

(೪) ಸಾವುಕಾರನಿಗೆ ತನ್ನ ಹಣವು ಬೇಕಾದಾಗ ದೊರೆಯುವದಲ್ಲದೆ ಬಡ್ಡಿಯೂ ದೊರೆಯಬೇಕು.

(೫) ಹುಂಡಿಗಳ ಉಪಯೋಗವು ಹೆಚ್ಚಾದಂತೆ ವ್ಯಾಪಾರಸ್ಥರಿಗೆ ತಮ್ಮ ವ್ಯವಹಾರದಲ್ಲಿ ನಾಣ್ಯದ ಬಳಕೆಯನ್ನು ತೀರ ಕಡಿಮೆ ಮಾಡಲಿಕ್ಕೂ ತಮ್ಮ ಭಾಂಡವಲವನ್ನು ಹೆಚ್ಚಿಸದೆ ವ್ಯಾಪಾರವನ್ನು ಬೆಳೆಸಲಿಕ್ಕೂ ಬರುತ್ತದೆ.

೨. ಹುಂಡಿಯ ವ್ಯಾಖ್ಯೆ :— ಇಂಥವನಿಗೆ ಇಲ್ಲವೆ ಇವನ ಆಜ್ಞೆಯನ್ನು ಪಡೆದವನಿಗೆ ಅಥವಾ ಪತ್ರವನ್ನು ತಂದವನಿಗೆ ಇಂತಿಷ್ಟು ರಕಮನ್ನು ಬೇಡಿದ ಕೂಡಲೆ ಅಥವಾ ಕೆಲವೊಂದು ಮುದ್ದತಿಗೆ ಕೊಡು ಎಂದು ಒಬ್ಬನು ಇನ್ನೊಬ್ಬನಿಗೆ ತನ್ನ ಸಹಿಯಿಂದ ಬರೆದ ಕರಾರಿಲ್ಲದ (ಬೇರೆ ಯಾವ ಪ್ರಕಾರದ ಅಡ್ಡಿ ತೋರಿಸಿದ) ಆಜ್ಞೆಯ ಪತ್ರಕ್ಕೆ ಹುಂಡಿ ಎನ್ನುವರು.

ಹುಂಡಿಯು ವ್ಯವಹಾರಕ್ಕೆ ಮೂರು ಇಸಮುಗಳು ಬೇಕು. ಯಾವ ವೆಂದರೆ:— (೧) ಹುಂಡಿಯನ್ನು ಬರೆದುಕೊಡುವನು (ಸಾವುಕಾರನು) (೨) ಹುಂಡಿಯನ್ನು ಬರೆಯಿಸಿಕೊಳ್ಳುವವನು (ರಾಖಲೆಯು), (೩) ಹುಂಡಿಯ ಹಣವನ್ನು ಕೊಡುವವನು (ಅಡತದಾರನು).

ಪ್ರತಿಯೊಂದು ಹುಂಡಿಯಲ್ಲಿ ಯಾರಿಗೆ, ಎಂದು, ಎಷ್ಟು, ರಕಮು ಕೊಡಬೇಕೆಂಬದನ್ನು ಸ್ಪಷ್ಟವಾಗಿ ಬರೆದಿರಬೇಕು. ಸಾವುಕಾರನು ಹುಂಡಿಯನ್ನು ಬರೆದುಕೊಟ್ಟ ಮೇಲೆ ಅಡತದಾರನಿಗೆ ಇಂಥವನ ಹೆಸರಿನಿಂದ ಹುಂಡಿಯನ್ನು ಬರೆದಿರುತ್ತದೆ ಎಂದು ತಿಳಿಸುತ್ತಾನೆ. ರಾಖಲೆಯು ಅಡತದಾರನಿಗೆ ಹುಂಡಿಯನ್ನು ತೋರಿಸಿ ಅದರ ಮೇಲೆ ಸ್ವೀಕರಿಸದೆ (ಒಪ್ಪಿದೆ) ಎಂದು ಬರೆಯಿಸಿ ಮಿತಿ ಹಾಕಿಸಿ ಅಡತದಾರನ ಸಹಿಯನ್ನು ಮಾಡಿಸುವನು. ಇದಕ್ಕೆ ಹುಂಡೀ **ಲಾಗೂ ಮಾಡೋಣ ಅಥವಾ ಪಟಾಯಿಸೋಣ**ವೆನ್ನುವರು. ಹುಂಡೀ ಲಾಗೂ ಮಾಡಿದ ಹೊರತು ಅಡತದಾರನು ಹಣವನ್ನು ಕೊಡುವದಕ್ಕೆ ಬದ್ಧನಾಗುವದಿಲ್ಲ. ಸಾವುಕಾರನ ಕಡೆಯಿಂದ ಪತ್ರ ಬರದಿದ್ದರೆ, ಅಡತದಾರನು ಎಂದೂ ಹುಂಡಿಯನ್ನು ಸ್ವೀಕರಿಸುವದಿಲ್ಲ. ಅವನು ತಾನು ಸ್ವೀಕರಿಸಿದ ಹುಂಡಿಯ ನಕಲನ್ನು ಮಾಡಿಕೊಂಡು ರಾಖಲೆಗೆ ಅದನ್ನು ತಿರುಗಿ ಕೊಡುತ್ತಾನೆ. ಹುಂಡಿ ಮುರಿಸುವದಾದರೆ ಬೆನ್ನಮೇಲೆ ಶರಾ ಬರೆಯಬೇಕು. ಇಂಥವನಿಗೆ ಇದರ ರಕಮು ಕೊಡು ಎಂದು ಬರೆದು ಮಾಲಕನು ಸಹಿಮಾಡಿ ಹುಂಡಿಯನ್ನು ಕೊಟ್ಟರೆ, ತೆಗೆದುಕೊಂಡವನಿಗೆ ಹುಂಡಿಯ ರಕಮು ಸಿಗುತ್ತದೆ. ಹೀಗೆ ಬರೆದು ಸಹಿಮಾಡುವದಕ್ಕೆ ಬೇಚಾ (ಶರಾ) ಹಾಕೋಣವೆನ್ನುವರು. ಮುಂದೆ ಮುದ್ದತು ತುಂಬಿದ ಮೇಲೆ ರಾಖಲೆಯ (ಹುಂಡಿ ಇದ್ದವನ) ಕಡೆಗೆ ಅಡತದಾರನು ಹೋಗಿ ಅವನ ನಡತೆ, ಇದ್ದ ಸ್ಥಳ ಮುಂತಾದದ್ದನ್ನು ವಿಚಾರಿಸುವನು. ಮತ್ತು ಖಾತ್ರಿಯ ಸಲುವಾಗಿ ತನಗೂ ರಾಖಲೆಗೂ ಗೊತ್ತಿದ್ದ ಒಬ್ಬ ದೊಡ್ಡ ಮನುಷ್ಯನ ಸಹಿ (ಸಾಕ್ಷಿ) ಯನ್ನು ಹುಂಡಿಯ ಮೇಲೆ ಹಾಕಿಸುವನು. ಅಡತದಾರನು ಹುಂಡಿಯ ರಕಮನ್ನು ಮುಟ್ಟಿಸಿ "ಇಂತಿಷ್ಟು ರಕಮು ಮುಟ್ಟಿತು" ಎಂದು ಹುಂಡಿಯ ಮೇಲೆ ಬರೆಯಿಸಿ ರಾಖಲೆಯ ಸಹಿ ಮಾಡಿಸುವನು ಇದಕ್ಕೆ ಮಾಲಕನ **ಕಬ್ಜಾ** ತೆಗೆದುಕೊಳ್ಳೋಣ (**ಭರಪಾಯಿ**) ಅನ್ನುವರು.

ಭರಪಾಯಿ ಹಾಕಿದ ಹುಂಡಿಯನ್ನು ಅಡತದಾರನು ಸಾವುಕಾರನ ಕಡೆಗೆ ಕಳಿಸುವನು. ಇದಕ್ಕೆ '**ಜೋಕೆ**' ಅನ್ನುವರು.

ಸಾವುಕಾರನ ನೌಕರನಾಗಲಿ, ಸಾಲಗಾರನಾಗಲಿ, ದಲಾಲನಾಗಲಿ, ವ್ಯಾಪಾರಿಯಾಗಲಿ, ಅಥವಾ ಕೇವಲ ಹುಂಡಿಯ ವ್ಯಾಪಾರವನ್ನೇ ಮಾಡು ವವನಾಗಲಿ ಆಡತದಾರನಾಗಬಹುದು. ಅಡತದಾರನು ಸಾವುಕಾರನಿಗೆ ಕೊಟ್ಟ ರಕಮಿಗೆ ೧೦೦ಕ್ಕೆ ಕೆಲವೊಂದು ಬಡ್ಡಿಯನ್ನು ತೆಗೆದುಕೊಳ್ಳುತ್ತಾನೆ ಅಥವಾ ಸಾವುಕಾರನು ಮೊದಲೇ ರಕಮನ್ನು ಇಟ್ಟಿದ್ದರೆ, ಅವನಿಗೆ ಇಟ್ಟ ಮುದ್ದತಿನ ವರೆಗೆ ಬಡ್ಡಿಯನ್ನು ಕೊಡುತ್ತಾನೆ. ಸಾವುಕಾರನು ತನಗೆ ಹಣದ ಅಗತ್ಯವಿಲ್ಲದಾಗ ಹುಂಡಿಯನ್ನು ಬರೆದುಕೊಡಬೇಕಾದರೆ ರಾಖಲೆಯ ಕಡೆಯಿಂದ ಹುಂಡಿಯ ರಕಮಿನ ಮೇಲೆ ೧೦೦ಕ್ಕೆ ಕೆಲವೊಂದು ರಕಮನ್ನು ಅಂದರೆ ಸಾಧಾರಣವಾಗಿ ೨ ಆಣೆಯಂತೆ ತೆಗೆದುಕೊಳ್ಳುತ್ತಾನೆ. ಹಣದ ಅಗತ್ಯವಿದ್ದರೆ ತಾನೇ ಕೊಡುತ್ತಾನೆ. ಆದರೆ ಕೊಡುವ ಅಥವಾ ತೆಗೆದು ಕೊಳ್ಳುವ ಹಣವು ೧೦೦ ರೂ. ಗಳಿಗೆ ೪ ಆಣೆಗಳಿಗಿಂತ ಎಂದೂ ಹೆಚ್ಚಾಗು ವದಿಲ್ಲ. ಹೀಗೆ ೧೦೦ ರೂ. ಹುಂಡಿಗೆ ೧೦೦ಕ್ಕಿಂತ ಹೆಚ್ಚು ತೆಗೆದುಕೊಂಡ ಹಣಕ್ಕೆ **ಹೊರಬಟ್ಟಾ** ಎಂದೂ ಕಡಿಮೆ ತೆಗೆದುಕೊಂಡ ಹಣಕ್ಕೆ ಒಳಬಟ್ಟಾ ಎಂದೂ ಅನ್ನುವರು. ಇವೆರಡಕ್ಕೂ ಸಾಮಾನ್ಯವಾಗಿ **ಹುಂಡಾವಳಿ** ಅನ್ನುವರು.

೩. ಹುಂಡಿಯ ಪ್ರಕಾರಗಳು:— ಹುಂಡಿಯಲ್ಲಿ ೧೨ ಪ್ರಕಾರ ಗಳು ಇರುತ್ತವೆ. ಮೊದಲು ಹುಂಡಿಯಲ್ಲಿ (೧) ದರ್ಶನಿ (೨) ಮುದ್ದತಿ (೩) ಬಂದ ಮುದ್ದತಿ ಎಂಬ ಮೂರು ಪ್ರಕಾರಗಳನ್ನು ಮಾಡಬೇಕು.

(೧) ದರ್ಶನಿ:— ಹುಂಡಿಯನ್ನು ಪಟಾಯಿಸಿದ ಕೂಡಲೆ ಅಡತ ದಾರನು ಹುಂಡಿಯ ರಕಮನ್ನು ಕೊಡಬೇಕೆಂದು ಬರೆದ ಹುಂಡಿಗೆ **ದರ್ಶನಿ ಹುಂಡಿ** ಅನ್ನುವರು.

ದರ್ಶನಿ ಹುಂಡಿಯ ರಕಮನ್ನು ಸಂಜೆಯ ಮುಂದೆ ಕೊಡುವ ರೂಢಿ ಯುಂಟು. ಈ ಹುಂಡಿ ಮುಂಜಾನೆ ಲಾಗೂ ಮಾಡಿದರೆ ಅಡತದಾರನು ಹುಂಡೀ ತಂದವನ ಸ್ಥಳಕ್ಕೆ ಹೋಗಿ ಆವನ ನಡತೆಯನ್ನು ವಿಚಾರಿಸಿ ಹುಂಡೀ

ಭರಪಾಯಿ ಹಾಕಿಸುತ್ತಾನೆ. ಹಾಗು ಮೂರು ದಿವಸಗಳ ಅವಧಿಯಲ್ಲಿ ಹುಂಡಿಯ ರಕಮನ್ನು ಅವನಿಗೆ ಒಪ್ಪಿಸುತ್ತಾನೆ.

(೨) **ಮುದ್ದತಿ ಹುಂಡಿ:–** ಹುಂಡಿಯನ್ನು ಲಾಗೂ ಮಾಡಿದ ಮೇಲೆ ಇಂತಿಷ್ಟು ದಿವಸಕ್ಕೆ ಅಡತದಾರನು ಹುಂಡಿಯ ರಕಮನ್ನು ಕೊಡಬೇಕೆಂದು ಬರೆದಿರುವ ಹುಂಡಿಗೆ **ಮುದ್ದತಿ ಹುಂಡಿ** ಅನ್ನುವರು.

ಹುಂಡಿಯನ್ನು ಲಾಗೂ ಮಾಡಿದ ಕೂಡಲೆ ಅಡತದಾರನು ಹುಂಡಿಯ ನಕಲನ್ನು ಮಾಡಿಕೊಂಡು ಮುದ್ದತು ತುಂಬಿದ ಮೂರು ದಿವಸಕ್ಕೆ ಭರಪಾಯಿ ಹಾಕಿಸಿ ಹುಂಡಿಯ ರಕಮನ್ನು ರಾಖಲೆಗೆ ಕೊಡುತ್ತಾನೆ.

(೩) **ಬಂದ ಮುದ್ದತಿ ಹುಂಡಿ:—** ಹುಂಡಿಯನ್ನು ಬರೆದಂದಿನಿಂದ ಇಂತಿಷ್ಟು ದಿವಸಗಳಲ್ಲಿ ಅಡತದಾರನು ಹುಂಡಿಯ ರಕಮನ್ನು ಕೊಡಬೇಕೆಂದು ಬರೆದಿರುವ ಹುಂಡಿಗೆ **ಬಂದ ಮುದ್ದತಿ ಹುಂಡಿ** ಅನ್ನುವರು. ಮುದ್ದತು ತುಂಬಿದ ಮೇಲೆ ಈ ಹುಂಡಿಯು ದರ್ಶನಿ ಹುಂಡಿಯಾಗುವದು.

ಈ ಮೂರು ಪ್ರಕಾರದ ಹುಂಡಿಗಳಲ್ಲಿ ಪ್ರತಿಯೊಂದರಲ್ಲಿ ಪುನಃ ಶಹಾಜೋಗ, ಧನಿಜೋಗ, ನಿಶಾನ್‌ಜೋಗ ಮತ್ತು ನಾಮಜೋಗ ಎಂಬ ನಾಲ್ಕು ಪ್ರಕಾರಗಳಿರುತ್ತವೆ.

(ಅ) **ಶಹಾಜೋಗ ದರ್ಶನಿ ಹುಂಡಿ:—** ಹುಂಡಿಯನ್ನು ತಂದ ಯೋಗ್ಯ ಮನುಷ್ಯನಿಗೆ ಹುಂಡಿಯ ರಕಮನ್ನು ಬೇಡಿದ ಕೂಡಲೆ ಕೊಡಬೇಕೆಂದು ಬರೆದಿರುವ ಹುಂಡಿಗೆ **ಶಹಾಜೋಗ ದರ್ಶನಿ ಹುಂಡಿ** ಅನ್ನುವರು.

ಕಾಯಿದೆಯಂತೆ ಶಹಾಜೋಗ ದರ್ಶನಿ ಹುಂಡಿಗೆ ಭರಪಾಯಿ ಹಾಕಿಸುವ ಕಾರಣವಿಲ್ಲ. ಆದರೆ ಕೆಲವರು ಭರಪಾಯಿಯನ್ನು ಹಾಕಿಸುವರು. ಕೆಲವರು ಹಾಕಿಸದೆ ಹಾಗೇ ಇಡುವರು.

(ಬ) **ಧನಿಜೋಗ ದರ್ಶನಿ ಹುಂಡಿ:—** ಹುಂಡಿಯಲ್ಲಿ ಬರೆದ ರಾಖಲೆಗೆ ಹುಂಡಿಯ ರಕಮು ಬೇಡಿದ ಕೂಡಲೆ ಕೊಡಬೇಕೆಂದು ಬರೆದ ಹುಂಡಿಗೆ **ಧನಿಜೋಗ ದರ್ಶನಿ ಹುಂಡಿ** ಅನ್ನುವರು. ಇಂಥ ಹುಂಡಿಯನ್ನು ಯಾತ್ರೆಗೆ ಹೋಗುವವರೂ ವ್ಯಾಪಾರದ ಸ್ಥಳಕ್ಕೆ ಹೋಗುವವರೂ ತೆಗೆದುಕೊಳ್ಳುತ್ತಾರೆ.

(ಕ) **ನಿಶಾ(ನ್)ಜೋಗ ದರ್ಶನಿ ಹುಂಡಿ:—** ಹುಂಡಿಯು ರಕಮನ್ನು ಗುರುತು ಇಲ್ಲದ ಮನುಷ್ಯನಿಗೆ ಮುಟ್ಟಿಸಬೇಕಾದರೆ ಅಂಥವನ ಅವಶ್ಯವಾದ ಗುರುತುಗಳನ್ನು ಬರೆದು ಇಂಥವನಿಗೆ ಬೇಡಿದ ಕೂಡಲೆ ರಕಮನ್ನು ಕೊಡಬೇಕೆಂದು ಬರೆದಿರುವ ಹುಂಡಿಗೆ **ನಿಶಾ(ನ್)ಜೋಗ ದರ್ಶನಿ ಹುಂಡಿ** ಅನ್ನುವರು. ಹುಂಡಿಯ ಮಾಲಕನಿಗೆ (ರಾಖಲೆಗೆ) ಸಾಕ್ಷಿಗಳು ಸಿಗದಂಥಲ್ಲಿ ಇಂಥ ಹುಂಡಿಗಳನ್ನು ಬರೆದು ಕೊಡುತ್ತಾರೆ.

(ಡ) ನಾಮಜೋಗ ದರ್ಶನಿ ಹುಂಡಿ: - ಹುಂಡಿಯಲ್ಲಿ ರಾಖಲೆಯಲ್ಲದೆ ಮತ್ತೊಬ್ಬ ಮನುಷ್ಯನ ಹೆಸರು ಬರೆದಿದ್ದರೆ, ಅವನಿಗೆ ಹುಂಡಿಯ ರಕಮನ್ನು ಬೇಡಿದ ಕೂಡಲೆ ಕೊಡಬೇಕೆಂದು ಬರೆದಿದ್ದರೆ, ಆ ಹುಂಡಿಗೆ **ನಾಮಜೋಗ ದರ್ಶನಿ ಹುಂಡಿ** ಅನ್ನುವರು. ಇಂಥ ಹುಂಡಿಯನ್ನು ಭರಪಾಯಿ ಹಾಕಿಸಿದ ಹೊರತು ಅಡತದಾರನು ರಕಮನ್ನು ಕೊಡುವದಿಲ್ಲ.

ಇದರಂತೆ ಮುದ್ದತಿ, ಬಂದ ಮುದ್ದತಿ, ಹುಂಡಿಗಳನ್ನು ಬರೆಯಬಹುದು.

ಹುಂಡಿಯ ನಮೂನೆ.

೧.

ಶ್ರೀ

ಶಹಾಜೋಗ ದರ್ಶನಿ ಹುಂಡಿ.

೨ ಆಣೆ
ಸ್ಟಾಂಪು.

ಹುಂಡಿ ನಂಬರು ೧೦.

ರಾ. ರಾ. ನಾಗೇಶರಾವ ಹೇರ್ಲೇಕರ

ಧಾರವಾಡ ಇವರಿಗೆ—

ರಂಗಪ್ಪ ನಾಯಿಕ, ಬೆಳಗಾಂವ ಇವರು ಮಾಡುವ ನಮಸ್ಕಾರಗಳು. ವಿನಂತಿ ವಿಶೇಷ-ನಾವು ನಿಮ್ಮ ಮೇಲೆ ಈಗ ಒಂದು ಹುಂಡಿಯನ್ನು ೫೦೦ ರೂ. (ಐದುನೂರು)ಗೆ ಬರೆದಿರುತ್ತೇವೆ. ಇಲ್ಲಿಯ ರಾಖಲೆ ಶಾ ರಾ. ಶಾಮರಾವ ಗದಗ ಇವರ ಕಡೆಯಿಂದ ತೆಗೆದುಕೊಂಡ ರೂಪಾಯಿಗಳು ಐನೂರು (೫೦೦) ಇವರ ಇಮ್ಮಡಿ ಸಾವಿರ (೧೦೦೦) ರೂಪಾಯಿ ಇದರ ಅರ್ಧ ಮಾಡಿ ಹುಂಡಿ ಮುಟ್ಟಿದ ಕೂಡಲೆ ೫೦೦ ರೂ. ಗಳನ್ನು ಹುಂಡಿ ತಂದವನಿಗೆ ಕೊಡಿರಿ. ಶಹಾಜೋಗ ಹುಂಡಿಯು ರೂಪಾಯಿಗಳನ್ನು

ಮಾಲಕನ ಸ್ಥಳ, ಸ್ವಭಾವ, ಗುರುತುಗಳನ್ನು ಗೊತ್ತು ಮಾಡಿಕೊಂಡು ಅವನ ಕಬ್ಜಾ ತೆಗೆದುಕೊಂಡು ಕೊಡಿರಿ. ಮಿತಿ ಚೈತ್ರ ಬಹುಳ ೧. ದಿನ ಶುಕ್ರವಾರ ಶಕೆ ೧೮೬೦ ತಾ. ೧೫—೪—೩೮.

ಸಹಿ ರಂಗಪ್ಪ ನಾಯಿಕ,

ಶ್ರೀಕಾರ ಸಹಿತ ವಳಿ (೧೫)

"ನಮಸ್ಕಾರಗಳು" ಬದಲಾಗಿ ಜಯಗೋಪಾಳ, ಶರಣ ಶರಣಾರ್ಥಿ ಮೊದಲಾಗಿ ಅವರವರ ಪದ್ಧತಿಯಂತೆ ಬರೆಯಬಹುದು. ಇಮ್ಮಡಿ ಇದರ ಬದಲಾಗಿ ಅರ್ಧ ಅಥವಾ ಅರ್ಧದ ಅರ್ಧ ಎಂತಲೂ ಬರೆಯುತ್ತಾರೆ. ನಾಮಜೋಗ ನಿಶಾ(ನ್)ಜೋಗ, ಧನಿಜೋಗ ಹುಂಡಿ ಇದ್ದರೆ, ಹೀಗೆ ಬರೆಯುತ್ತಾರೆ:- "ರಾ. ರಾ. ವಿನಾಯಕ ಸಾತೆ ಧಾರವಾಡ ಇವರಿಗೆ— ನಾಮಜೋಗ ಹುಂಡಿಯ ರೂ. ಗಳನ್ನು ಮಾಲಕನ ಸ್ಥಳ, ಸ್ವಭಾವ, ಗುರುತುಗಳನ್ನು ಗೊತ್ತು ಮಾಡಿಕೊಂಡು ಅವನ ಕಬ್ಜಾ ತೆಗೆದುಕೊಳ್ಳಬೇಕು." ಮುದ್ದತಿ, ಬಂದ ಮುದ್ದತಿ ಇದ್ದರೆ "ಮುದ್ದತು ತುಂಬಿದ ಮೇಲೆ" ಎಂದು ಬರೆಯಬೇಕು. ಮೇಲೆ ಹೇಳಿದ ೧೨ ಪ್ರಕಾರದ ಹುಂಡಿಗಳನ್ನು ಇದರಂತೆಯೇ ಬರೆಯಬಹುದು.

೪. **ಹುಂಡಿಯ ರೂಪಾಂತರಗಳು**:—(೧) ಪ್ರಾಮಿಸರಿ ನೋಟು (ಘಟ್ಟೀ ಹುಂಡಿ); (೨) ಲಹಣಿ ಹುಂಡಿ; (೩) ಜವಾಬಿ ಹುಂಡಿ ಹೀಗೆ ಮೂರು ರೂಪಾಂತರಗಳು.

(೧) **ಪ್ರಾಮಿಸರಿ ನೋಟು** (ಘಟ್ಟಿಹುಂಡಿ):— ನಿನಗೆ ಇಲ್ಲವೆ ನಿನ್ನ ಆಜ್ಞೆಯನ್ನು ಪಡೆದವನಿಗೆ ಅಥವಾ ಇದನ್ನು ತಂದವನಿಗೆ ಇದರಲ್ಲಿ ಬರೆದ ರಕಮನ್ನು ಬೇಡಿದ ಕೂಡಲೆ ಅಥವಾ ಇದನ್ನು ಬರೆದಂದಿನಿಂದ ಇಂತಿಷ್ಟು ಮುದ್ದತಿಗೆ ಕೊಡುತ್ತೇನೆಂದು ಒಬ್ಬನು ಇನ್ನೊಬ್ಬನಿಗೆ ತನ್ನ ಸಹಿಯಿಂದ ಬರಕೊಟ್ಟ ವಚನ ಪತ್ರಕ್ಕೆ **ಪ್ರಾಮಿಸರಿ ನೋಟು** (ಘಟ್ಟೀ ಹುಂಡಿ) ಅನ್ನುವರು.

೨.

ಬಂದ ಮುದ್ದತಿ ಪ್ರಾಮಿಸರಿ ನೋಟು

ರೂ. ೪೦೦೦ ಧಾರವಾಡ, ಜುಲಾಯಿ ೨೫, ೧೯೩೬

ಈ ದಿನದಿಂದ ಮೂರು ತಿಂಗಳ ಮೇಲೆ ಸಂಗಪ್ಪ ಅಂಕಲಗಿ, ಹುಬ್ಬಳ್ಳಿ ಇವರಿಗೆ ಅಥವಾ ಇವರು ಹೇಳಿದವರಿಗೆ ನಾನು ನಾಲ್ಕು ಸಾವಿರ ರೂಪಾಯಿಗಳನ್ನು ಕೊಡಲಿಕ್ಕೆ ಒಪ್ಪಿಕೊಂಡಿರುತ್ತೇನೆ.

ಸಹಿ ಸಜ್ಜನ ನಿಂಗಪ್ಪಾ

“ ಇವರ ಅಪ್ಪಣೆ ಹೊಂದಿದವರಿಗೆ ” ಇದರ ಬದಲಾಗಿ ರಕಮು ಬೇಡಿದವನಿಗೆ ಸಿಗಬೇಕಾದರೆ “ ಈ ಲೇಖವನ್ನು ತಂದವನಿಗೆ ” ಎಂದು ಬರೆಯುತ್ತಾರೆ.

ಒಬ್ಬನಿಗಿಂತಲೂ ಹೆಚ್ಚು ಜನರು ಬರೆದುಕೊಡುವವರಿದ್ದರೆ, ಮೇಲಿನಂತೆಯೇ ಬರೆದು ಪ್ರತಿಯೊಬ್ಬನು ಸಹಿ ಮಾಡಬೇಕು. ಅಂದರೆ ಸಹಿ ಮಾಡುವವರಲ್ಲಿ ಪ್ರತಿಯೊಬ್ಬನು ಪ್ರಾಮಿಸರಿ ನೋಟಿನ ರಕಮು ಕೊಡಲಿಕ್ಕೆ ಬದ್ಧನಾಗುತ್ತಾನೆ.

೨ (ಅ).

ದರ್ಶನೀ ಪ್ರಾಮಿಸರಿ ನೋಟು

ರೂ. ೩೦೦ ಧಾರವಾಡ, ತಾ. ೧-೨-೩೮

ರಾ. ರಾ. ರಾಮರಾವ ಭೀಮಶಾವ ಸತ್ತಿ, ಸಾ. ಧಾರವಾಡ ಇವರು ಬೇಡಿದಾಗ ಇವರಿಗೆ ಅಥವಾ ಇವರು ಹೇಳಿದವರಿಗೆ ನಾನು ಇಂದಿನ ದಿವಸ ಇವರ ಕಡೆಯಿಂದ ತೆಗೆದುಕೊಂಡ ರೋಖ ಮೂರು ನೂರು ರೂಪಾಯಿಗಳನ್ನು, ದರ ಒಂದು ರೂಪಾಯಿಗೆ ದರ ಒಂದು ತಿಂಗಳಿಗೆ ೧॥ ಪೈ ಪ್ರಕಾರ ಆಗುವ ಬಡ್ಡಿ ಸಹಿತ ತಂದುಕೊಡುತ್ತೇನೆ.

ಶಂಕರರಾವ ಗಣೇಶ ದಾತಾರ.

ಇಲ್ಲಿ ಹುಂಡಿಯನ್ನು ಬರೆದುಕೊಡುವವನೇ ಅಡತದಾರನಾಗುತ್ತಾನೆ. ಆದರೆ ಸಾವುಕಾರನೂ ಅಡತದಾರನೂ ಒಬ್ಬನೇ ಆಗುವನು. ಆದ್ದರಿಂದ ಇದಕ್ಕೆ ಪ್ರಾಮಿಸರಿ ನೋಟ ಬರಕೊಡುವವನು ಒಬ್ಬನು ಅಥವಾ ಅನೇಕರು ಇರಬಹುದು. ಬರಕೊಡುವವರು ಅನೇಕರಿದ್ದಾಗ ಅವರ ಜವಾಬದಾರಿಯು ಸಾಮೂಹಿಕವಾಗಿರಬಹುದು. ಇಲ್ಲವೆ ಸಾಮೂಹಿಕ ವೈಯಕ್ತಿಕವಿರಬಹುದು. ಬರೆ ಸಾಮೂಹಿಕ ಜವಾಬದಾರಿಯು ಇದ್ದರೆ, ಬರಕೊಟ್ಟವರಲ್ಲಿ ಯಾವನಾದರೊಬ್ಬನು ತನ್ನ ಮಟ್ಟಿಗೆ ಆ ಹಣವನ್ನು ಕೊಡುವದಕ್ಕೆ ಬಾಧ್ಯನಲ್ಲವೆಂದು ಕೋರ್ಟಿನಿಂದ ನಿರ್ಣಯವಾದರೆ ಉಳಿದವರ ಕಡೆಯಿಂದ ಹಣ ಬರುವದಿಲ್ಲ. ಜವಾಬದಾರಿಯು ಸಾಮೂಹಿಕ ಮತ್ತು ವೈಯಕ್ತಿಕವಿದ್ದಲ್ಲಿ, ಬರಕೊಟ್ಟವರಲ್ಲಿ ಬೇಕಾದವರ ಕಡೆಯಿಂದ ಎಲ್ಲ ರಕಮನ್ನು ವಸೂಲ ಮಾಡಲಿಕ್ಕೆ

ಬರುತ್ತದೆ. ಒಬ್ಬನ ಕಡೆಯಿಂದ ಬರದಿದ್ದರೆ, ಇನ್ನೊಬ್ಬನ ಕಡೆಯಿಂದ ವಸೂಲ ಮಾಡುವರು. ಪ್ರಾಮಿಸರಿ ನೋಟಿನಲ್ಲಿ ದರ್ಶನಿ, ಬಂದ ಮುದ್ದತಿ ಎಂದು ಎರಡು ಪ್ರಕಾರಗಳಿರುವವಲ್ಲದೆ ಪ್ರತಿಯೊಂದರಲ್ಲಿ ಪುನಃ ಶಹಜೋಗ, ಧನಿಜೋಗ, ನಾಮಜೋಗ ಎಂಬ ಮೂರು ಪ್ರಕಾರಗಳು. ಹೀಗೆ ಇದರಲ್ಲಿ ೬ ಪ್ರಕಾರಗಳು ಇರುತ್ತವೆ

ಕರನ್ಸಿ ನೋಟುಗಳು :— ೧೯೩೪ ರ ಸಂಯುಕ್ತ ರಾಜ್ಯ ಘಟನೆಯ ನಿಯಮಗಳ ಪ್ರಕಾರ ಸ್ಥಾಪಿತವಾದ ರಿಝರ್ವ ಬ್ಯಾಂಕಿನವರು ಒಂದು ರೂಪಾಯಿಯ ನೋಟುಗಳನ್ನು ಬಿಟ್ಟು ಉಳಿದ ನೋಟುಗಳನ್ನು ಹೊರಡಿಸುವರು. ಸರಕಾರದವರು ಸದ್ಯಕ್ಕೆ ಮಾತ್ರ ಒಂದು ರೂಪಾಯಿಯ ನೋಟುಗಳನ್ನು ಹೊರಡಿಸುತ್ತಾರೆ. ಉಳಿದವರಿಗೆ ಇಂಥ ನೋಟುಗಳನ್ನು ತೆಗೆಯಲಿಕ್ಕೆ ಬರುವದಿಲ್ಲ. ನೋಟುಗಳೆಂದರೆ ಶಹಾಜೋಗ ದರ್ಶನಿ ಪ್ರಾಮಿಸರಿ ನೋಟುಗಳು. ಇವುಗಳನ್ನು ಮುರಿಸುವ ಮುಂದೆ ಶರಾ ಬರೆಯುವ ಕಾರಣವಿಲ್ಲ.

(೨) ಲಹಣಿ ಹುಂಡಿ:— ಹುಂಡಿಯ ರಕಮನ್ನಾಗಲಿ ಮತ್ತೊಬ್ಬರ ಮೇಲೆ ತೆಗೆದ ಹುಂಡಿಯನ್ನಾಗಲಿ ಕಳಿಸಿಕೊಡುತ್ತಾನೆ. ಆದರಿಂದ ಲಹಣಿ ಹುಂಡಿಗಳು ಎಂದೂ ದರ್ಶನಿ ಹುಂಡಿಗಳಾಗುವದಿಲ್ಲ. ಇವು ಮುದ್ದತಿ ಬಂದ ಮುದ್ದತಿಗಳಿರುವವು. ಮತ್ತು ಪ್ರತಿಯೊಂದರಲ್ಲಿ ಹಿಂದೆ ಹೇಳಿದಂತೆಯೇ ನಾಲ್ಕು ಪ್ರಕಾರಗಳಿರುವದರಿಂದ ಒಟ್ಟಿಗೆ ೮ ಪ್ರಕಾರಗಳಾಗಬಹುದು.

(೩) ಜವಾಬಿ ಹುಂಡಿ:— ಹುಂಡಿಯಲ್ಲಿ ಹೆಸರು ಇದ್ದವನಿಗೆ ಹುಂಡಿಯ ರಕಮನ್ನು ಮುಟ್ಟಿಸಿ, ಅದರ ಪಾವತಿ ತರಿಸಿಕೊಡುವ ಕರಾರ ಇದ್ದ ಹುಂಡಿಗೆ ಜವಾಬಿ ಹುಂಡಿ ಅನ್ನುವರು. ಇಂಥಲ್ಲಿ ರಾಖಲೆಯ ಹುಂಡಿಯನ್ನು ಸಾವುಕಾರನ ಕಡೆಗೆ ಬಿಟ್ಟು, ರಕಮು ಕೊಟ್ಟ ಬಗ್ಗೆ ಪಾವತಿಯನ್ನು ಮಾತ್ರ ತೆಗೆದುಕೊಳ್ಳುತ್ತಾನೆ.

ಜವಾಬಿ ಹುಂಡಿಯಲ್ಲಿ ಬಂದ ಮುದ್ದತಿ ಎಂಬದು ಒಂದೇ ಪ್ರಕಾರವು. ಇದು ನಿಶಾ(ನ್)ಜೋಗ ಇರುತ್ತದೆ. ಆದದರಿಂದ ಜವಾಬೀ ಹುಂಡಿಗಳು ಯಾವಾಗಲೂ ಬಂದ ಮುದ್ದತಿ (ನಿಶಾನ್)ಜೋಗ ಇರುತ್ತವೆ. ಮನಿ ಆರ್ಡರಗಳು ಜವಾಬೀ ಹುಂಡಿಗಳಾಗುವವು.

೫. **ಪೇಠ ಪರಪೇಠಗಳು:—** ಯಾವದೇ ಕಾರಣದಿಂದ ಹುಂಡಿಯನ್ನು ಕಳಕೊಂಡರೆ, ಹುಂಡಿಯನ್ನು ಬರೆದವನು ಅದರ ಖಾತ್ರಿ ಮಾಡಿಕೊಂಡು ಹುಂಡಿಯ ನಕಲನ್ನು ರಾಖಲೆಗೆ ಕೊಡುತ್ತಾನೆ. ಕಳಕೊಂಡ ಹುಂಡಿಯ ನಕಲಿಗೆ ಪೇಠ ಅನ್ನುವರು. ಪೇಠ ಕಳಕೊಂಡರೆ ಪೇಠಿನ ನಕಲನ್ನು ಕೊಡುವರು. ಅದಕ್ಕೆ ಪರಪೇಠ ಅನ್ನುವರು.

ಪೇಠ

(ಕಳೆದುಕೊಂಡ ಹುಂಡಿಯನ್ನು ಬರೆದಂತೆಯೇ ಬರೆದು ಆದರ ಕೆಳಗೆ)

ಮೂಲ ಹುಂಡಿಯು ನಿಮಗೆ ಲಾಗು ಆಗದೆ. ನಮ್ಮ ಖಾತೆಗೆ ರಕಮು ಖರ್ಚು ಬೀಳದೆ ಇದ್ದರೆ, ಈ ಪೇಠಿನ ಪ್ರಕಾರ ರೂ. (ಅಕ್ಷರದಲ್ಲಿ ಗಳನ್ನು ಕೊಟ್ಟು ಮಾಲಕನ ಕಬ್ಜಾ ತೆಗೆದುಕೊಳ್ಳತಕ್ಕದ್ದು.

ಮಿತಿ. ಶಕೆ. ತಾ. (ಸಹಿ) ರಾಮರಾವ ಗದಗ

೬. **ಹುಂಡಿ ಮತ್ತು ಪ್ರಾಮಿಸರಿ ನೋಟುಗಳಿಗೆ ಹಚ್ಚಬೇಕಾದ ಸ್ಟಾಂಪುಗಳು:—** (ಅ) ಎಲ್ಲ ತರದ ದರ್ಶನಿ ಹುಂಡಿಗಳಿಗೂ ಪ್ರಾಮಿಸರಿ ನೋಟುಗಳಿಗೂ ಅವುಗಳ ರಕಮು ೨೫೦ ರೂ. ಇದ್ದರೆ ೧ ಆಣೆಯ ಟಿಕೀಟನ್ನು ಹಚ್ಚಬೇಕು. ೨೫೦ ರಿಂದ ೧೦೦೦ ರೂ. ತನಕ ೨ ಆಣೆ; ೧೦೦೦ ರೂ. ಮೇಲೆ ರಕಮು ಎಷ್ಟೇ ಇದ್ದರೂ ೪ ಆಣೆ ಟಿಕೇಟನ್ನು ಹಚ್ಚಬೇಕು. ಇವುಗಳಿಗೆ ರೆವ್ಹಿನ್ಯೂ (ಪಾವತಿ) ಟಿಕೀಟಗಳೆಂಬ ಹೆಸರು ಇವುಗಳ ಬದಲು ಸಾದಾ ಪೋಸ್ಟಿನ ಟಿಕೀಟುಗಳನ್ನು ಹಚ್ಚಿದರೆ ನಡೆಯುವದಿಲ್ಲ. (ಬ) ಒಂದು ವರ್ಷಕ್ಕಿಂತ ಕಡಿಮೆ ಅವಧಿಯ ಮುದ್ದತಿ, ಬಂದ ಮುದ್ದತಿ, ಹುಂಡಿಗಳಿಗೆ ಮತ್ತು ಪ್ರಾಮಿಸರಿ ನೋಟುಗಳಿಗೆ ಅವುಗಳ ರಕಮಿನ ಪ್ರಕಾರ ಸ್ಟಾಂಪುಗಳು ಬೇಕಾಗುವವು. (ಕ) ಒಂದು ವರ್ಷಕ್ಕಿಂತ ಹೆಚ್ಚು ಅವಧಿಯ ಮುದ್ದತಿ, ಬಂದ ಮುದ್ದತಿ ಹುಂಡಿಗಳಿಗೆ ಕತಬಿಗಳಂತೆ ಸ್ಟಾಂಪುಗಳು ಬೇಕು.

೭. **ಹುಂಡಿಯ ಜಮಾಖರ್ಚು:—** ೩ ರೀತಿಗಳು ಯಾವವೆಂದರೆ:— ಎಲ್ಲ ಪ್ರಕಾರದ ಹುಂಡಿಗಳನ್ನೂ ಪ್ರಾಮಿಸರಿ ನೋಟುಗಳನ್ನೂ ಜಮಾಖರ್ಚಿನ ಸಲುವಾಗಿ ಹುಂಡಿಗಳೆಂದೇ ತಿಳದಿದೆ.

೧ನೆಯ ರೀತಿ:— ಸಾವುಕಾರನಲ್ಲಿ ರಾಖಲೆಯು ಕೊಟ್ಟ ಹಣವನ್ನು ಅವನ ಹೆಸರಿನಿಂದ ಜಮೆ ಮಾಡಿ ಅಡತದಾರನಿಂದ ಖೋಕೆ ಬಂದ ಮೇಲೆ ರಾಖಲೆಯು ಖಾತೆಗೆ ಖರ್ಚು, ಅಡತದಾರನ ಖಾತೆಗೆ ಖರ್ಚು, ಅಡತದಾರನ ಖಾತೆಗೆ ಜಮೆ ಮಾಡಬೇಕು.

ರಾಖಲೆಯಲ್ಲಿ:— ಸಾವುಕಾರನ ಖಾತೆಗೆ ಖರ್ಚು ಬರೆಯಬೇಕು. ರಕಮು ಮುಟ್ಟಿದ ಮೇಲೆ ಅದೇ ಖಾತೆಗೆ ಜಮೆ ಬರೆಯಬೇಕು.

ಅಡತದಾರನಲ್ಲಿ: — ಹುಂಡಿಯ ಮಾಲಕನಿಗೆ (ರಾಖಲೆಗೆ) ರಕಮನ್ನು ಕೊಟ್ಟು ಸಾವುಕಾರನ ಖಾತೆಗೆ ಖರ್ಚು ಬರೆದು ಸಾವುಕಾರನಿಗೆ ಖೋಕೆ ಕಳಿಸಬೇಕು. ದರ್ಶನಿ ಹುಂಡಿಯಿಂದ ರಕಮು ಬೇಡಿದ ಕೂಡಲೆ ಸಿಗುವದು. ಎಲ್ಲ ಪ್ರಕಾರದ ದರ್ಶನಿ ಹುಂಡಿಗಳ ಜಮಾಖರ್ಚನ್ನು ಈ ರೀತಿಯಿಂದ ಮಾಡಬಹುದು.

೨ನೆಯ ರೀತಿ:— ಸಾವುಕಾರನಲ್ಲಿ–ರಾಖಲೆಯಿಂದ ಬಂದ ಹಣವನ್ನು ಮೊದಲೆ ಅಡತದಾರನ ಖಾತೆಗೆ ಜಮೆ ಮಾಡಬೇಕು. ರೋಖು ರಕಮು ಇಲ್ಲದೆ ಹುಂಡಿಯನ್ನು ಬರೆದರೆ ರಾಖಲೆಯು ಖಾತೆಗೆ ಖರ್ಚು, ಅಡತದಾರನ ಖಾತೆಗೆ ಜಮೆ ಮಾಡಬೇಕು. ಖೋಕೆ ಬಂದ ಮೇಲೆ ಜಮಾಖರ್ಚನ್ನು ಬರೆಯದೆ ಕೀರ್ದಿಯಲ್ಲಿ ಮೊದಲೇ ಬರೆದ ಅಡತದಾರನ ಖಾತೆಯಲ್ಲಿ ಹುಂಡೀ ಭರಪಾಯಿ ಆದ ಮಿತಿಯ (ತಾರೀಖ) ನ್ನು ಹಾಕಬೇಕು.

ರಾಖಲೆಯಲ್ಲಿ:— ಅಡತದಾರನ ಖಾತೆಗೆ ಖರ್ಚು ಬರೆಯಬೇಕು. ಉದ್ದರಿ ಇದ್ದರೆ ಸಾವುಕಾರನ ಖಾತೆಗೆ ಜಮೆ, ಅಡತದಾರನ ಖಾತೆಗೆ ಖರ್ಚು ಬರೆಯಬೇಕು. ರಕಮು ಮುಟ್ಟಿದ ಮೇಲೆ ಅಡತದಾರನ ಖಾತೆಗೆ ಜಮೆ ಮಾಡಬೇಕು. ರಕಮು ಸಾವುಕಾರನಿಗೆ ಕೊಟ್ಟಾಗ ಅವನ ಖಾತೆಗೆ ಖರ್ಚು ಬರೆಯಬೇಕು.

ಅಡತದಾರನಲ್ಲಿ:— ಸಾವುಕಾರನ ಖಾತೆಗೆ ಖರ್ಚು ಬರೆದು ರಾಖಲೆಗೆ ರಕಮನ್ನು ಕೊಡಬೇಕು. ಮುದ್ದತಿ ಅಥವಾ ಬಂದ ಮುದ್ದತಿ ಹುಂಡಿ ಇದ್ದರೆ, ಸಾವುಕಾರನ ಖಾತೆಗೆ ಖರ್ಚು ರಾಖಲೆಯ (ಹುಂಡಿ ಹಣ ತಕ್ಕೊಳ್ಳುವವನ) ಖಾತೆಗೆ ಜಮೆ ಮಾಡಬೇಕು. ಮುದ್ದತು ತುಂಬಿದ ಮೇಲೆ

ಹುಂಡಿಯ ರಕಮನ್ನು ಮಾಲಕನ ಖಾತೆಗೆ ಖರ್ಚು ಬರೆದು, ಅವನಿಗೆ ಹಣ ಕೊಟ್ಟು ಹುಂಡಿಯಲ್ಲಿ ಭರಪಾಯಿ ಹಾಕಿಸಬೇಕು.

ಹುಂಡಿಗಳ ಜಮಾಖರ್ಚನ್ನು ೨ನೆಯ ರೀತಿಯಿಂದ ಮಾಡುವ ರೂಢಿಯು ಈ ದೇಶದಲ್ಲಿದೆ. ದರ್ಶನಿ ಹುಂಡಿಯ ರಕಮು ಬೇಡಿದಾಗ ಸಿಗುವದರಿಂದ ಸಾಲಕೊಟ್ಟಂತೆ ಅಥವಾ ಸಾಲ ತೆಗೆದುಕೊಂಡಂತೆ ಆಗುತ್ತದೆ. ಆದದರಿಂದ ಎಲ್ಲ ದರ್ಶನಿ ಹುಂಡಿಗಳ ಜಮಾಖರ್ಚನ್ನು ೨ನೆಯ ರೀತಿಯಿಂದ ಮಾಡುವದು ಒಳ್ಳೇದು. ಆದರೆ ಹೀಗೆ ಹುಂಡಿಯ ಜಮಾಖರ್ಚನ್ನು ಬರೆದರೆ ಹುಂಡಿಯ ವ್ಯಾಪಾರದ ರಕಮು ಪ್ರತ್ಯೇಕವಾಗಿ ಸಿಗುವದಿಲ್ಲ. ಆದದರಿಂದ ಹುಂಡಿಯ ವ್ಯಾಪಾರ ಬಹಳವಿದ್ದವರು ಕೆಳಗಿನ ೩ನೆಯ ರೀತಿಯಿಂದ ಜಮಾಖರ್ಚನ್ನು ಮಾಡುವರು.

ಉದಾ:— (೧) ಅನು ಕನಿಗೆ ೫೦ ರೂ. ಗಳ ಸಲುವಾಗಿ ಕ್ಷನ ಮೇಲೆ ಶಹಜೋಗ ದರ್ಶನಿ ಹುಂಡಿಯನ್ನು ಬರಕೊಟ್ಟನು. ತಾ. ೩—೫—೩೮ ಇ. ಈ ಜಮಾಖರ್ಚನ್ನು, ಕ್ಷನು ರೋಖ ಹಣ ಕೊಡದೆ ಇದ್ದಾಗ ಮತ್ತು ರೋಖ ಕೊಟ್ಟಾಗ ಹೇಗೆ ಬರೆಯಬೇಕೆಂಬದನ್ನು ಮೂವರಲ್ಲಿ ಬರೆದು ತೋರಿಸಿರಿ.

(೧) ಅನ ಕೀರ್ದಿ ತಾ. ೩—೫—೧೯೩೮

ಜಮೆ	ರೂ.	ಖರ್ಚು	ರೂ.
೫೦ ಕ್ಷನ ಖಾತೆ:— ಕನಿಗೆ ಶಹಾಜೋಗ ದರ್ಶನಿ ಹುಂಡಿಯನ್ನು ಕ್ಷ ಇವನ ಮೇಲೆ ಬರಕೊಟ್ಟದ್ದರಿಂದ ಕನ ಖಾತೆಗೆ ಖರ್ಚು ಖಾ. ಪಾ.		೫೦ ಕನ ಖಾತೆ:— ಕ್ಷನ ಮೇಲೆ ಶಹಾಜೋಗ ದರ್ಶನಿ ಹುಂಡಿ ಕೊಟ್ಟು ಸಾಲ ತೀರಿಸಿದ್ದರಿಂದ ಕ್ಷನ ಖಾತೆಗೆ ಜಮೆ ಖಾ. ಪಾ.	

ಖತಾವಣಿ

ಖಾತೆ:— ಕ್ಷ

ಜಮೆ	ರೂ.	ಖರ್ಚು	ರೂ.
೫೦ ಕೀ. ಪಾ. ೧ ತಾ. ೩-೫-೩೮			

ಖಾತೆ:— ಕ

ಜಮೆ	ರೂ.	ಖರ್ಚು	ರೂ.
		೫೦ ಕೀ. ಪಾ. ೧ ತಾ. ೩-೫-೩೮	

(೨) ಕನ ಕೀರ್ದಿ ತಾ. ೩—೫—೧೯೩೪

ಜಮೆ ರೂ.	ಖರ್ಚು ರೂ.
೫೦ ಆನಖಾತೆ:— ಹುಂಡಿ ಬಂದದರಿಂದ ಕ್ಷನ ಖಾತೆಗೆ ಖರ್ಚು ಖಾ. ಪಾ.	೫೦ ಕ್ಷನ ಖಾತೆ:— ಅನು ಶಹಾಜೋಗ ದರ್ಶನಿ ಹುಂಡಿ ಇವನ ಮೇಲೆ ಕೊಟ್ಟದ್ದರಿಂದ ಅನ ಖಾತೆಗೆ ಜಮೆ ಖಾ. ಪಾ.

ಖತಾವಣಿ

ಖಾತೆ:— ಅ		ಖಾತೆ:— ಕ್ಷ	
ಜಮೆ—ರೂ.	ಖರ್ಚು—ರೂ.	ಜಮೆ—ರೂ.	ಖರ್ಚು—ರೂ.
೫೦ ಕೀ. ಪಾ. ೧ ತಾ. ೩-೫-೩೪			೫೦ ಕೀ. ಪಾ. ೧ ತಾ. ೩.೫.೩೪

(೩) ಕ್ಷನ ಕೀರ್ದಿ ತಾ. ೩—೫—೧೯೩೪

ಜಮೆ ರೂ.	ಖರ್ಚು ರೂ.
೫೦ ಕನ ಖಾತೆ:— ಶಹಾಜೋಗ ದರ್ಶನಿ ಹುಂಡಿ ಬಂದದ್ದರಿಂದ ಅನ ಖಾತೆಗೆ ಖರ್ಚು ಖಾ. ಪಾ.	೫೦ ಅನ ಖಾತೆ:— ಶಹಾಜೋಗ ದರ್ಶನಿ ಹುಂಡಿ ಬಂದದ್ದರಿಂದ ಕನ ಖಾತೆಗೆ ಜಮೆ. ಖಾ. ಪಾ.

ಖತಾವಣಿ

ಖಾತೆ:— ಕ		ಖಾತೆ:— ಅ	
ಜಮೆ—ರೂ.	ಖರ್ಚು—ರೂ.	ಮೆ—ರೂ.	ಖರ್ಚು—ರೂ.
೫೦ ಕೀ ಪಾ. ೧ ತಾ. ೩-೫-೩೪			೫೦ ಕೀ. ಪಾ. ೧ ೩-೫-೩೪

(೨) ಕ್ಷನು ೫೦ ರೂ. ರೋಖು ಕೊಟ್ಟಾಗ ಕನ ಕೀರ್ದಿಯಲ್ಲಿ ೫೦ ರೂ. ಅನ ಖಾತೆಗೆ ಜಮೆ ಕ್ಷನ ಕೀರ್ದಿಯಲ್ಲಿ ಅನ ಖಾತೆಗ ಖರ್ಚು ಬೀಳುತ್ತದೆ.

೩ ನೆಯ ರೀತಿ :—ಸಾವುಕಾರನಲ್ಲಿ:—ರಾಖಲೆಯು ಕೊಟ್ಟ ಹಣವನ್ನು ಹುಂಡಿ ವಿಕ್ರೀ ಖಾತೆಗೆ ಜಮೆ ಹಿಡಿಯಬೇಕು. ಹುಂಡಿಯನ್ನು ಉದ್ದರಿ ಬರೆದರೆ ರಾಖಲೆಯ ಖಾತೆಗೆ ಖರ್ಚು, ಹುಂಡಿ ವಿಕ್ರೀ ಖಾತೆಗೆ

ಜಮೆ ಬರೆಯುಬೇಕು. ಖೋಕೆ ಬಂದ ಮೇಲೆ ಹುಂಡಿ ವಿಕ್ರೀ ಖಾತೆಗೆ ಖರ್ಚು, ಅಡತದಾರನ ಖಾತೆಗೆ ಜಮೆ ಮಾಡಬೇಕು.

ರಾಖಲೆಯಲ್ಲಿ:— ಹುಂಡಿ ಖರೀದಿ ಖಾತೆಗೆ ಖರ್ಚು ಬರೆಯುಬೇಕು. ರಕಮು ಬಂದರೆ ಅಥವಾ ಯಾರಿಗಾದರೂ ಹುಂಡಿ ಕೊಟ್ಟರೆ ಅದೇ ಖಾತೆಗೆ ಜಮೆ ಬರೆಯುಬೇಕು.

ಅಡತದಾರನಲ್ಲಿ:— ಹುಂಡಿ ಲಾಗೂ ಮಾಡಿದ ಕೂಡಲೆ ಅದರ ನಕಲನ್ನು ಮಾಡಿಕೊಂಡು ಮುದ್ದತು ತುಂಬಿದ ಮೇಲೆ ಹುಂಡಿಯ ರಕಮನ್ನು ಸಾವುಕಾರನ ಖಾತೆಗೆ ಖರ್ಚು ಬರೆದು ಹುಂಡಿಯ ಮಾಲಕನಿಗೆ ರಕಮನ್ನು ಕೊಡಬೇಕು. ಮುದ್ದತಿ ಅಥವಾ ಬಂದ ಮುದ್ದತಿ ಹುಂಡಿ ಇದ್ದರೆ, ಸಾವುಕಾರನ ಖಾತೆಗೆ ಖರ್ಚು ಮಾಲಕನ (ರಾಖಲೆಯ) ಖಾತೆಗೆ ಜಮೆ ಬರೆಯಬೇಕು. ಮುದ್ದತು ತುಂಬಿದ ಮೇಲೆ ಹುಂಡಿಯ ರಕಮನ್ನು ಮಾಲಕನ ಖಾತೆಗೆ ಖರ್ಚು ಹಾಕಿ ಮಾಲಕನಿಗೆ ಹಣವನ್ನು ಕೊಡಬೇಕು.

೧೦. **ಸಕ್ರಾಯಿ ನಕ್ರಾಯಿ:—** ಅಡತದಾರನು ಹುಂಡಿ ಸ್ವೀಕರಿಸದಿದ್ದರೆ, ಅಥವಾ ಮೊದಲು ಸ್ವೀಕರಿಸಿ ಹುಂಡಿಯ ಮುದ್ದತು ತುಂಬಿದ ಮೇಲೆ ಹುಂಡಿ ನಾಕಾರಿಸಿದರೆ (ಹುಂಡಿಯ ರಕಮು ಕೊಡದಿದ್ದರೆ) ಸಾವುಕಾರನು ಹುಂಡಿಯ ರಕಮನ್ನೂ ಹುಂಡಾವಳಿಯನ್ನೂ ತಿರುಗಿ ಕೊಡುವದಲ್ಲದೆ ೧೦೦ಕ್ಕೆ ಕೆಲವೊಂದು ಹಾನಿಯನ್ನು ರಾಖಲೆಗೆ ಕೊಡಬೇಕಾಗುವುದು. ಇದಕ್ಕೆ **ಸಕ್ರಾಯಿ, ನಕ್ರಾಯಿ** (ಸ್ವೀಕಾರ ನಕಾರ) ಅನ್ನುವರು. ಬೇರೆ ಬೇರೆ ಸ್ಥಳಗಳಲ್ಲಿ ಸಕ್ರಾಯಿ ನಕ್ರಾಯಿಗಳ ದರವು ಬೇರೆ ಬೇರೆ ಇರುತ್ತದೆ. ಯೋಗ್ಯ ಮುದ್ದತಿಗಿಂತ ಹೆಚ್ಚು ದಿವಸಗಳ ಬಡ್ಡಿಯನ್ನು ಸಾವುಕಾರರು ರಾಖಲೆಗೆ ಕೊಡಬೇಕಾಗುವದು. ಸಾವುಕಾರರಿಂದ ಪತ್ರ ಬರದಿದ್ದರೆ, ತನ್ನ ಹತ್ತರ ಹಣವಿಲ್ಲದಿದ್ದರೆ, ಇಲ್ಲವೇ ತಾನೇ ದಿವಾಳಿ ತೆಗೆದಿದ್ದರೆ, ಅಡತದಾರನು ಹುಂಡಿಯನ್ನು ನಾಕರಿಸುತ್ತಾನೆ (ನಿರಾಕರಿಸುತ್ತಾನೆ). ಹುಂಡಿ ಬರೆದ ಕೂಡಲೆ ಸಾವುಕಾರನು ದಿವಾಳಿ ತೆಗೆದರೆ, ಅಡತದಾರನು ಅವನ ಹುಂಡಿ ನಾಕರಿಸುವನು, ಈಗ ರಾಖಲೆಯ ಹಣವು ಮುಳುಗಿ ಹೋಗುವದು. ಭರಪಾಯಿ ಆಗಿದ್ದರೆ, ಅಡತದಾರನು ಹಣ ಕೊಡಬೇಕಾಗುವದು. ಅಡತದಾರನು ಬೇಕಾದಾಗ ದಿವಾಳಿ ತೆಗೆದರೂ ರಾಖಲೆಯು

ಸಾವುಕಾರನಿಂದ ಹಣ ತೆಗೆದುಕೊಳ್ಳುತ್ತಾನೆ. ಆದರೆ ಇಂಥ ಪ್ರಸಂಗಗಳಲ್ಲಿ ರಾಖಲೆಗೆ ಸಕ್ರಾಯಿ ನಕ್ರಾಯಿ ಸಿಗುವದಿಲ್ಲ.

ಹುಂಡಿ ತಿರುಗಿದ ಕೂಡಲೆ ಮಾಡುವ ಜಮಾಖರ್ಚು:— ಸಾವುಕಾರನಲ್ಲಿ ಅಡತದಾರನ ಖಾತೆಗೆ ಖರ್ಚು ಹಾಕಿ ರಾಖಲೆಯ ಖಾತೆಗೆ ಹುಂಡಿಯ ರಕಮನ್ನೂ ಹುಂಡಾವಳಿ ಸಕ್ರಾಯಿ ನಕ್ರಾಯಿ ಇವುಗಳ ಬೇರೀಜನ್ನೂ ಜಮೆ ಬರೆಯಬೇಕು. ಸಕ್ರಾಯಿ ನಕ್ರಾಯಿಯನ್ನು ಆ ಖಾತೆಗೆ ಖರ್ಚು ಬರೆಯಬೇಕು.

ರಾಖಲೆಯಲ್ಲಿ:— ಅಡತದಾರನ ಖಾತೆಗೆ ಹುಂಡಿಯ ರಕಮು ಜಮೆ, ಸಾವುಕಾರನ ಖಾತೆಗೆ ಹುಂಡಿಯ ರಕಮನ್ನೂ ಹುಂಡಾವಳಿ ಸಕ್ರಾಯಿ ನಕ್ರಾಯಿ ಇವುಗಳ ಬೇರೀಜನ್ನೂ ಖರ್ಚು ಬರೆಯಬೇಕು. ಸಕ್ರಾಯಿ ನಕ್ರಾಯಿಯನ್ನು ಅದೇ ಖಾತೆಗೆ ಜಮೆ ಹಿಡಿಯಬೇಕು.

ಅಡತದಾರನಲ್ಲಿ:— ಸ್ವೀಕರಿಸದಿದ್ದರೆ ಜಮಾಖರ್ಚು ಮಾಡುವ ಕಾರಣವಿಲ್ಲ. ಸ್ವೀಕರಿಸಿ ಜಮಾಖರ್ಚು ಮಾಡಿದ್ದರೆ, ಹುಂಡಿಯ ರಕಮು ರಾಖಲೆಯ ಖಾತೆಗೆ ಖರ್ಚು, ಸಾವುಕಾರನ ಖಾತೆಗೆ ಜಮೆ ಬರೆಯಬೇಕು.

ಉದಾ:— (೬) ೧೦—೭—೩೮ ಇ. ಅನು ಕನ ರಾಖಲೆಯಿಂದ ಇನ ಮೇಲೆ ೧೬೦೦ ರೂ. ರೋಖ ತಕ್ಕೊಂಡು ೧೫ ದಿವಸದ ಬಂದ ಮುದ್ದತಿ ನಾಮಜೋಗ ಹುಂಡಿಯನ್ನು ಬರೆದನು. ಇನು ಹುಂಡಿ ಸ್ವೀಕರಿಸಿದರೂ ಮುದ್ದತು ತುಂಬಿದ ಮೇಲೆ ರಕಮು ಕೊಡಲಿಲ್ಲ. ೭ ದಿವಸಗಳ ಮೇಲೆ ಅನು ತಾನೇ ರಕಮನ್ನು ಕೊಟ್ಟನು. ಸಕ್ರಾಯಿ ನಕ್ರಾಯಿ, ಬಡ್ಡಿಯ ದರಗಳು ೧೦೦ಕ್ಕೆ ೧೨ ರೂ. ಪ್ರ. ಅವೆ ಈ ವ್ಯವಹಾರಗಳ ಜಮಾಖರ್ಚನ್ನು ಮೂವರಲ್ಲಿಯೂ ಮಾಡಿರಿ.

ಅನ ಕೀರ್ದಿ ತಾ. ೧೦—೭—೩೮

ಜಮೆ ರೂ.		ಖರ್ಚು ರೂ.
೧೬೦೦	ಹುಂಡಿವಿಕ್ರೀ ಖಾತೆ:— ಕನು ೧೫ ದಿವಸ ಬಂದ ಮುದ್ದತಿ ಹುಂಡಿ ಇನ ಮೇಲೆ ಬರೆಯಿಸಿ ಕೊಂಡದ್ದರಿಂದ ಖಾ. ಪಾ.	

ತಾ ೨೫—೭—೩೮

ಜಮೆ	ರೂ.	ಖರ್ಚು	ರೂ.
೧೬೦೦	ಕನ ಖಾತೆ:— ಹುಂಡಿ ನಾಕರಿಸಿದ್ದರಿಂದ ಹುಂಡಿ ವಿಕ್ರೀ ಖಾತೆಗೆ ಖರ್ಚು ಖಾ. ಪಾ.	೧೬೦೦	ಹುಂಡಿ ವಿಕ್ರಿ ಖಾತೆ:— ಕನಿಗೆ ಕೊಟ್ಟ, ೧೫ ದಿ. ಬಂದ ಮುದ್ದತಿ ಹುಂಡಿ ತಿರುಗಿದ್ದರಿಂದ ಕನ ಖಾತೆಗೆ ಜಮೆ

ತಾ. ೧—೮—೩೮

ಜಮೆ	ರೂ.	ಖರ್ಚು	ರೂ.
		೧೬೦೦	ಕನ ಖಾತೆ:— ನಾಕರಿಸಿದ ಹುಂಡಿಯು ರಕಮು ಕೊಟ್ಟದ್ದರಿಂದ ಖಾ. ಪಾ.
		೮	ಸಕ್ರಾಯಿ ನಕ್ರಾಯಿ ಖಾತೆ:— ೧೫ ದಿವಸದ ೧೬೦೦ ರೂ. ಗಳ ಮೇಲೆ ೧೦೦ಕ್ಕೆ ೧೨ ರೂ. ಪ್ರ. ಖಾ. ಪಾ.
			ಬಡ್ಡೀ ಖಾತೆ:— ೭ ದಿವಸದ ೧೬೦೦ ರೂ. ಗಳ ಮೇಲೆ ೧೦೦ಕ್ಕೆ ೧೨ ರೂ. ಪ್ರಕಾರ. ಖಾ. ಪಾ.

ಖತಾವಣಿ

ಹುಂಡಿ ವಿಕ್ರೀ ಖಾತೆ		ಕನ ಖಾತೆ	
ಜಮೆ—ರೂ.	ಖರ್ಚು—ರೂ.	ಜಮೆ—ರೂ.	ಖರ್ಚು—ರೂ.
೧೬೦೦ ಕೀ. ಪಾ. ೧೫ ೧೦-೭-೩೮	೧೬೦೦ ಕೀ. ಪಾ ೩೦ ೨೫-೭-೩೮	೧೬೦೦ ಕೀ. ಪಾ. ೩೦ ೨೫-೭-೩೮	೧೬೦೦ ಕೀ. ಪಾ. ೯೦ ೧-೮-೩೮

ಸಕ್ರಾಯಿ ನಕ್ರಾಯಿ ಖಾತೆ		ಬಡ್ಡಿಯ ಖಾತೆ	
ಜಮೆ——ರೂ.	ಖರ್ಚು——ರೂ.	ಜಮೆ——ರೂ.	ಖರ್ಚು——ರೂ.
	೮ ಕೀ. ಪಾ. ೩೧		೪ ಕೀ. ಪಾ. ೩೧
	ತಾ. ೧-೮-೩೮		ತಾ. ೧-೮-೩೮

ಕನ ಕೀರ್ದಿ. ತಾ. ೧೦—೭—೩೮

ಜಮೆ ——ರೂ.	ಖರ್ಚು ——ರೂ.
	೧೬೦೦ ಹುಂಡಿ ಖರೀದಿ ಖಾತೆ:— ಅನ ಕಡೆಯ ಇನ ಮೇಲೆ ಬರೆದ ೧೫ ದಿವಸದ ಹುಂಡಿ ಕೊಂಡದ್ದರಿಂದ ಖಾ. ಪಾ.

ತಾ. ೨೫—೭—೩೮

ಜಮೆ ——ರೂ.	ಖರ್ಚು ——ರೂ.
೧೬೦೦ ಹುಂಡಿ ಖರೀದಿ ಖಾತೆ:—ಅನ ಹುಂಡಿ ತಿರುಗಿ ಬಂದದ್ದರಿಂದ ಆವನ ಖಾತೆಗೆ ಖರ್ಚು ಖಾ. ಪಾ.	೬೦೦ ಅನ ಖಾತೆ:— ಇವನು ಕೊಟ್ಟ ಹುಂಡಿ ತಿರುಗಿದ್ದರಿಂದ ಹುಂಡಿ ಖರೀದಿ ಖಾತೆಗೆ ಜಮೆ ಖಾ. ಪಾ.

೧—೮—೧೯೩೮

ಜಮೆ ——ರೂ.	ಖರ್ಚು ——ರೂ.
೧೬೦೦ ಅನ ಖಾತೆ:— ಹುಂಡಿಯ ರಕಮು ಮುಟ್ಟಿದ್ದರಿಂದ ಖಾ. ಪಾ.	
೮ ಸಕ್ರಾಯಿ ನಕ್ರಾಯಿ ಖಾತೆ:— ಆನಿಂದ ಬಂದದ್ದು ಖಾ. ಪಾ.	
೪ ಬಡ್ಡಿಯ ಖಾತೆ:—೧೬೦೦ ರೂ. ಗಳ ೭ ದಿವಸದ ಬಡ್ಡಿಯು ಪರ ೧೦೦ಕ್ಕೆ ೧೨ ರೂ. ಪ್ರಕಾರ ಖಾ. ಪಾ.	

ಖತಾವಣಿ

ಹುಂಡೀ ಖರೀದಿ ಖಾತೆ		ಅನ ಖಾತೆ	
ಜಮೆ——ರೂ.	ಖರ್ಚು——ರೂ.	ಜಮೆ——ರೂ.	ಖರ್ಚು——ರೂ.
೧೬೦೦ ಕೀ. ಪಾ. ೨೦	೧೬೦೦ ಕೀ. ಪಾ. ೧೦	೧೬೦೦ ಕೀ. ಪಾ. ೨೫	೧೬೦೦ ಕೀ. ಪಾ. ೨೦
೨೫-೭-೩೮	೧೦-೭-೩೮	೧-೮-೩೮	೨೫-೭-೩೮

ಸಕ್ರಾಯಿ ನಕ್ರಾಯಿ ಖಾತೆ		ಬಡ್ಡೀ ಖಾತೆ	
ಜಮೆ——ರೂ.	ಖರ್ಚು——ರೂ.	ಜಮೆ——ರೂ.	ಖರ್ಚು——ರೂ.
೮ ಕೀ. ಪಾ. ೨೫		೪ ಕೀ. ಪಾ. ೨೫	
ತಾ. ೧-೯-೩೮		ತಾ. ೧-೮-೩೮	

ಇಲ್ಲಿ ಹುಂಡಿ ಲಾಗೂ ಮಾಡಿದ ಮೇಲೆ ಜಮಾ ಖರ್ಚು ಬರೆಯುದೆ ಯಾದಿಯಲ್ಲಿ ಅನ ಹುಂಡಿ ಸ್ವೀಕರಿಸಿದೆ ಎಂದು ಬರೆದುಕೊಂಡಿದ್ದರೆ, ನಕಾರ ಮಾಡಿದ ದಿವಸ ಅದೇ ಯಾದಿಯಲ್ಲಿ ಅನ ಹುಂಡಿ ನಾಕಾರಿಸಿತು ಎಂದು ಶರಾ ಬರೆಯಬೇಕು, ಆಂದರೆ ಜಮಾಖರ್ಚು ಮಾಡುವ ಕಾರಣವು ಬೀಳುವದಿಲ್ಲ.

ಸ್ವೀಕಾರ ಮಾಡಿದ ಮೇಲೆ ಜಮಾ ಖರ್ಚು ಮಾಡಬೇಕಾದರೆ ಹೀಗೆ ಮಾಡಬೇಕು. ತಾ. ೨೨-೭-೩೮ನೆಯ ದಿವಸ ಹುಂಡಿ ಲಾಗೂ ಮಾಡಿದರೆಂದು ತಿಳಿದರೆ—

ಇನ ಕೀರ್ದಿ ತಾ. ೨೨—೭—೩೮

ಜಮೆ	ರೂ.	ಖರ್ಚು	ರೂ.
೧೬೦೦	ಕನ ಖಾತೆ:— ಅನು ನಮ್ಮ ಮೇಲೆ ಬರೆದ ಹುಂಡಿಯನ್ನು ಸ್ವೀಕರಿಸಿದ್ದರಿಂದ ಅನ ಖಾತೆಗೆ ಖರ್ಚು ಖಾ. ಪಾ.	೧೬೦೦	ಅನ ಖಾತೆ:— ಕನ ದಾಖಲೆಯಿಂದ ಕಳಿಸಿ ಕೊಟ್ಟ ಹುಂಡಿ ಸ್ವೀಕರಿಸಿದ್ದರಿಂದ ಕನ ಖಾತೆಗೆ ಜಮೆ ಖಾ. ಪಾ.

ತಾ. ೨೫—೭—೩೮

ಜಮೆ	ರೂ.	ಖರ್ಚು	ರೂ.
೧೬೦೦	ಅನ ಖಾತೆ:— ಕನ ದಾಖಲೆಯಿಂದ ಬಂದ ಹುಂಡಿಯನ್ನು ನಾಕಾರಿಸಿದ್ದರಿಂದ ಅವನ ಖಾತೆಗೆ ಖರ್ಚು ಖಾ. ಪಾ.	೧೬೦೦	ಕನ ಖಾತೆ:— ಅನು ಹುಂಡಿ ನಾಕರಿಸಿದ್ದರಿಂದ ಅವನ ಖಾತೆಗೆ ತಿರುಗಿ ಜಮೆ. ಖಾ. ಪಾ.

ಖತಾವಣಿ

ಕನ ಖಾತೆ:—		ಅನ ಖಾತೆ	
ಜಮೆ——ರೂ.	ಖರ್ಚು——ರೂ.	ಜಮೆ——ರೂ.	ಖರ್ಚು——ರೂ.
೧೬೦೦ ಕೀ. ಪಾ. ೧೫	೧೬೦೦ ಕೀ. ಪಾ. ೧೮	೧೬೦೦ ಕೀ. ಪಾ. ೧೮	೧೬೦೦ ಕೀ. ಪಾ. ೧೫
೨೨-೭-೩೮	೨೫-೭-೩೮	೨೫-೭-೩೮	೨೨-೭-೩೮

೧೧ **ಚೆಕ್**:— ನಾಣ್ಯ ನೋಟುಗಳ ಬಳಕೆಯನ್ನು ವ್ಯಾಪಾರದಲ್ಲಿ ಕಡಿಮೆ ಮಾಡಬೇಕೆಂದು ವ್ಯಾಪಾರಸ್ಥರು ಹುಂಡಿಗಳನ್ನು ಉಪಯೋಗಿಸಹತ್ತಿದರು. ಆದರೆ ಬ್ಯಾಂಕುಗಳು ದಿನದ ಸಾಮಾನ್ಯ ವ್ಯವಹಾರಗಳಲ್ಲಿ ಚೆಕ್ಕುಗಳನ್ನು ಬಹಳ ಪ್ರಚಾರದಲ್ಲಿ ತಂದು ನಾಣ್ಯ ನೋಟುಗಳ ಬಳಕೆಯನ್ನು ತೀರ ಕಡಿಮೆ ಮಾಡಿದವು. ಆದ್ದರಿಂದ ಪಾಶ್ಚಿಮಾತ್ಯರು ವಿಶೇಷತಃ ಸುಧಾರಿಸಿದವರು ನಾಣ್ಯ ನೋಟುಗಳಿಗಿಂತ ಚೆಕ್ಕುಗಳನ್ನು ದಿನದ ಬಳಕೆಯಲ್ಲಿ ಹೆಚ್ಚಾಗಿ ಉಪಯೋಗ ಮಾಡುತ್ತಾರೆ.

(೧) ಗಿರಾಕಿಯು (ಹಣ ಇಟ್ಟವನು) ತನ್ನ ಬ್ಯಾಂಕಿನ ಮೇಲೆ ಬರೆದ ದರ್ಶನಿ ಹುಂಡಿಗೆ ಇಂಗ್ಲಿಷದಲ್ಲಿ ಚೆಕ್ ಅನ್ನುತ್ತಾರೆ.

ಗಿರಾಕಿಯು ತಾನು ಕೊಡಬೇಕಾದವರಿಗೆ ಬ್ಯಾಂಕಿನಿಂದ ಹಣ ತಂದು ಕೊಡದೆ ಅವರವರ ಹೆಸರಿನಿಂದ ತನ್ನ ಬ್ಯಾಂಕಿನ ಮೇಲೆ ಚೆಕ್ಕುಗಳನ್ನು ಬರೆದು ಕೊಡುತ್ತಾನೆ. ಚೆಕ್ಕು ದರ್ಶನಿ ಹುಂಡಿಯಾದರೂ ಹುಂಡಿಯಂತೆ ಅದನ್ನು ಸ್ವೀಕರಿಸುವ ಕಾರಣವಿಲ್ಲ. ರಾಖಲೆಯು ಚೆಕ್ಕು ಬ್ಯಾಂಕಿಗೆ ಕೊಟ್ಟ ಕೂಡಲೆ ಅವನಿಗೆ ಅದರ ರಕಮು ಸಿಗುತ್ತದೆ. ರಾಖಲೆಯು ಚೆಕ್ಕು ಬಹಳ ದಿನ ತನ್ನಲ್ಲಿ ಇಟ್ಟುಕೊಳ್ಳದೆ ಅದನ್ನು ಬ್ಯಾಂಕಿಗೆ ಆದಷ್ಟು ಬೇಗನೆ ಕಳಿಸಿ ರಕಮು ತರಿಸಬೇಕು. ಇಲ್ಲದಿದ್ದರೆ ಬ್ಯಾಂಕು ಅಷ್ಟರಲ್ಲಿ ಮುಳುಗಿ ಗಿರಾಕಿಗೆ ಹಾನಿಯಾದರೆ ಅಥವಾ ಬ್ಯಾಂಕಿನಲ್ಲಿ ಗಿರಾಕಿಯ ಹಣ ತೀರಿದ್ದರೆ ಅವನಿಗೆ ಬ್ಯಾಂಕಿನಿಂದ ಹಣ ದೊರೆಯುವದಿಲ್ಲ. ಚೆಕ್ಕಿನ ಮೇಲಿನ ತಾರೀಖು ಬಹಳ ಹಿಂದಿನದು ಅಥವಾ ಮುಂದಿನದು ಇದ್ದರೆ ಚೆಕ್ಕಿನ ಹಣವು ಸಿಗುವದಿಲ್ಲ. ಆದರೆ ವರ್ಷಾರಂಭದಲ್ಲಿ ಚೆಕ್ಕಿನ ಮೇಲಿನ ತಾರೀಖು, ತಿಂಗಳು ಸರಿಯಿದ್ದು ಹಿಂದಿನ ವರ್ಷದ ಇಸವಿ ಬಹಳ ಸಾರೆ ಗಿರಾಕಿಗಳು ಹಾಕುವರು. ಇಂಥಲ್ಲಿ ಚೆಕ್ಕಿನ ನಂಬರು ಇತ್ಯಾದಿ

ನೋಡಿ ಇಸವಿ ತಪ್ಪಿಬಿದ್ದಿರಬೇಕೆಂದು ಗೊತ್ತಾದರೆ ಬ್ಯಾಂಕಿನವರು ಚಕ್ಕಿನ ರಕಮು ಕೊಡುತ್ತಾರೆ. ಗಿರಾಕಿಯು ರಾಖಲೆಗೆ ರಕಮು ಕೊಡಬಾರದೆಂದು ಬ್ಯಾಂಕಿಗೆ ತಿಳಿಸಿದರೆ ರಕಮು ಕೊಡುವದಿಲ್ಲ. ಬ್ಯಾಂಕು ಸುರುವಾದ ಕೂಡಲೆ ಗಿರಾಕಿಯು ಚಕ್ಕಿನ ರಕಮನ್ನು ಕೊಡಬಾರದೆಂದು ತಿಳಿಸುವ ಸಂಭವವಿರುವದರಿಂದ ಬ್ಯಾಂಕು ಸುರುವಾಗುವ ಮೊದಲು ಅಥವಾ ಬಂದಾದ ಮೇಲೆ ಬ್ಯಾಂಕಿಗೆ ಚೆಕ್ಕನ್ನು ತಂದರೆ ರಕಮು ಸಿಗುವದಿಲ್ಲ. ಗಿರಾಕಿಯ ಸಹಿ ಚೆಕ್ಕಿನ ಮೇಲೆ ಸರಿಯಾಗಿರದಿದ್ದರೆ ಬ್ಯಾಂಕಿನವರು ರಕಮು ಕೊಡುವದಿಲ್ಲ. ಬ್ಯಾಂಕಿಗೆ ಪೋಸ್ಟಿನಿಂದ ಚೆಕ್ಕು ಕಳಿಸಿ ರೋಖು ರಕಮು ಕಳಿಸಿರೆಂದು ಅಪರಿಚಿತ ರಾಖಲೆಯು ಬರೆದರೆ ಬ್ಯಾಂಕಿನವರು ರಕಮು ಕಳಿಸುವದಿಲ್ಲ. ಗಿರಾಕಿಗೆ ಯಾವ ಕಾರಣದಿಂದಲೂ ಹಾನಿಯಾಗಬಾರದೆಂದು ಈ ರೀತಿ ಬ್ಯಾಂಕಿನವರು ಕಾಳಜಿ ತೆಗೆದುಕೊಳ್ಳುತ್ತಾರೆ.

(೨) ಚೆಕ್ಕುಗಳಲ್ಲಿ ಎರಡು ಪ್ರಕಾರಗಳು:– (೧) **ಬೇರರ ಚೆಕ್** ಮತ್ತು ೨) **ಆರ್ಡರ ಚೆಕ್**. ಗಿರಾಕಿಯು ತನ್ನ ಬ್ಯಾಂಕಿನ ಮೇಲೆ ಬರೆದ ಶಹಾಜೋಗ ದರ್ಶನಿ ಹುಂಡಿಗೆ **ಬೇರರ ಚೆಕ್** ಅನ್ನುತ್ತಾರೆ. ರಾಖಲೆಯು ಬ್ಯಾಂಕಿಗೆ ಚೆಕ್ ಕೊಟ್ಟ ಕೂಡಲೆ ತಾರೀಖು, ರಕಮು, ಸಹಿ ಇತ್ಯಾದಿಗಳು ಸರಿಯಿದ್ದರೆ ರಾಖಲೆಯು ತುಡುಗು ಮಾಡಿದ್ದರೂ (ಅದು ತಿಳಿಯದಿದ್ದರೆ) ಬ್ಯಾಂಕಿನವರು ಹಣ ಕೊಡುವರು.

ಗಿರಾಕಿಯು ತನ್ನ ಬ್ಯಾಂಕಿನ ಮೇಲೆ ಬರೆದ ನಾಮಜೋಗ ದರ್ಶನಿ ಹುಂಡಿಗೆ **ಆರ್ಡರ ಚೆಕ್** ಅನ್ನುತ್ತಾರೆ. ಆರ್ಡರ ಚೆಕ್ಕಿನ ರಕಮು ಸಿಗಬೇಕಾದರೆ ರಾಖಲೆಯು ಅದರ ಬೆನ್ನಮೇಲೆ ತನ್ನ ಸಹಿ ಮಾಡಿ (ಶರಾ ಹಾಕಿ) ಬ್ಯಾಂಕಿಗೆ ಕೊಡಬೇಕು. ಶರಾ ಹಾಕುವ ರೀತಿಗಳು ಅನೇಕವಿದ್ದರೂ ಇಲ್ಲಿ ಹಲವು ಪ್ರಕಾರಗಳನ್ನು ಮಾತ್ರ ಹೇಳಿದೆ. ಗಿರಾಕಿಯು ಆರ್ಡರ ಚೆಕ್ಕಿನಲ್ಲಿ ರಾಖಲೆಯ ಹೆಸರು ಬರೆಯುವಾಗ ಒಂದು ಅಕ್ಷರವು ಬಿಟ್ಟಿದ್ದರೆ ಅಥವಾ ಹೆಚ್ಚಿಗೆ ಬಿದ್ದಿದ್ದರೆ ರಾಖಲೆಯು ಆ ಹೆಸರಿನಂತೆ ಶರಾ ಹಾಕಿ ಅದರ ಕೆಳಗೆ ತನ್ನ (ನಿಜವಾದ) ಸಹಿ ಮಾಡಬೇಕು. ಯಾಕಂದರೆ ರಾಖಲೆಯ ಸಹಿ ಮತ್ತು ಬರೆದ ಹೆಸರು ಸರಿಯಾಗದಿದ್ದರೆ ಬ್ಯಾಂಕು ರಕಮು ಕೊಡುವದಿಲ್ಲ. ಶರಾ ಹಾಕುವಾಗ ರಾಖಲೆಯು ತನ್ನ ಕಿತಾಬುಗಳನ್ನು ಬರೆಯುದೆ ತನ್ನ ಸಹಿ

ಮಾತ್ರ ಮಾಡಬೇಕು. ರಾಖಲೆಗೆ ಸಹಿ ಮಾಡಲಿಕ್ಕೆ ಬರದಿದ್ದರೆ ಚೆಕ್ಕಿನ ಬೆನ್ನ ಮೇಲೆ ಅವನ ಹೆಬ್ಬಟ್ಟಿನ ಗುರ್ತು ಮಾಡಿಸಿ ಅದರ ಕೆಳಗೆ ಪರಿಚಯದ ಗೃಹಸ್ಥನ ಸಾಕ್ಷಿ ಹಾಕಿಸುವರು. ಮದುವೆಯಾದ ಹೆಂಗಸು ಶರಾ ಹಾಕುವದಾದರೆ ಅವಳು ತನ್ನ ಸಹಿ ಮಾಡಿ ಇಂಥವರ ಹೆಂಡತಿ ಎಂದು ಬರೆಯುಬೇಕು. ಒಂದು ಕಂಪನಿಯು ರಾಖಲೆ ಇದ್ದರೆ ಆ ಕಂಪನಿಯ ಹೆಸರು ಮೊದಲು ಬರೆದು, ಅದರ ಕೆಳಗೆ ಅಧಿಕಾರಿಯು ತನ್ನ ಸಹಿ ಮಾಡಿ ಅದರ ಕೆಳಗೆ ಇಂಥ ಅಧಿಕಾರಿಯು ಎಂದು ಬರೆಯುಬೇಕು.

ಖೊಟ್ಟಿ ಸಹಿ ಮಾಡಿದವನಿಗೆ (ರಾಖಲೆಗೆ) ಇಂಥ ಹುಂಡಿಯ ರಕಮು ಸಿಗಬಹುದು.

(೩) ಚೆಕ್ಕಿನ ನಮೂನೆ

ನಂಬರು :- ೭೬೯೫	ನಂ. ೭೬೯೫ ತಾರೀಖು ೫—೯—೧೯೪೪
ತಾರೀಖು ೫-೯-೧೯೪೪	ಸೆಂಟ್ರಲ್ ಬ್ಯಾಂಕ್ ಲಿಮಿಟೆಡ್, ಧಾರವಾಡ
ಹೆಸರು :- ಚನ್ನಪ್ಪಾ ಜವಳಿ	ರಾ. ರಾ. ಚನ್ನಪ್ಪಾ ಜವಳಿ ಇವರಿಗೆ ಅಥವಾ
ರೂಪಾಯಿ ೩೬-೧೦-೬	ಇದನ್ನು ತಂದವನಿಗೆ ಮೂವತ್ತಾರು ರೂಪಾಯಿ
ರಾ. ಬಿ.	ಹತ್ತು ಆಣೆ, ಆರು ಪೈಗಳನ್ನು ಕೊಡಿರಿ.
ಸಹಿ	ರೂ. ೩೬—೧೦—೬ ರಾಮರಾವ ಬೀಳಗಿ

ಇಲ್ಲಿ ರಾಮರಾಯರು ಬ್ಯಾಂಕಿನಲ್ಲಿ ಹಣ ಇಟ್ಟ ಮೇಲೆ ಬ್ಯಾಂಕಿನವರು ಅವರಿಗೆ ಒಂದು ಚೆಕ್ಕ ಬುಕ್ಕನ್ನು ಕೊಡುವರು. ಅವರ ಮಾದರಿಯ ಮೂರು ನಾಲ್ಕು ಸಹಿಗಳನ್ನು ಸಹಿ ಪುಸ್ತಕದಲ್ಲಿ ತೆಗೆದುಕೊಳ್ಳುವರು. ರಾಮರಾವ ಬೀಳಗಿಯವರು ಚೆಕ್ಕಿನಲ್ಲಿ ಮಾಡಿದ ಸಹಿ, ಬ್ಯಾಂಕಿಗೆ ಕೊಟ್ಟ ಮಾದರಿಯ ಸಹಿಗೆ ಸರಿಯಾಗಬೇಕು. ಅಂದಿನ ತಾರೀಖು ೫ನೆಯ ತಾ॥ ಗಿಂತ ಬಹಳ ಹಿಂದಿನದು, ಇಲ್ಲವೆ ಬಹಳ ಮುಂದಿನದು ಇರಬಾರದು. ಅಕ್ಷರದಲ್ಲಿ ಬರೆದ ರಕಮು ಅಂಕಿಗಳಲ್ಲಿ ಬರೆದ ರಕಮಿಗೆ ಸರಿ ಇರಬೇಕು. ರಾಮರಾಯರಿಗೆ ಕೊಟ್ಟ ಚೆಕ್‌ಬುಕ್ಕಿನ ನಂಬರುಗಳಲ್ಲಿ ಈ ಚೆಕ್ಕಿನ ನಂಬರು ಇರಬೇಕು.

ಶಹಾಜೋಗ (ಬೇರರ) ಚೆಕ್ ಇದ್ದರೆ ರಕಮನ್ನು ಬ್ಯಾಂಕಿನವರು ಕೊಡುತ್ತಾರೆ. ನಾಮಜೋಗ (ಆರ್ಡರ) ಚೆಕ್ ಇದ್ದರೆ ಶರಾ ಹಾಕಿದ್ದು ಬರೋಬರಿ ಇದ್ದರೆ ರಕಮು ಕೊಡುತ್ತಾರೆ.

(೪) ಸಾದಾ ಚೆಕ್ಕಿನ ರಕಮು ಇಷ್ಟು ಸುಲಭವಾಗಿ ಸಿಗುವದರಿಂದ ಚೆಕ್ಕುಗಳ ಕಳವಾಗಿ ಗಿರಾಕಿಗೆ ಹಾನಿಯಾಗಹತ್ತಿತು. ತುಡುಗನಿಗೆ, ಖೊಟ್ಟಿ ಸಹಿ ಮಾಡಿದವನಿಗೆ ಚೆಕ್ಕಿನ ರಕಮು ದೊರೆಯಬಾರದೆಂದೂ ದೊರೆತರೂ ಯಾರಿಗೆ ಹಣ ಸಿಕ್ಕಿತೆಂದು ಒಮ್ಮೆಲೆ ಸುಲಭವಾಗಿ ಗೊತ್ತಾಗಬೇಕೆಂದೂ ಚೆಕ್ಕಿನ ಮೇಲೆ ಎರಡು ಅಡ್ಡ ಗೀಟಗಳನ್ನು ಗಿರಾಕಿಯಾಗಲಿ, ರಾಖಲೆಯಾಗಲಿ ಹಾಕುವರು. ಇಂಥ ಚೆಕ್ಕಿಗೆ **ಜೋಡುಗೆರೆಹಾಕಿದ** ಕ್ರಾಸ್ಡ) ಚೆಕ್ಕ ಅನ್ನುವರು. ಈ ಮೊದಲು ಹೇಳಿದ ಚೆಕ್ಕಿಗೆ ಸಾದಾ ಚೆಕ್ ಅನ್ನುವರು.

ಜೋಡುಗೆರೆ ಹಾಕಿದ (ಕ್ರಾಸ್ಡ) ಚೆಕ್ಕಿನ ನಮೂನೆ

ನಂ. ೧೫೦೬	ನಂ. ೧೫೦೬ ಧಾರವಾಡ ತಾ. ೨೨-೯-೧೯೪೪
ತಾರೀಖು ೨೨—೯—೪೪	**ಸೆಂಟ್ರಲ್ ಬ್ಯಾಂಕ ಲಿಮಿಟೆಡ್**
ಹೆಸರು-ಶಂಕರರಾವ ದೇಸಾಯಿ	ರಾ. ರಾ. ಶಂಕರರಾವ ದೇಸಾಯಿ ಇವರಿಗೆ ಅಥವಾ
ರೂಪಾಯಿ ೪೫	ಇವರ ಅಪ್ಪಣೆ ಪಡೆದವನಿಗೆ ನಾಲ್ವತ್ತೈದು ರೂ. ಗಳನ್ನು ಕೊಡಿರಿ.
ರಾ. ಕು.	ರೂ ೪೫/-
ಸಹಿ.	ರಾಮರಾವ ಕುಲಕರ್ಣಿ

ಜೋಡುಗೆರೆ ಹಾಕಿದ ಚೆಕ್ಕಿನ ರಕಮು ರಾಖಲೆಗೆ ಸಾದಾ ಚೆಕ್ಕಿನ ರಕಮಿನಂತೆ ಒಮ್ಮೆಲೆ ರೋಖು ಸಿಗುವದಿಲ್ಲ. ಅವನೂ ಅದೇ ಬ್ಯಾಂಕಿನ ಗಿರಾಕಿ ಇದ್ದರೆ ಅವನ ಖಾತೆಗೆ ಆ ಚೆಕ್ಕಿನ ರಕಮು ಜಮೆ ಮಾಡುತ್ತಾರೆ. ಇಲ್ಲದಿದ್ದರೆ ರಾಖಲೆಯು ಮತ್ತೊಂದು ಬ್ಯಾಂಕಿಗೆ ಚೆಕ್ಕನ್ನು ಮೊದಲು

ಕೊಟ್ಟು ತನ್ನ ಖಾತೆ ಇದ್ದರೆ, ಅಥವಾ ಇರದಿದ್ದರೆ ಹೊಸ ಖಾತೆಯನ್ನು ಹಾಕಿಸಿ, ಅದಕ್ಕೆ ಜಮೆ ಮಾಡಿಸುವನು. ಆ ಮೇಲೆ ಬ್ಯಾಂಕಿನವರು ಯೋಗ್ಯ ಬ್ಯಾಂಕಿನಿಂದ ರಕಮು ತರಿಸಿ ಅವನಿಗೆ ಕೊಡುವರು. ಮುರಿಸಿದ ಚೆಕು ಕಳವಾದದ್ದೆಂದು ಮುಂದೆ ತಿಳಿದರೆ ತುಡುಗನ ಗುರ್ತು ಮತ್ತು ಪತ್ತೆ ಬ್ಯಾಂಕಿನಿಂದ ಸಹಜವಾಗಿ ಗೊತ್ತಾಗುವದು ಕಾರಣ ಇಂಥ ಚೆಕ್ಕುಗಳ ತುಡುಗು ಬಹಳವಾಡಿ ಆಗುವದಿಲ್ಲ. ಆದುದರಿಂದ ಪರವೂರಿಗೆ ಹಣ ಕಳಿಸುವವರು ಆರ್ಡರ ಮತ್ತು ಕ್ರಾಸ್ಡ ಚೆಕ್ಕುಗಳನ್ನು ಕಳಿಸುತ್ತಾರೆ.

ಕ್ರಾಸ್ಡ ಚೆಕ್ಕನ್ನು ಮುರಿಸಬೇಕಾದರೆ ಬ್ಯಾಂಕಿನಲ್ಲಿ ಖಾತೆಯಿದ್ದವರೇ ಬೇಕು. ಹಾಗಿರದಿದ್ದರೆ ಹಣ ಪಡೆಯುವದಕ್ಕಾಗಿ ಖಾತೇದಾರರಿದ್ದ ತನ್ನ ಗುರುತಿನ ಇನ್ನೊಬ್ಬರ (ಇನ್ನೊಂದು ಬ್ಯಾಂಕಿನ) ಹೆಸರಿನಿಂದ ಬರೆದು ಕೊಟ್ಟು ವ್ಯವಹಾರ ಮಾಡಬೇಕಾಗುವದು.

ಕಮಿಶನ್ ದರವು ಸಾಮಾನ್ಯವಾಗಿ ೧೦೦ಕ್ಕೆ ಒಂದು ಆಣೆಯಿಂದ ಎರಡು ಆಣೆಗಳ ವರೆಗೆ ಇರುವದು. ಹಣವಿಟ್ಟವನು ತನ್ನ ಬ್ಯಾಂಕಿನ ಮೇಲೆ ಕೊಟ್ಟ ಚೆಕ್ಕಿಗೆ ಅದೇ ಬ್ಯಾಂಕಿನಲ್ಲಿ ಮುರಿಸುವಾಗ ಕಮೀಶನ್ ಬೀಳುವದಿಲ್ಲ ಬ್ಯಾಂಕು ತನ್ನ ಶಾಖಾ ಬ್ಯಾಂಕುಗಳ ಮೇಲೆ ಕೊಟ್ಟ ಚೆಕ್ಕಿಗೆ ಹಾಗು ಬ್ಯಾಂಕು ತಾನು ಖಾತೇದಾರನಿದ್ದ ಬ್ಯಾಂಕಿನ ಮೇಲೆ ಕೊಟ್ಟ ಚೆಕ್ಕಿಗೆ ಡ್ರಾಫ್ಟ ಅನ್ನುವರು. ಇದನ್ನು ಇದರಲ್ಲಿ ತೋರಿಸಿದ ಬ್ಯಾಂಕಿನಲ್ಲಿ ಮುರಿಸುವಾಗ ಸಾಮಾನ್ಯವಾಗಿ ಕಮಿಶನ್ ಬೀಳುವದಿಲ್ಲ.

ತಾನು ಬ್ಯಾಂಕಿನಲ್ಲಿ ಇಟ್ಟ ಹಣಕ್ಕಿಂತ ಹೆಚ್ಚಿನ ರಕಮಿನ ಚೆಕ್ಕನ್ನು ಕೊಡಲಿಕ್ಕೆ ಬರುವದಿಲ್ಲ. ಒಂದು ವೇಳೆ ಕೊಟ್ಟರೆ ಅದನ್ನು ಬ್ಯಾಂಕಿನವರು ಸ್ವೀಕರಿಸುವದಿಲ್ಲ ಇಟ್ಟ ಹಣಕ್ಕಿಂತ ಹೆಚ್ಚು ರಕಮಿನ ಚೆಕ್ಕು ಕೊಡುವಂಥ ಪ್ರಸಂಗವುಳ್ಳ ವ್ಯಾಪಾರಸ್ಥರು ಅಥವಾ ಸೊಸಾಯಟಿಯವರು ಬ್ಯಾಂಕಿನವರೊಂದಿಗೆ ಮೊದಲೇ ಕರಾರು ಮಾಡಿಕೊಂಡಿರಬೇಕಾಗುವದು.

ಬ್ಯಾಂಕಿನಲ್ಲಿ ಹಣವಿರುವದರಿಂದ ಪ್ರವಾಸಿಗಳಿಗೂ ತುಂಬ ಅನುಕೂಲವಾಗುವದು.

ಉದಾ:— ಧಾರವಾಡದ ಒಂದು ಬ್ಯಾಂಕಿನಲ್ಲಿ ಹಣವಿಟ್ಟು ಕಾಶಿಗೆ ಹೋಗಿ ಅಲ್ಲಿಯ ಒಂದು ಬ್ಯಾಂಕಿನಲ್ಲಿ ತನ್ನ ಬ್ಯಾಂಕಿನ ಮೇಲಿನ ಚೆಕ್ಕು

ಕೊಟ್ಟು ಹಣ ಪಡೆಯಬಹುದು. ಇಂಥ ಪ್ರಸಂಗದಲ್ಲಿ ಬ್ಯಾಂಕಿನ ಹಾಗೂ ತನ್ನ ಗುರುತಿನ ಮಧ್ಯಸ್ಥನ ಸಹಾಯದಿಂದ ಕೂಡಲೆ ಹಣವು ದೊರೆಯುವದು. ಮಧ್ಯಸ್ಥನು ಇಲ್ಲದಿದ್ದರೆ ಕಾಶಿಯ ಬ್ಯಾಂಕಿನವರು ಧಾರವಾಡದ ಬ್ಯಾಂಕಿನವರಿಗೆ ಬರೆದು ಹಣ ತರಿಸಿಕೊಂಡು ತಮ್ಮ ಕಮಿಶನ್ ಮುರಕೊಂಡು ಕೊಡುವರು. ಇಷ್ಟೊಂದು ಪ್ರಯಾಸವಾಗಬಾರದೆಂದು ದೂರದ ಪ್ರಯಾಣಿಕರು ತಾವು ಹಣವಿಟ್ಟ ಬ್ಯಾಂಕಿನಿಂದ ಭಲಾವಣಿ ಪತ್ರವನ್ನು ಒಯ್ಯುವರು.

(೫) ನಾವಜೋಗ (ಆರ್ಡರ) ಚೆಕ್ಕನ್ನು ಶಹಾಜೋಗ (ಬೇರರ) ಚೆಕ್ ಮಾಡಬೇಕಾದರೆ ಅಥವಾ ಕಾಟು ಹಾಕಿದ (ಕ್ರಾಸ್ಡ) ಚೆಕ್ಕನ್ನು ಸಾಧಾ ಚೆಕ್ ಮಾಡಬೇಕಾದರೆ ಇಲ್ಲವೆ ಯಾವದೇ ತರದ ಬದಲಾವಣೆ ಮಾಡಬೇಕಾದರೆ ಮೊದಲು ಬರೆದದ್ದನ್ನು ಕಾಟುಹಾಕಿ ಗಿರಾಕಿಯು ತನ್ನ ಪೂರ್ಣ ಸಹಿ ಮಾಡಬೇಕು. ಅನೇಕ ಸಾರೆ ಹೀಗೆ ಮಾಡದೆ ಗಿರಾಕಿಯು ಹೊಸ ಚೆಕ್ಕನ್ನು ಬರೆದು ಕೊಡುವನು.

(೬) ಚೆಕ್ಕುಗಳ ಜಮಾಖರ್ಚು:— ಚೆಕ್ ಕೊಟ್ಟರೆ ಬ್ಯಾಂಕಿನ ಖಾತೆಗೆ ಜಮೆ ಮತ್ತು ಯೋಗ್ಯ ಇಸಮಿನ ಖಾತೆಗೆ ಖರ್ಚು ಬರೆಯಬೇಕು. ಚೆಕ್ಕು ತಿರುಗಿ ಬಂದರೆ ಬ್ಯಾಂಕಿನ ಖಾತೆಗೆ ಖರ್ಚು ಮತ್ತು ಯೋಗ್ಯ ಇಸಮಿನ ಖಾತೆಗೆ ಜಮೆ ಮಾಡಬೇಕು.

(೭) ಹುಂಡಿ-ಚೆಕ್ಕುಗಳ ಭೇದಗಳು:— ಬಹಳ ಮಾತುಗಳಲ್ಲಿ ಚೆಕ್ಕು ಹುಂಡಿಯಂತೆ ಇದ್ದರೂ ಕೆಲವು ಮಾತುಗಳಲ್ಲಿ ಅದು ಹುಂಡಿಯಿಂದ ಬೇರೆ ಭಿನ್ನವದೆ.

(೧) ಚೆಕ್ಕು ಬ್ಯಾಂಕಿನ ಮೇಲೆ ಬರೆಯುವರು. ಹುಂಡಿಯನ್ನು ಬೇಕಾದವರ ಮೇಲೆ ಬರೆಯಬಹುದು. (೨) ಚೆಕ್ಕು ಯಾವಾಗಲೂ ದರ್ಶನಿ ಹುಂಡಿ ಇರುತ್ತದೆ. ಹುಂಡಿಯು ದರ್ಶನಿ ಮತ್ತು ಮುದ್ದತಿ ಇರುತ್ತದೆ. (೩) ಚೆಕ್ಕು ಸ್ವೀಕರಿಸುವ ಕಾರಣವಿಲ್ಲ. ಹುಂಡಿಯನ್ನು ಸ್ವೀಕರಿಸಲಿಕ್ಕೆ ಬೇಕು. (೪) ಚೆಕ್ಕಿನ ರಕಮು ಬೇಡಿದ ಕೂಡಲೆ ಕೊಡಬೇಕು. ಹುಂಡಿಯ ರಕಮನ್ನು ೩ ದಿವಸಗಳಾದ ಮೇಲೆ ಕೊಡುವರು. (೫) ಚೆಕ್ಕಿನ ರಕಮು ರಾಖಲೆಗೆ ಬ್ಯಾಂಕಿನಿಂದ ಸಿಗದಿದ್ದರೆ ಮಾಲಕನಿಂದ ಸಿಗುವದು.

ಹುಂಡಿಯು ರಕಮು ನಿರಾಕರಿಸಿದ ಹೊರತು ಮಾಲಕನಿಂದ ಸಿಗುವದಿಲ್ಲ. (೬) ಚೆಕ್ಕು ಕ್ರಾಸ್ಡ ಮಾಡಲಿಕ್ಕೆ ಬರುತ್ತದೆ. ಹುಂಡಿಗೆ ಕ್ರಾಸ್ಡ ಮಾಡಲಿಕ್ಕೆ ಬರುವದಿಲ್ಲ.

೧೨. ಪ್ರಶ್ನೆಗಳು :—

೧. ಹುಂಡಿ ಅಂದರೇನು? ಹುಂಡಿಯ ಉದ್ದೇಶಗಳು ಯಾವವು?

೨. ಹುಂಡಿಯ ವ್ಯವಹಾರಕ್ಕೆ ಎಷ್ಟು ಜನರು ಬೇಕಾಗುವರು? ಯಾರು?

೩. ಹುಂಡಿಯನ್ನು ಅಾಗೂ ಮಾಡೋಣ, ಸ್ವೀಕರಿಸೋಣ, ಭರಪಾಯಿ ಹಾಕೋಣ ಅಂದರೇನು?

೪. ಅಡತದಾರನು ಯಾರು ಆಗಬಹುದು?

೫. ಹುಂಡಿಯ ಪ್ರಕಾರಗಳು ಎಷ್ಟು? ಯಾವವು?

೬. ಪ್ರಾಮಿಸರಿ ನೋಟ ಅಂದರೇನು? ಎಷ್ಟು ಪ್ರಕಾರಗಳು?

೭. ಕರನ್ಸಿ ನೋಟ ಮತ್ತು ಮನಿ ಆರ್ಡರಗಳು ಯಾವ ತರದ ಹುಂಡಿಗಳು? ಯಾಕೆ?

೮. ಚೆಕ್, ಬೇರರ ಚೆಕ್, ಆರ್ಡರ ಚೆಕ್, ಕ್ರಾಸ್ಡ ಚೆಕ್ ಅಂದರೇನು? ಅವುಗಳಲ್ಲಿ ಭೇದವೇನು?

೯. ಹುಂಡಿ ಮತ್ತು ಪ್ರಾಮಿಸರಿ ನೋಟುಗಳಲ್ಲಿ ಭೇದವೇನು?

೧೦. ಚೆಕ್ ಮತ್ತು ಕರನ್ಸಿನೋಟ ಇವುಗಳಲ್ಲಿ ಭೇದವೇನು?

೧೧. ೫೦೦ ರೂ. ಗಳಿಗೆ ಶಹಜೋಗ ದರ್ಶನಿ ಹುಂಡಿ, ಮತ್ತು ೧೭೦ ರೂ. ಗೆ ಚೆಕ್ಕು, ೧೫೦ ರೂ. ಗೆ ೧೦ ದಿವಸದ ಶಹಜೋಗ ಹುಂಡಿ, ೨೦೦ ರೂ. ಗಳಿಗೆ ೨ ತಿಂಗಳ ನಾಮಜೋಗ ಪ್ರಾಮಿಸರಿ ನೋಟ ಇವುಗಳನ್ನು ಬರೆದು ತೋರಿಸಿರಿ.

೧೨. ಹುಂಡಿಯ ಜಮಾಖರ್ಚನ್ನು ಮಾಡುವ ರೀತಿಗಳು ಎಷ್ಟು? ದರ್ಶನೀ, ಮುದ್ದತೀ, ಬಂದ ಮುದ್ದತೀ ಹುಂಡಿಗಳ ಜಮಾಖರ್ಚನ್ನು ಯಾವ ರೀತಿಯಿಂದ ಮಾಡುವರು?

೧೩. ಹುಂಡಿ ಖರೀದಿ, ಮತ್ತು ಹುಂಡಿ ವಿಕ್ರೀ ಖಾತೆಗಳೆಂದು ಯಾಕೆ ಇಡಬೇಕು?

೧೪. ಹುಂಡಿ ಮುರಿಸೋಣ ಮತ್ತು ಬೇಚಾ ಹಾಕಿಸೋಣ ಅಂದರೇನು?

೧೫. ಸಕ್ರಾಯಿ ನಕ್ರಾಯಿ ಅಂದರೇನು? ಹುಂಡಿ ತಿರುಗಿ ಬಂದರೆ ಅದರ ಜಮಾಖರ್ಚನ್ನು ಶಾಖಲೆಯಲ್ಲಿ ಹೇಗೆ ಮಾಡಬೇಕು?

೪ನೆಯ ಪ್ರಕರಣ

ಸಾವುಕಾರಿಕೆ

೧. ಸಾವುಕಾರಿಕೆ ೨. ಸಾಲ :— (೧) ಕೈಗಡ. (೨) (ಅ) ಜಾಮೀನಿನ ಮೇಲೆ ಕೊಟ್ಟ ಸಾಲ. (ಬ) ಕಂತದ ಸಾಲ. (೩) ಜಂಗಮ ಆಸ್ತಿಗಳ ಒತ್ತೆ (೪) ಸ್ಥಾವರ ಆಸ್ತಿಗಳ ಒತ್ತೆ (ಅ) ತೋರ ಒತ್ತೆ. (ಬ) ಇಳಿ ಒತ್ತೆ. (ಕ) ಕಬ್ಜಾ ಒತ್ತೆ. ೩. ಇಡುಗಂಟು (ಶೇವು). ೪. ಭಲಾವಣಿ ಪತ್ರ. ೫ ಬಡ್ಡಿಯ ಆಕಾರ ಮಾಡುವ ರೀತಿಗಳು. ೬. ಬಡ್ಡಿಯ ಖಾತೆ. ೭. ಪ್ರಶ್ನಗಳು.

೧. ಅತಿ ಪುರಾತನ ಕಾಲದಿಂದ ಸಾವುಕಾರಿಕೆಯು ಮುಖ್ಯವಾದ ವ್ಯವಹಾರವಾಗಿದೆ. ಹುಂಡಿಯನ್ನು ನಡೆಯಿಸುವದು, ಸಾಲ ಕೊಡುವದು, ಬಡ್ಡಿಯಂತೆ ಇಡುಗಂಟನ್ನಿಟ್ಟುಕೊಳ್ಳುವದು, ಹುಂಡಿಯ ಹೊರತು ಬೇರೆ ಬಗೆಯಿಂದ ಗಿರಾಕಿಗಳಿಗೆ ಪರಸ್ಥಳದಲ್ಲಿ ಹಣವು ದೊರೆಯುವಂತೆ ಏರ್ಪಾಡು ಮಾಡುವದು, ಇವೇ ಮೊದಲಾದ ಕೆಲಸಗಳನ್ನು ಇಲ್ಲಿಯ ಸಾವುಕಾರರು ಮಾಡುವರು. ಹುಂಡಿಯ ಜಮಾಖರ್ಚನ್ನು ಹಿಂದಿನ ಪ್ರಕರಣದಲ್ಲಿಯೇ ವಿವರಿಸಿದ್ದರಿಂದ ಉಳಿದ ಮೂರು ಸಂಗತಿಗಳ ಜಮಾಖರ್ಚನ್ನೂ ಬಡ್ಡಿಯ ಆಕಾರ ಮಾಡುವ ರೀತಿಗಳನ್ನೂ ಬಡ್ಡಿಯ ಜಮಾಖರ್ಚನ್ನೂ ಈ ಪ್ರಕರಣ ದಲ್ಲಿ ಹೇಳಿದೆ.

೨. ಸಾಲ :— ಸಾಲಗಳನ್ನು ನಾಲ್ಕು ರೀತಿಯಾಗಿ ಕೊಡುವರು ಯಾವವೆಂದರೆ :—(೧) ಕೈಗಡ ರಕಮನ್ನು ಕೊಡುವದು. (೨) ಜಾಮೀನಿನಿಂದ ರಕಮನ್ನು ಕೊಡುವದು (೩) ಜಂಗಮ ಮಾಲನ್ನು ಒತ್ತೆಯಿಟ್ಟುಕೊಂಡು ರಕಮನ್ನು ಕೊಡುವದು. (೪) ಸ್ಥಾವರ ಆಸ್ತಿಗಳನ್ನು ಒತ್ತೆ ಬರೆಯಿಸಿಕೊಂಡು ರಕಮನ್ನು ಕೊಡುವದು.

(೧) **ಕೈಗಡ :—** ವ್ಯವಹಾರದಲ್ಲಿ ಸಣ್ಣ ರಕಮುಗಳನ್ನು ಅಲ್ಪ ಕಾಲದವರೆಗೆ ಬಡ್ಡಿಯಿಲ್ಲದೆ ಕೊಡುವರು. ಇದಕ್ಕೆ ಕೈಗಡ ಅನ್ನುವರು.

ಕೈಗಡ ಹಣದ ಜಮಾಖರ್ಚು:— ಕೈಗಡ ಕೊಟ್ಟವನಲ್ಲಿ— ಕೊಟ್ಟಷ್ಟು ರಕಮನ್ನು ತೆಗೆದುಕೊಂಡವನ ಹೆಸರಲೆ ಖರ್ಚು ಬರೆಯಬೇಕ ರಕಮನ್ನು ತಂದು ಕೊಟ್ಟಾಗ ಅವನ ಹೆಸರಲೆ ಜಮೆ ಮಾಡಬೇಕು. ಕೈಗ ತಂದವನಲ್ಲಿ:– ರಕಮನ್ನು ಕೊಟ್ಟವನ ಹೆಸರಲೆ ಜಮೆ ಮಾಡಬೇಕು. ರ ಮನ್ನು ತಿರುಗಿ ಕೊಟ್ಟ ಮೇಲೆ ಅವನ ಖಾತೆಗೆ ಖರ್ಚು ಬರೆಯಬೇಕು.

(೨) **ಜಾಮೀನಿನ ಮೇಲೆ ಕೊಟ್ಟ ಸಾಲ:**— (ಅ) ಸಾಲಗಾ ನಿಂದ ಸಾಲದ ಹಣದ ಸಲುವಾಗಿ ಬರೆಯಿಸಿದ ಕಾಗದದಲ್ಲಿ ಯೋಗ್ಯ ಮನು ಷ್ಯನ ಜಾಮೀನನ್ನು ಹಾಕಿಸುತ್ತಾರೆ. ಇದರ ಕಾರಣವೇನಂದರೆ ಸಾ ಗಾರನು ಗಂಟು ಬಡ್ಡಿಗಳನ್ನು ಕೊಡದಿದ್ದರೆ, ಜಾಮೀನುದಾರನು ಕೊಡ ಬೇಕಾಗುವದು ಜಾಮೀನುದಾರನಿಗೆ ಉಗಾವಣಿದಾರನೆಂತಲೂ ಹೆಸ ರುಂಟು. ಇಂಥ ಕಾಗದಗಳಿಗೆ ಅನುಕ್ರಮ ನಂಬರುಗಳನ್ನು ಹಾಕಬೇಕು.

ಜಮಾಖರ್ಚಿನ ರೀತಿಯು: – ಸಾವುಕಾರನಲ್ಲಿ–ಸಾಲಗಾರನಿ ಕೊಟ್ಟಷ್ಟು ರಕಮನ್ನು ಅವನ ಖಾತೆಗೆ ಖರ್ಚು ಬರೆದು ತಪಶೀಲಿನಲ್ಲ ಜಾಮೀನುದಾರನ ಹೆಸರು, ಪತ್ತೆ, ಮುದ್ದತು, ಬಡ್ಡಿಯ ದರ ಮುಂತಾದವು ಗಳನ್ನು ಬರೆಯಬೇಕು ಸಾಲಗಾರನಿಂದಾಗಲಿ, ಜಾಮೀನದಾರನಿಂದಾಗಲಿ ಗಂಟು ಬಡ್ಡಿ ಬಂದರೆ ಸಾಲದ ರಕಮನ್ನು ಸಾಲಗಾರನ ಖಾತೆಗೂ ಬಡ್ಡಿಯ ರಕಮನ್ನು ಬಡ್ಡಿಯ ಖಾತೆಗೂ ಜಮೆ ಬರೆಯಬೇಕು.

ಸಾಲಗಾರನಲ್ಲಿ:— ಸಾವುಕಾರನ ಖಾತೆಗೆ ಸಾಲ ತಂದ ರಕಮನ್ನು ಜಮೆ ಮಾಡಬೇಕು. ತಿರುಗಿ ಕೊಟ್ಟಾಗ ಗಂಟನ್ನು ಸಾವುಕಾರನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಖರ್ಚು ಬರೆಯಬೇಕು.

ಉದಾ:— (೧) ತಾ. ೧-೬-೧೯೪೪ನೆಯ ದಿವಸ ಸಂಗಪ್ಪ ಹೂಲಿ ಇವನ ನಾಗಪ್ಪ ಪವಾರ ಸಾ. ಧಾರವಾಡ ಇವನ ಜಾಮೀನು ಹಾಕಿಸಿ ನೂರಕ್ಕೆ ೧ ವ. ಕ ೧.೨ ರೂ. ಬಡ್ಡಿಯಂತೆ ೬ ತಿಂಗಳ ಮುದ್ದತು ಕರಾರ ಮಾಡಿ ೫೦೦ ರೂ. ಗಳನ್ನು ಮಠದ ಬಸಯ್ಯನಲ್ಲಿ ಸಾಲ ತೆಗೆದುಕೊಂಡು ಕಾಗದ ಬರಕೊಟ್ಟನು. ಈ ಮೂವರ ಜಮಾಖರ್ಚು ಬರೆಯಿರಿ.

ಮಠದ ಸಂಗಯ್ಯನ ಕೀರ್ದಿ. ತಾ. ೧—೬—೧೯೪೪

ಜಮೆ	ರೂ.	ಖರ್ಚು	ರೂ.
		೫೦೦ ಹೂಲಿ ಸಂಗಪ್ಪನ ಖಾತೆ:- ತಪಶೀಲು-ಇವನು ನಾಗಪ್ಪ ಪವಾರ ಸಾ. ಧಾರವಾಡ ಇವನ ಜಾಮೀನಿನಿಂದ ೧೦೦ಕ್ಕೆ ೧ ವ. ಕ್ಕೆ ೧೨ ರೂ. ಬಡ್ಡೀ ಕರಾರ ಮಾಡಿ ೬ ತಿಂಗಳ ಮುದ್ದತಿನಿಂದ ಕಾಗದ ಬರಕೊಟ್ಟು ೫೦೦ ರೂ. ಸಾಲ ಒಯ್ದನು. ಖಾ. ಪಾ.	

ಹೂಲಿ ಸಂಗಪ್ಪನು ತಾ. ೧—೧೨—೧೯೪೪ ಇ. ದಿವಸ ೫೦೦ ರೂ. ಅಸಲು ೩೦ ರೂ. ಬಡ್ಡಿ ತಂದು ಕೊಟ್ಟನು.

ಕೀರ್ದಿ. ತಾ. ೧—೧೨—೪೪

ಜಮೆ	ರೂ.	ಖರ್ಚು	ರೂ.
೫೦೦ ಹೂಲಿ ಸಂಗಪ್ಪನ ಖಾತೆ:— ಪವಾರ ನಾಗಪ್ಪನ ಜಾಮೀನಿನಿಂದ ಕೊಟ್ಟ ಸಾಲ ತೀರಿಸಿದ ತಪಶೀಲು— ೫೦೦ ರೂ. ಅಸಲು. ೩೦ ರೂ. ಬಡ್ಡಿ. ೫೩೦ ರೂ. ಅಂತು. ಖಾ. ಪಾ.			
೩೦ ಬಡ್ಡಿಯ ಖಾತೆ:- ಹೂಲಿ ಸಂಗಪ್ಪನಿಂದ ೫೦೦ ರೂ. ಅಸಲಿನ ಬಾಬತು ೩೦ ರೂ. ಬಡ್ಡಿ ಬಂತು. ಖಾ. ಪಾ.			

ಖತಾವಣಿ

ಹೂಲಿ ಸಂಗಪ್ಪನ ಖಾತೆ.

ಜಮೆ	ರೂ.	ಖರ್ಚು	ರೂ.
೫೦೦ ಕೀ. ಪಾ. ೧.೧೨.೪೪		೫೦೦ ಕೀ. ಪಾ. ೧.೬.೪೪	

ಬಡ್ಡಿ ಖಾತೆ.

ಜಮೆ	ರೂ.	ಖರ್ಚು	ರೂ.
೩೦ ಕೀ. ಪಾ. ೧.೧೨.೪೪			

ಹೂಲಿ ಸಂಗಪ್ಪನ ಕೀರ್ದಿ ತಾ. ೧—೬—೪೪

ಜಮೆ ರೂ.	ಖರ್ಚು ರೂ.
೫೦೦ ಮಠದ ಬಸಯ್ಯನ ಖಾತೆ:— ತಪಶೀಲು ಇವನಲ್ಲಿ ನಾಗಪ್ಪ ಪವಾರ ಧಾರವಾಡ ಇವನ ಜಾಮೀನಿನಿಂದ ೧೦೦ಕ್ಕೆ ೧ ವ. ಕ್ಕೆ ೧೨ ರೂ ಬಡ್ಡೀ ಕರಾರ ಮಾಡಿ ೬ ತಿಂಗಳ ಮುದ್ದತಿನಿಂದ ಕಾಗದ ಬರಕೊಟ್ಟು ೫೦೦ ರೂ. ಸಾಲ ತಂದದ್ದು. ಖಾ. ಪಾ.	

ಮಠದ ಬಸಯ್ಯನಿಗೆ ತಾ. ೧—೧೨—೪೪ನೇ ದಿವಸ ೫೦೦ ರೂ. ಅಸಲು ೩೦ ರೂ. ಬಡ್ಡಿ ಒಯ್ದು ಕೊಟ್ಟಿತು.

ಕೀರ್ದಿ ತಾ. ೧—೧೨—೪೪

ಜಮೆ ರೂ.	ಖರ್ಚು ರೂ.
	೫೦೦ ಮಠದ ಬಸಯ್ಯನ ಖಾತೆ:— ಪವಾರ ನಾಗಪ್ಪನ ಜಾಮೀನಿನಿಂದ ತಂದ ೫೦೦ ರೂ. ಸಾಲ ಮುಟ್ಟಿಸಿತು. ಖಾ. ಪಾ.
	೩೦ ಬಡ್ಡಿಯ ಖಾತೆ:— ಮಠದ ಬಸಯ್ಯನ ೫೦೦ ರೂ. ಸಾಲಕ್ಕೆ ೩೦ ರೂ. ಬಡ್ಡೀ ಕೊಟ್ಟಿತು. ಖಾ. ಪಾ.

ಖತಾವಣಿ

ಖಾತೆ:— ಬಸಯ್ಯ ಮಠದ		ಬಡ್ಡಿಯ ಖಾತೆ.	
ಜಮೆ—ರೂ.	ಖರ್ಚು—ರೂ.	ಜಮೆ—ರೂ.	ಖರ್ಚು—ರೂ.
೫೦೦ ಕೀ. ಪಾ.	೫೦೦ ಕೀ. ಪಾ.		೩೦ ಕೀ. ಪಾ.
ತಾ. ೧-೬-೪೪	ತಾ. ೧-೧೨-೪೪		ತಾ. ೧-೧೨-೪೪

ನಾಗಪ್ಪ ಪವಾರ ಇವರ ಕೀರ್ದಿ. ತಾ. ೧—೬—೪೪

ಜಮೆ	ರೂ.	ಖರ್ಚು	ರೂ.
೫೦೦	ಮಠದ ಬಸಯ್ಯನ ಖಾತೆ:— ಸದರೀಯವರಲ್ಲಿ ಸಂಗಪ್ಪ ಹೂಲಿ ಇವರು ನಮ್ಮ ಜಾಮೀನಿನಿಂದ ೫೦೦ ರೂ. ಗಳನ್ನು ೧೦೦ಕ್ಕೆ ೧ವ. ಕ್ಕೆ ೧೨ ರೂ. ಯಂತೆ ೬ ತಿಂಗಳ ಮುದ್ದತಿನಿಂದ ಸಾಲ ಒಯ್ದುದ್ದು. ಸಂಗಪ್ಪ ಹೂಲಿ ಇವರ ಖಾತೆಗೆ ಖರ್ಚು ಬರೆದು. ಖಾ. ಪಾ.	೫೦೦	ಸಂಗಪ್ಪ ಹೂಲಿ ಇವರ ಖಾತೆ:- ಮಠದ ಬಸಯ್ಯನ ಖಾತೆಗೆ ಜಮೆ ಬರೆದು. ಖಾ. ಪಾ.

ಕೀರ್ದಿ ತಾ. ೧—೧೨—೪೪.

ಜಮೆ	ರೂ.	ಖರ್ಚು	ರೂ.
೫೦೦	ಸಂಗಪ್ಪ ಹೂಲಿ ಇವರ ಖಾತೆ:- ಸದರೀಯವರು ಈ ಹೊತ್ತಿನ ದಿವಸ ಅಸಲು ೫೦೦ ರೂ. ಬಡ್ಡಿ ೩೦ ರೂ. ತಂದು ಕೊಟ್ಟದ್ದರಿಂದ ಮಠದ ಬಸಯ್ಯನ ಖಾತೆಗೆ ಖರ್ಚು ಬರೆದು. ಖಾ. ಪಾ.	೫೦೦	ಮಠದ ಬಸಯ್ಯನ ಖಾತೆ:— ಸಂಗಪ್ಪ ಹೂಲಿ ಇವರ ಖಾತೆಗೆ ಜಮೆ ಬರೆದು. ಖಾ. ಪಾ.

ಖತಾವಣಿ.

ಖಾತೆ:— ಬಸಯ್ಯ ಮಠದ		ಖಾತೆ:— ಸಂಗಪ್ಪ ಹೂಲಿ	
ಜಮೆ——ರೂ.	ಖರ್ಚು——ರೂ.	ಜಮೆ——ರೂ.	ಖರ್ಚು——ರೂ.
೫೦೦ ಕೀ. ಪಾ.	೫೦೦ ಕೀ. ಪಾ.	೫೦೦ ಕೀ. ಪಾ.	೫೦೦ ಕೀ. ಪಾ.
ತಾ. ೧-೬-೪೪	ತಾ. ೧-೧೨-೪೪	ತಾ. ೧-೧೨-೪೪	ತಾ. ೧-೬-೪೪

(ಬ) **ಕಂತದ ಸಾಲ:—** ಇತ್ತಿತ್ತಲಾಗಿ ಸಾವುಕಾರರಲ್ಲಿ, ವಿಶೇಷವಾಗಿ ಪರಸ್ಪರ ಸಹಾಯಕ ಸಂಘಗಳಲ್ಲಿ ಕೆಲವೊಂದು ಕಂತದಿಂದ ಸಾಲದ ರಕಮನ್ನು ಮುಟ್ಟಿಸಿಕೊಳ್ಳುವ ಪದ್ಧತಿಯು ರೂಢಿಯಲ್ಲಿ ಬಂದಿದೆ. ಸಾಲ ಕೊಡುವದಕ್ಕಿಂತಲೂ ಮುಂಚಿತವಾಗಿ ಕಂತಗಳನ್ನು ನಿರ್ಣಯಿಸುವರು. ಕಂತದ ರಕಮು ಕೆಲವು ಅಸಲೂ, ಕರಾರು ಮಾಡಿದ ದರದಂತೆ ಬಡ್ಡಿಯೂ ಕೂಡಿದ್ದಿರುವದು. ಈ ರಕಮನ್ನು ಸಾಲಗಾರನು ಕಂತದ ಮುದ್ದತಿಗೆ ತಂದುಕೊಡಬೇಕು. ಇಲ್ಲದಿದ್ದರೆ, ನಿಂತ ಕಂತಗಳಿಗೆ ಇಮ್ಮಡಿ ಬಡ್ಡಿಯು ಬೀಳುವದು.

ಕಂತದ ಜಮಾಖರ್ಚು:—ಸಾವುಕಾರನಲ್ಲಿ–ಸಾಲಗಾರನ ಖಾತೆಗೆ, ಕೊಟ್ಟ ರಕಮನ್ನು ಖರ್ಚು ಬರೆದು, ತಪಶೀಲಿನಲ್ಲಿ–ಬಡ್ಡಿಯದರ, ಕಂತಗಳ ಸಂಖ್ಯೆ, ಪ್ರತಿಯೊಂದು ಕಂತದ ರಕಮು ಮೊದಲಾದವುಗಳನ್ನು ಬರೆಯಬೇಕು. ಬಡ್ಡಿಯು ಮತ್ತು ಕಂತದ ರಕಮು ಬಂದಂತೆ ಕಂತದ ರಕಮನ್ನು ಸಾಲಗಾರನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಜಮೆ ಮಾಡಬೇಕು.

ಸಾಲಗಾರನಲ್ಲಿ:— ಸಾಲದ ರಕಮನ್ನು ಸಾವುಕಾರನ ಖಾತೆಗೆ ಜಮೆಮಾಡಿ ತಪಶೀಲಿನಲ್ಲಿ ಮೇಲೆ ಬರೆದಂತೆಯೇ ಬರೆಯಬೇಕು. ಮುಂದೆ ಕಂತದ ಹಣವನ್ನೂ ಬಡ್ಡಿಯನ್ನೂ ಕೊಟ್ಟಂತೆ ಕಂತದ ಹಣವನ್ನು ಸಾವುಕಾರನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಖರ್ಚು ಬರೆಯಬೇಕು.

ಉದಾ:— (೨) ಬೆನ್ನೂರ ಪುಟ್ಟಪ್ಪನಲ್ಲಿ ಮಂಡಲಗಿ ರಾಮಾಚಾರ್ಯರು ೧೦೦ಕ್ಕೆ ೧ ವ. ಕ್ಕೆ ೧೦ ರೂ. ಪ್ರ. ಬಡ್ಡಿ ಕರಾರ ಮಾಡಿ ೧೦೦೦ ರೂ, ಸಾಲವನ್ನು ೨ ವರ್ಷಗಳಲ್ಲಿ ಮತ್ತು ೨ ಕಂತಗಳಿಂದ ತೀರಿಸಬೇಕೆಂಬ ಕರಾರಿನಿಂದ ಒಯ್ದರು, ತಾ. ೧—೬—೪೩ ಇ. ಇವರಿಬ್ಬರ ಕೀರ್ದಿ ಬರೆಯಿರಿ.

ಬೆನ್ನೂರ ಪುಟ್ಟಪ್ಪನ ಕೀರ್ದಿ. ತಾ. ೧—೬—೪೩.

ಜಮೆ	ರೂ.	ಖರ್ಚು	ರೂ.
		೧೦೦೦ ಮುಂಡಲಗಿಯವರ ಖಾತೆ:— ಸದರಿಯವರಿಗೆ ೨ ವರ್ಷ ಮುಂದ್ದತ ಕರಾರಮಾಡಿ ೨ ಕಂತಗಳಿಂದ ಸಾಲ ತೀರಿಸಬೇಕೆಂದು ೧೦೦ಕ್ಕೆ ೧ ವ. ಕ್ಕೆ ೧೦ ರೂ. ಪ್ರ. ಬಡ್ಡಿಯ ಕರಾರ ಮಾಡಿ ೧೦೦೦ ರೂ. ಸಾಲ ಕೊಟ್ಟು ಕಾಗದ ಬರೆಯಿಸಿಕೊಂಡಿತು— ಕಂತ ಕೆಳಗೆ ಬರೆದ ಪ್ರಕಾರ:— (೧) ೫೦೦+೧೦೦=೬೦೦, ೧-೬-೪೪ (೨) ೫೦೦+೫೦=೫೫೦, ೧-೬-೪೫ ಖಾ. ಪಾ.	

ತಾರೀಖು. ೧—೬—೧೯೪೪ನೇ ಇಸವಿ ದಿವಸ ಮೊದಲನೇ ಕಂತವನ್ನು ತಂದು ಕೊಟ್ಟರು.

ಕೀರ್ದಿ ತಾ. ೧—೬—೪೪

ಜಮೆ	ರೂ.	ಖರ್ಚು	ರೂ.
೫೦೦ ಮುಂಡಲಗಿಯವರ ಖಾತೆ:— ಸದರಿಯವರು ಪತ್ರದಲ್ಲಿ ಬರೆದಂತೆ ೧ನೆಯ ಕಂತದ ರಕಮು ತೀರಿಸಿದ್ದು. ಖಾ. ಪಾ.			
೧೦೦ ಬಡ್ಡಿಯ ಖಾತೆ:— ಮುಂಡಲಗಿಯವರು ೧ನೆಯ ಕಂತದ ಬಾ. ೧೦೦ ರೂ. ಬಡ್ಡಿ ಕೊಟ್ಟರು. ಖಾ. ಪಾ.			

ತಾ. ೧—೬—೪೫ನೇ ದಿವಸ ೨ನೇ ಕಂತವನ್ನು ತಂದು ಕೊಟ್ಟರು.

ಕೀರ್ದಿ. ತಾ. ೧—೬—೧೯೪೫

ಜಮೆ	ರೂ.	ಖರ್ಚು	ರೂ.
ಮುಂಡಲಗಿಯವರ ಖಾತೆ:— ಸರ್ದೀಯವರು ಪತ್ರದಲ್ಲಿ ಬರೆದಂತೆ ೨ನೆಯ ಕಂತದ ರಕಮು ತೀರಿಸಿದ್ದು. ಖಾ. ಪಾ.	೫೦೦		
ಬಡ್ಡಿಯ ಖಾತೆ:— ಮುಂಡಲಗಿಯವರು ೨ನೆಯ ಕಂತದ ಬಡ್ಡಿ ೫೦ ರೂ. ಕೊಟ್ಟರು. ಖಾ. ಪಾ.	೫೦		

ಖತಾವಣಿ.

ಮುಂಡಲಗಿಯವರ ಖಾತೆ.

ಜಮೆ	ರೂ.	ಖರ್ಚು	ರೂ.
ಕೀ. ಪಾ. ತಾ. ೧—೬—೪೪	೫೦೦	ಕೀ. ಪಾ. ತಾ. ೧—೬—೪೪	೧೦೦೦
ಕೀ. ಪಾ. ತಾ. ೧—೬—೪೫	೫೦೦		೧೦೦೦
	೧೦೦೦		

ಬಡ್ಡಿಯ ಖಾತೆ.

ಜಮೆ	ರೂ.	ಖರ್ಚು	ರೂ.
ಕೀ. ಪಾ. ತಾ. ೧—೬—೪೪	೧೦೦		
ಕೀ. ಪಾ. ತಾ. ೧—೬—೪೫	೫೦		
	೧೫೦		

ಮುಂಡಲಗಿಯವರ ಕೀರ್ದಿ. ತಾ. ೧—೬—೧೯೪೫

ಜಮೆ	ರೂ.	ಖರ್ಚು	ರೂ.
ಬೆನ್ನೂರ ಇವರ ಖಾತೆ:— ಇವರಲ್ಲಿ ೨ ವರ್ಷ ಮುದ್ದತ ಕರಾರ ಮಾಡಿ ೨ ಕಂತಗಳಿಂದ ಸಾಲ ತೀರಿಸಬೇಕೆಂದು ೧೦೦ ಕ್ಕೆ ವ. ಕ್ಕೆ ೧೦ರಂತೆ ಬಡ್ಡಿಯನ್ನು ಗೊತ್ತು ಮಾಡಿ ಕಾಗದ ಬರಕೊಟ್ಟು ಸಾಲವನ್ನು ತಂದನು. ಖಾ. ಪಾ.	೧೦೦೦		

ಕೀರ್ದಿ. ತಾ. ೧—೬—೧೯೪೪

ಜಮೆ	ರೂ.	ಖರ್ಚು	ರೂ.
		೫೦೦ ಬೆನ್ನೂರ ಇವರ ಖಾತೆ.—ಪತ್ರದ ಕರಾರಿನಂತೆ ೧ನೇ ಕಂತ ತೀರಿಸಿದ್ದು. ಖಾ. ಪಾ.	
		೧೦೦ ಬಡ್ಡಿಯು ಖಾತೆ —ಬೆನ್ನೂರ ಇವರಿಗೆ ೧ನೇ ಕಂತದ ಬಾ. ಬಡ್ಡಿ ೧೦೦ ರೂ. ಕೊಟ್ಟದ್ದು. ಖಾ. ಪಾ.	

ಕೀರ್ದಿ. ತಾ. ೧—೬—೧೯೪೫

ಜಮೆ	ರೂ.	ಖರ್ಚು	ರೂ.
		೫೦೦ ಬೆನ್ನೂರ ಇವರ ಖಾತೆ.—ಪತ್ರದ ಪ್ರಕಾರ ೨ನೇ ಕಂತ ೫೦೦ ರೂ. ಕೊಟ್ಟು ಸಾಲ ತೀರಿಸಿದ್ದು. ಖಾ. ಪಾ.	
		೫೦ ಬಡ್ಡಿಯು ಖಾತೆ.—ಬೆನ್ನೂರ ಇವರಿಗೆ ೨ನೇ ಕಂತದ ಬಾ. ೫೦ ರೂ. ಬಡ್ಡಿ ಕೊಟ್ಟದ್ದು.	

ಖತಾವಣಿ.

ಬೆನ್ನೂರ ಇವರ ಖಾತೆ.		ಬಡ್ಡಿಯು ಖಾತೆ.	
ಜಮೆ—ರೂ.	ಖರ್ಚು—ರೂ.	ಜಮೆ—ರೂ	ಖರ್ಚು—ರೂ.
೧೦೦೦ ಕೀ. ಪಾ. ತಾ. ೧—೬—೪೦	೫೦೦ ಕೀ. ಪಾ. ತಾ. ೧—೬—೪೪		೧೦೦ ಕೀ. ಪಾ. ತಾ ೧.೬-೪೪
೧೦೦೦	೫೦೦ ಕೀ. ಪಾ. ತಾ. ೧.೬.೪೫		೫೦ ಕೀ. ಪಾ. ತಾ. ೧-೬-೪೫
	೧೦೦೦		೧೫೦

(೩) **ಜಂಗಮ ಮಾಲಿನ ಒತ್ತೆ ;**—ಮುತ್ತು, ಬಂಗಾರ, ಬೆಳ್ಳಿಯ ದಾಗೀನೆಗಳನ್ನಾಗಲಿ, ಹೊಸ ಅರಿವೆ, ಭಾಂಡಿ, ಶೇವಿನಪತ್ರ ಮೊದಲಾದವು ಗಳನ್ನಾಗಲಿ, ಇಟ್ಟುಕೊಂಡು ಸಾವುಕಾರರು ಸಾಲ ಕೊಡುವರು.

ಜಂಗಮ ಮಾಲಿನ ಒತ್ತೆ ಜಮಾಖರ್ಚು :— ಸಾವುಕಾರನಲ್ಲಿ- ಕೊಟ್ಟಷ್ಟು ಹಣವನ್ನು ಸಾಲಗಾರನ ಖಾತೆಗೆ ಖರ್ಚು ಬರೆದು ತಪಶೀಲಿನಲ್ಲಿ ಹೆಸರು, ಕಿಮ್ಮತ್ತು, ಸಂಖ್ಯೆ, ದಾಗೀನೆಗಳಿದ್ದರೆ ತೂಕ ಒರೆಗಳನ್ನೂ ಬಡ್ಡಿಯ ದರವನ್ನೂ ಮುದ್ದತನ್ನೂ, ಬರೆಯುವರು. ಗಂಟು, ಬಡ್ಡಿ ಬಂದ ಮೇಲೆ ಸಾಲದ ರಕಮನ್ನು ಸಾಲಗಾರನ ಖಾತೆಗೂ ಬಡ್ಡಿಯ ರಕಮನ್ನು ಬಡ್ಡಿಯ ಖಾತೆಗೂ ಜಮೆ ಬರೆಯಬೇಕು. ತಪಶೀಲಿನಲ್ಲಿ ದಾಗೀನೆ ಮೊದಲಾದ ಜೀನಸು ಮುಟ್ಟಿದವೆಂದು ಬರೆಯಿಸಿ, ಸಾಲಗಾರನ ಸಹಿಯನ್ನು ತೆಗೆದುಕೊಳ್ಳ ಬೇಕು. ಇಲ್ಲವೆ ಬೇರೊಂದು ಪಾವತಿಯನ್ನೇ ಬರೆಯಿಸಿಕೊಳ್ಳಬೇಕು. ಅಥವಾ ಕೀರ್ದಿಯಲ್ಲಿ ಸಾಲಗಾರನ ಖಾತೆಗೆ ಕೊಟ್ಟಷ್ಟು ರಕಮನ್ನು ಖರ್ಚು ಬರೆದು, ತಪಶೀಲಿನಲ್ಲಿ ಬಡ್ಡಿಯ ದರ, ಮುದ್ದತು ಬರೆಯಬೇಕು. ಅದರಲ್ಲಿ ಒತ್ತೆ ಇಟ್ಟ ಜೀನಸುಗಳ ಹೆಸರನ್ನು ಬರೆಯದೆ, ಅವುಗಳ ಅನುಕ್ರಮ ನಂಬರು ಗಳನ್ನು ಬರೆಯಬೇಕು. ಒತ್ತೆ ಜೀನಸಿನ ಯಾದಿಯಲ್ಲಿ ಅವುಗಳನ್ನು ಮೇಲೆ ಹೇಳಿದಂತೆ ಜಮೆ ಬರೆಯಬೇಕು ಮುಂದೆ ಗಂಟು, ಬಡ್ಡಿ ಬಂದ ಮೇಲೆ ಯೋಗ್ಯ ರಕಮುಗಳನ್ನು ಸಾಲಗಾರನ ಖಾತೆಗೂ ಬಡ್ಡಿಯ ರಕಮನ್ನು ಬಡ್ಡಿಯ ಖಾತೆಗೂ ಜಮೆ ಮಾಡಬೇಕು. ಒತ್ತೆ ಜೀನಸಿನ ಯಾದಿಯಲ್ಲಿ ತಿರುಗಿಕೊಟ್ಟ ಜೀನಸುಗಳನ್ನು ಖರ್ಚು ಬರೆಯಬೇಕು. ಸಾಲಗಾರರಲ್ಲಿ :— ಸಾಲ ತಂದ ರಕಮನ್ನು ಸಾವುಕಾರನ ಖಾತೆಗೆ ಜಮೆ ಮಾಡಿ ತಪಶೀಲಿನಲ್ಲಿ ಮೇಲೆ ಹೇಳಿದಂತೆ ಬರೆಯಬೇಕು.

ಉದಾ—(೩) ಪಾ. ೧-೧—೪೪ನೆಯ ದಿವಸ ಜವಳೀ ಶಾಂತಪ್ಪನು ಹಾವೇರಿ ಶಾಮಣ್ಣನಾಯಿಕರಲ್ಲಿ ೧೦೦ಕ್ಕೆ ೧ ವರ್ಷಕ್ಕೆ ೬ ರೂ ಬಡ್ಡಿ ಕರಾರ ಮಾಡಿ ೮ ತಿಂಗಳ ಮುದ್ದತಿನಿಂದ ಕೆಳಗಿನ ಜೀನಸುಗಳನ್ನಿಟ್ಟು ೧೨೦೦ ರೂ ಸಾಲ ಒಯ್ದನು.

(೧) ಬಂಗಾರದ ನಾಗಮುರಿಗಿ ಜೋಡು ೧ (ತೂಕ ತೊಲೆ ೨೪) ಒರೆ ಮುಂಬಯಿ ಘಟ್ಟಿ, ಕಿಮ್ಮತ್ತು (ಅಜಮಾಸು) ೧೨೦೦ ರೂ, (೨) ಬಂಗಾರದ ಉಡದಾರ ೧ (ತೂಕ ತೊಲೆ ೧೨) ಒರೆ ಚೊಕ್ಕ. ಕಿಮ್ಮತ್ತು (ಅಜಮಾಸು) ೬೦೦ರೂ.

ತಾ. ೧—೫—೪೪ನೇ ದಿವಸ ೬೦೦ ರೂ. ಸಾಲವನ್ನೂ ೨೪ ರೂ. ಬಡ್ಡಿಯನ್ನೂ ಕೊಟ್ಟು ಉಡದಾರ ಒಂದನ್ನೇ ಒಯ್ದನು. ಇಬ್ಬರಲ್ಲಿಯೂ ಕೀರ್ದಿ—ಖತಾವಣಿಗಳನ್ನು ಬರೆಯಿರಿ.

ಹಾವೇರಿ ರಾಮಣ್ಣ ನಾಯಿಕರ ಕೀರ್ದಿ. ತಾ. ೧-೧—೪೪

ಜಮೆ	ರೂ.	ಖರ್ಚು	ರೂ
		೧೨೦೦ ಶಾಂತಪ್ಪ ಜವಳಿ ಖಾತೆ:— ಇವನು ೧೦೦ಕ್ಕೆ ೧ ವ. ಕ್ಕೆ ೬ ರೂ ಬಡ್ಡಿ ಗೊತ್ತು ಮಾಡಿ ೮ ತಿಂಗಳ ಮುದ್ದತಿನಿಂದ ೧ ಜೋಡು ಬಂಗಾರದ ನಾಗಮುರಿಗಿ, ಒಂದ ಬಂಗಾರದ ಉಡದಾರ ಇಟ್ಟು ಸಾಲ ಒಯ್ದನು. ಖಾ. ಪಾ	

ಒತ್ತೆ ಜೀನಸುಗಳ ಯಾಡಿಯು.

ತಾರೀಖು	ಹೆಸರು	ತೂಕ	ಒರೆ	ಪರಿಣಾಮ	ಅಜಮಾಸ ಕಿಮ್ಮತ್ತು	ಮಾಲಕನ ಹೆಸರು.	ಶರಾ
೧-೧-೪೪	ಬಂಗಾರದ ನಾಗ ಮುರಿಗಿ	೨೪ ತೊ	ಮುಂಬಯಿ ಘಟ್ಟಿ	ಜಮೆ	೧೨೦೦	ಶಾಂತಪ್ಪ ಜವಳಿ	ಒತ್ತೆ ಇಟ್ಟ ಬಾಬತು
೧ ೧-೪೪	ಬಂಗಾರದ ಉಡದಾರ	೧೨ ತೊ.	ಚೊಕ್ಕ	,,	೬೦೦	,,	,,
೧-೫-೪೪	ಬಂಗಾರದ ಉಡದಾರ	೧೨ ತೊ.	ಚೊಕ್ಕ	ಖರ್ಚು	೬೦೦		ಒತ್ತೆ ಬಿಡಿಸಿ ಕೊಂಡ ಬಾಬತು
೧-೫-೪೪	ಬಂಗಾರದ ನಾಗ ಮುರಿಗಿ	೨೪ ತೊ.	ಮುಂಬಯಿ ಘಟ್ಟಿ	ಶಿಲಕು	೧೨೦೦	,,	ಒತ್ತೆ ಇಟ್ಟ ಬಾಬತು

ಕೀರ್ದಿ ತಾ. ೧—೫—೪೪

ಜಮೆ	ರೂ.	ಖರ್ಚು	ರೂ.
೬೦೦ ಶಾಂತಪ್ಪ ಜವಳಿ ಖಾತೆ:— ೬೦೦ ರೂ. ಸಾಲವನ್ನು ಕೊಟ್ಟು ಉಡದಾರ ೧ ತೂಕ ತೊ. ೧೨ ಪರತ ಒಯ್ದನು. ಸಹಿ—ಶಾಂತಪ್ಪ ಜವಳಿ. ಖಾ. ಪಾ.			

ಖತಾವಣಿ

ಖಾತೆ:—ಶಾಂತಪ್ಪ ಜವಳಿ

೬೦೦ ಕೀ. ಪಾ. ೪ ತಾ. ೧—೫—೪೪ ಇ ೧೨೦೦ ಕೀ. ಪಾ. ೧ ತಾ. ೧—೧—೪೪ ಇ.

ಜವಳಿ ಸಾತಪ್ಪನ ಕೀರ್ದಿ ತಾ. ೧—೧—೪೪

ಜಮೆ	ರೂ.	ಖರ್ಚು	ರೂ.
೧೨೦೦ ರಾಮಣ್ಣ ನಾಯಿಕ ಹಾವೇರಿ ಖಾತೆ:- ತಪಶೀಲು :—ಇವರಲ್ಲಿ ೧೦೦ಕ್ಕೆ ೧ ವ. ಕ್ಕೆ ೬ ರೂ. ಬಡ್ಡಿ ಕರಾರ ಮಾಡಿ, ೮ ತಿಂಗಳು ಮು ದ್ದತು ಗೊತ್ತು ಮಾಡಿ ಬಂಗಾರದ ನಾಗಮುರಿಗಿ ಜೋಡು ೧ ತೊ. ೨೪, ಉಡದಾರ ೧ ತೊಲಿ ೨ ಒತ್ತೆ ಇಟ್ಟು ಸಾಲ ತಂದಿತು. ಖಾ. ಪಾ.			

ತಾ. ೧—೫—೪೪

ಜಮೆ	ರೂ.	ಖರ್ಚು	ರೂ.
		೬೦೦ ರಾಮಣ್ಣ ನಾಯಿಕ ಹಾವೇರಿ ಖಾತೆ:— ೬೦೦ ರೂ. ಅಸಲನ್ನು ಕೊಟ್ಟು ಉಡದಾರ ಬಿಡಿಸಿ ಕೊಂಡದ್ದು. ಖಾ. ಪಾ.	

ಬಡ್ಡಿಯ ಜಮಾಖರ್ಚನ್ನು ಹಿಂದಿನಂತೆ ಬರೆಯಬೇಕು.

ಖತಾವಣಿ.

ಖಾತೆ :—ರಾಮಣ್ಣ ನಾಯಿಕ ಹಾವೇರಿ

ಜಮೆ ________ ರೂ. ಖರ್ಚು ________ ರೂ.

೧೨೦೦ ಕೀ. ಪಾ. ೧ ತಾ. ೧-೧-೪೪. ೬೦೦ ಕೀ. ಪಾ. ೮ ತಾ. ೧-೫-೪೪.

(೪) **ಸ್ಥಾವರ ಆಸ್ತಿಗಳ ಒತ್ತೆ** :—ಹೊಲ, ಮನೆ, ತೋಟ, ಅಂಗಡಿ ಗಿರಣಿ-ಮುಂತಾದ ಸ್ಥಾವರ ಆಸ್ತಿಗಳನ್ನು ಬರೆಯಿಸಿಕೊಂಡು ಸಾವುಕಾರರು ಸಾಲವನ್ನು ಕೊಡುವರು. ಸ್ಥಾವರ ಆಸ್ತಿಗಳ ಒತ್ತೆಗಳಲ್ಲಿ ಮೂರು ಪ್ರಕಾರ ಗಳುಂಟು. ಅವು ಯಾವವೆಂದರೆ:—(ಅ) ತೋರ ಒತ್ತೆ. (ಬ) ಇಳಿ ಒತ್ತೆ. (ಕ) ಕಬ್ಜಾ ಒತ್ತೆ.

(ಅ) **ತೋರ ಒತ್ತೆ** :—೧೦೦ಕ್ಕೆ ೧ ವ. ಕ್ಕೆ ಕೆಲವೊಂದು ದರದಂತೆ ಬಡ್ಡಿಯನ್ನೂ ಮುದ್ದತನ್ನೂ ಕರಾರ ಮಾಡಿ ಮೇಲೆ ಹೇಳಿದ ಆಸ್ತಿಗಳಲ್ಲಿ ಬೇಕಾದದ್ದನ್ನು ಬರಕೊಡಬಹುದು.

ಈ ತರದ ಸಾಲಗಳ ಜಮಾಖರ್ಚನ್ನು ಮಾಡುವ ರೀತಿಯು :— ಸಾವುಕಾರನಲ್ಲಿ-ಸಾಲಗಾರನು ಒಯ್ದಷ್ಟು ರಕಮನ್ನು ಅವನ ಖಾತೆಗೆ ಖರ್ಚು ಬರೆದು ಕಾಗದಕ್ಕೆ ನಂಬರು ಹಾಕಿ ತಪಶೀಲಿನಲ್ಲಿ ಹೊಲದ ಕ್ಷೇತ್ರ, ರಕಮು ಮುಂತಾದವುಗಳನ್ನು ಬರೆಯಬೇಕು. ಮುಂದೆ ಗಂಟೂ ಬಡ್ಡಿಯೂ ಬಂದ ಮೇಲೆ ಗಂಟನ್ನು ಅವನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಜಮೆ ಮಾಡಬೇಕು. ಅಥವಾ ದಾಗೀನೆ ಒತ್ತೆ ಇಟ್ಟುಕೊಂಡು ಮಾಡುವ ೨ನೇ ರೀತಿಯಂತೆ ಜಮಾಖರ್ಚು ಮಾಡಬೇಕು.

ಸಾಲಗಾರನಲ್ಲಿ :— ಸಾವುಕಾರನ ಖಾತೆಗೆ ಸಾಲದ ರಕಮನ್ನು ಜಮೆ ಮಾಡಿ ತಪಶೀಲಿನಲ್ಲಿ ಮೇಲಿನಂತೆಯೇ ಬರೆಯಬೇಕು. ಗಂಟನ್ನೂ ಬಡ್ಡಿಯನ್ನೂ ಕೊಟ್ಟಾಗ್ಗೆ ಗಂಟನ್ನು ಸಾವುಕಾರನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಖರ್ಚು ಬರೆಯಬೇಕು.

(ಬ) **ಇಳಿ ಒತ್ತೆ** :— ಸ್ಥಾವರ ಆಸ್ತಿಗಳನ್ನು ಇಂತಿಷ್ಟು ಅಸಲಿಗೆ ಇಂತಿಷ್ಟು ಮುದ್ದತಿನ ವರೆಗೆ ಉಪಭೋಗ ಮಾಡಿ ತಿರುಗಿ ಸಾಲಗಾರನಿಗೆ ಒತ್ತೆ ಹಾಕಿದ ಆಸ್ತಿಯನ್ನು ಬಿಡುವರು. ಇಲ್ಲಿ ಆಸ್ತಿಯು ಸಾವುಕಾರನ ಕಬ್ಜೆಯಲ್ಲಿರುವದು.

ಇದರ ಜಮಾಖರ್ಚಿನ ರೀತಿಯು :— ಸಾವುಕಾರನಲ್ಲಿ—ಸಾಲಗಾರನಿಗೆ ಕೊಟ್ಟಷ್ಟು ರಕಮನ್ನು ಅವನ ಖಾತೆಗೆ ಖರ್ಚು ಬರೆದು ತಪಶೀಲಿನಲ್ಲಿ—ಒತ್ತೆ ಹಾಕಿದ ಆಸ್ತಿಯ ಹೆಸರು ಉಪಭೋಗ ಮಾಡುವ ಮುದ್ದತು, ಮುಂತಾದವುಗಳನ್ನು ಬರೆಯಬೇಕು. ಮುದ್ದತು ತುಂಬುವ ತನಕ ಸಾಲದ ರಕಮಿಗೆ ಮುದ್ದತಿನಿಂದ ಭಾಗಿಸಿ ಬರುವ ರಕಮನ್ನು ಪ್ರತಿ ವರ್ಷ ಜಮೆ ಮಾಡಿ ಕಡೆಗೆ ಆಸ್ತಿಯನ್ನು ಬಿಡಬೇಕು. ಆಸ್ತಿಯಿಂದ ಬಂದ ಉತ್ಪನ್ನದ ರಕಮು ಈ ರಕಮಿಗಿಂತ ಹೆಚ್ಚಿಗೆ ಇದ್ದರೆ, ಹೆಚ್ಚಿನ ರಕಮನ್ನು ಬಡ್ಡಿಯ ಖಾತೆಗೆ ಜಮೆ ಮಾಡಬೇಕು. ಕಡಿಮೆ ಆದಷ್ಟು ರಕಮನ್ನು ಬಾದ ಖಾತೆಗೆ ಖರ್ಚು ಬರೆದು ಸಾಲಗಾರನ ಖಾತೆಗೆ ಜಮೆ ಬರೆಯಬೇಕು. ಅಸಲಿನಷ್ಟೇ ರಕಮು ಬಂದರೆ ಬಡ್ಡಿಯ ಖಾತೆಯ ಜಮಾಖರ್ಚನ್ನು ಮಾಡಬಾರದು. ಇಳಿ ಒತ್ತೆ ಕಾಗದಗಳ ಯಾದಿಯನ್ನಾದರೂ ಇಡಬೇಕು. ಸಾಲಗಾರನಲ್ಲಿ:- ಸಾಲ ತಂದಷ್ಟು ರಕಮನ್ನು ಸಾವುಕಾರನ ಖಾತೆಗೆ ಜಮೆ ಬರೆದು ತಪಶೀಲಿನಲ್ಲಿ ಮೇಲೆ ಹೇಳಿದಂತೆಯೇ ಬರೆಯತಕ್ಕದ್ದು.

(ಕ) **ಕಬ್ಜಾ ಒತ್ತೆ :** ಸಾಲ ತೀರಿಸುವ ವರೆಗೆ ಆಸ್ತಿಯು ಬಡ್ಡಿಗೆ ಸಾವುಕಾರನಲ್ಲಿ ಇರಬೇಕು.

ಕಬ್ಜಾ ಒತ್ತೆಯ ಜಮಾಖರ್ಚಿನ ರೀತಿಯು :— ಸಾವುಕಾರನಲ್ಲಿ ಸಾಲಗಾರನ ಖಾತೆಗೆ ಕೊಟ್ಟ ರಕಮನ್ನು ಖರ್ಚು ಬರೆದು ತಪಶೀಲಿನಲ್ಲಿ ಒತ್ತೆ ಹಾಕಿದ ಆಸ್ತಿಯ ಹೆಸರು ಮೊದಲಾದವುಗಳನ್ನು ಬರೆಯಬೇಕು. ಸಾಲಗಾರನಿಂದ ರಕಮು ಬಂದ ಮೇಲೆ ಅವನ ಖಾತೆಗೆ ಜಮೆ ಮಾಡಬೇಕು. ಆಸ್ತಿಯಿಂದ ಬಂದ ಉತ್ಪನ್ನದ ರಕಮನ್ನು ಬಡ್ಡೀ ಖಾತೆಗೆ ಜಮೆ ಮಾಡಬೇಕು.

ಸಾಲಗಾರನಲ್ಲಿ :— ಸಾಲ ತಂದಷ್ಟು ರಕಮನ್ನು ಸಾವುಕಾರನ ಖಾತೆಗೆ ಜಮೆ ಮಾಡಬೇಕು. ಮತ್ತು ತಪಶೀಲಿನಲ್ಲಿ ಮೇಲೆ ಬರೆದಂತೆ ಬರೆಯಬೇಕು.

೩. **ಇಡುಗಂಟು :**— ಸ್ವತಃ ಹಣವನ್ನು ಉಪಯೋಗ ಮಾಡದವರು ಇಲ್ಲವೆ, ಮಿತದಿಂದ ವೆಚ್ಚ ಮಾಡಿ, ಹಣವನ್ನು ಶಿಲಕು ಉಳಿಸಿ

ದವರು ತಮ್ಮ ಹಣವನ್ನು ಬಡ್ತೀ ಕರಾರಿನಿಂದ ಸಾವುಕಾರನಲ್ಲಿ ತಂದು ಇಡುವರು. ಇಂಥ ಹಣಕ್ಕೆ ಇಡುಗಂಟು (ಠೇವು) ಅನ್ನುವರು.

ಇಡುಗಂಟಿನ ಜಮಾಖರ್ಚಿನ ರೀತಿಯು:— ಸಾವುಕಾರನಲ್ಲಿ—ಇಟ್ಟಷ್ಟು ರಕಮನ್ನು ಇಡುಗಂಟಿನ ಖಾತೆಗೆ ಜಮೆ ಮಾಡಿ ತಪಶೀಲಿನಲ್ಲಿ ಮಾಲಕನ ಹೆಸರು, ಬಡ್ಡಿಯ ದರ, ಮುದ್ದತು ಬರೆಯಬೇಕು. ಮುಂದೆ ರಕಮನ್ನು ಕೊಟ್ಟಂತೆ ಅದೇ ಖಾತೆಗೂ, ಬಡ್ಡಿಯನ್ನು ಬಡ್ಡಿಯ ಖಾತೆಗೂ ಖರ್ಚು ಬರೆಯಬೇಕು. ಅಥಾವೆಯ ಕಾಲಕ್ಕೆ ಬಡ್ಡಿ ಕೊಡದಿದ್ದರೆ, ಕೊಡತಕ್ಕ ಬಡ್ಡಿಯನ್ನು ಬಡ್ಡಿಯ ಖಾತೆಗೆ ಖರ್ಚು, ಕೊಡತಕ್ಕ ಬಡ್ಡಿಯ ಖಾತೆಗೆ ಜಮೆ ಬರೆಯಬೇಕು. **ಮಾಲಕನಲ್ಲಿ**:— ಇಟ್ಟಷ್ಟು ರಕಮನ್ನು ಇಡುಗಂಟಿನ ಖಾತೆಗೆ ಖರ್ಚು ಬರೆದು ತಪಶೀಲಿನಲ್ಲಿ—ಸಾವುಕಾರನ ಹೆಸರು, ಬಡ್ಡಿಯ ದರ, ಇಟ್ಟ ಮುದ್ದತು, ಬರೆಯಬೇಕು. ರಕಮು ತಂದರೆ ಅದೇ ಖಾತೆಗೆ ಜಮೆ ಮಾಡಬೇಕು. ಬಂದ ಬಡ್ಡಿಯನ್ನು ಬಡ್ಡಿಯ ಖಾತೆಗೆ ಜಮೆ ಮಾಡಬೇಕು. ಅಥಾವೆಯ ಕಾಲಕ್ಕೆ ಬರತಕ್ಕ ಬಡ್ಡಿಯು ಉಳಿದಿದ್ದರೆ, ಅಷ್ಟು ರಕಮು ಬಡ್ಡಿಯ ಖಾತೆಗೆ ಜಮೆ, ಬರತಕ್ಕ ಬಡ್ಡಿಯ ಖಾತೆಗೆ ಖರ್ಚು ಬರೆಯ ಬೇಕು

೪. **ಭಲಾವಣಿ ಪತ್ರ**:— ಇಂಥ ಮನುಷ್ಯನಿಗೆ ಗೊತ್ತು ಮಾಡಿದ ಮುದತಿನೊಳಗೆ ಇಂತಿಷ್ಟು ರೂಪಾಯಿಗಳ ವರೆಗೆ ಕೊಡಿರಿ ಎಂದು ಒಬ್ಬನು ಮತ್ತೊಬ್ಬನಿಗೆ ತನ್ನ ಸಹಿಯಿಂದ ಬರೆದ ಪತ್ರಕ್ಕೆ ಭಲಾವಣಿ ಪತ್ರ ಅನ್ನುವರು. ಸಾಲಗಾರನಿಂದ ಹಣ ಬರದಿದ್ದರೆ, ಪತ್ರ ಬರಕೊಟ್ಟ ಸಾವುಕಾರನು ಹಣ ಕೊಡಬೇಕಾಗುವದು.

ಭಲಾವಣಿ ಪತ್ರದ ವ್ಯವಹಾರಕ್ಕೆ ೩ ಇಸಮುಗಳು ಬೇಕಾದರೂ ಅದು ಹುಂಡಿಯಲ್ಲ; ಯಾಕಂದರೆ—(೧) ಹುಂಡಿಯ ರಕಮನ್ನು ಒಮ್ಮೆಲೇ ತೆಗೆದುಕೊಳ್ಳಬೇಕು. ಭಲಾವಣಿ ಪತ್ರದ ರಕಮನ್ನು ಮುದ್ದತಿನೊಳಗಾಗಿ, ಬೇಕಾದಷ್ಟು ಭಾಗಗಳಿಂದ ತೆಗೆದುಕೊಳ್ಳಬಹುದು. (೨) ಹುಂಡಿಯಲ್ಲಿ ಬರೆದ ರಕಮನ್ನು ಪೂರ್ಣ ತೆಗೆದುಕೊಳ್ಳಲಿಕ್ಕೇ ಬೇಕು. ಭಲಾವಣಿ ಪತ್ರದ ರಕಮಿನಲ್ಲಿ ಕಡಿಮೆ ಸಹ ತೆಗೆದುಕೊಳ್ಳಬಹುದು. (೩) ಹುಂಡಿಯನ್ನು ಮಾರಲಿಕ್ಕೆ ಬರುತ್ತದೆ. ಭಲಾವಣಿ ಪತ್ರವನ್ನು ಮಾರಲಿಕ್ಕೆ ಬರುವದಿಲ್ಲ.

ಸಾವುಕಾರನ ನಂಬಿಗೆಯು ಗಿರಾಕಿಗಳಿಗೆ ಪರಸ್ಥಳದಲ್ಲಿ ಬೇಕಾದಾಗ ಬೇಕಾದಷ್ಟು ರಕಮು ದೊರಕಬೇಕೆಂಬದೇ ಈ ಪತ್ರದ ಉದ್ದೇಶವು. ಈ ಪತ್ರವನ್ನು ಬರಕೊಡಬೇಕಾದರೆ, ಸಾವುಕಾರನು ತನ್ನ ಗಿರಾಕಿಯಿಂದ ೧೦೦ಕ್ಕೆ ೨ ಆಣೆಯಿಂದ ೪ ಆಣೆಯು ವರೆಗೆ ರಕಮನ್ನು ತೆಗೆದುಕೊಳ್ಳುವರು. ಹೀಗೆ ತೆಗೆದುಕೊಳ್ಳುವ ಹಣಕ್ಕೆ ಮನೋತಿ ಅನ್ನುವರು.

ಭಲಾವಣಿ ಪತ್ರದ ಜಮಾಖರ್ಚು:— ಬರಕೊಟ್ಟ ಸಾವುಕಾರನಲ್ಲಿ—ಪತ್ರದಲ್ಲಿ ಬರೆದ ರಕಮನ್ನು ೨ನೇ ಸಾವುಕಾರನ ಖಾತೆಗೆ ಜಮೆ; ತನ್ನ ಗಿರಾಕಿಯ ಖಾತೆಗೆ ಖರ್ಚು ಬರೆಯುತ್ತಾನೆ. ರಕಮು ತಿರುಗಿ ಬಂತೆಂದು ಗಿರಾಕಿಯಿಂದಾಗಲಿ, ಸಾವುಕಾರನಿಂದಾಗಲಿ, ತಿಳಿದ ಮೇಲೆ ಅಷ್ಟೇ ರಕಮು ಗಿರಾಕಿಯ ಖಾತೆಗೆ ಜಮೆ, ಸಾವುಕಾರನ ಖಾತೆಗೆ ಖರ್ಚು ಬರೆಯುತ್ತಾನೆ. ಗಿರಾಕಿಯಿಂದ ತನ್ನ ಕಡೆಗೆ ರಕಮು ಬಂದರೆ, ಗಿರಾಕಿಯ ಖಾತೆಗೆ ಜಮೆ ಮಾಡಿ ರಕಮು ಕೊಟ್ಟ ಬಳಿಕ ೨ನೆಯ ಸಾವುಕಾರನ ಖಾತೆಗೆ ಖರ್ಚು ಬರೆಯಬೇಕು.

೨ನೆಯ ಸಾವುಕಾರನಲ್ಲಿ:— ಭಲಾವಣಿ ಪತ್ರವು ಬಂದ ಕೂಡಲೆ ಜಮಾಖರ್ಚು ಮಾಡುವದಿಲ್ಲ. ಆದರೆ ಗಿರಾಕಿಯು ರಕಮನ್ನು ತೆಗೆದುಕೊಂಡಂತೆ ಸಾವುಕಾರನ ಖಾತೆಗೆ ಖರ್ಚು ಬರೆದು, ತಪಶೀಲಿನಲ್ಲಿ ಗಿರಾಕಿಯ ಹಸ್ತೆ ಬರೆಯುತ್ತಾನೆ. ಗಿರಾಕಿಯಿಂದಾಗಲಿ, ಸಾವುಕಾರನಿಂದಾಗಲಿ, ಬಡ್ಡಿಗೂಟು ಬಂದ ಮೇಲೆ ಮುದ್ದಲವನ್ನು ಸಾವುಕಾರನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಜಮೆ ಹಿಡಿಯಬೇಕು

ಗಿರಾಕಿಯಲ್ಲಿ:— (ಅ) ಬರೆಸಿಕೊಂಡಷ್ಟು ರಕಮನ್ನು ಮೊದಲನೇ ಸಾವುಕಾರನ ಹೆಸರಲೆ ಜಮೆ, ೨ನೇ ಸಾವುಕಾರನ ಹೆಸರಲೆ ಖರ್ಚು ಬರೆಯಬೇಕು. ರಕಮನ್ನು ತೆಗೆದುಕೊಂಡಂತೆ ೨ನೇ ಸಾವುಕಾರನ ಹೆಸರಲೆ ಜಮೆ ಮಾಡಬೇಕು. ತಾನು ಕೊಟ್ಟಂತೆ ೧ನೇ ಸಾವುಕಾರನ ಹೆಸರಲೆ ಖರ್ಚು ಬರೆಯಬೇಕು. ಅಥವಾ (ಬ) ಭಲಾವಣಿ ಪತ್ರ ಬರೆಯಿಸಿಕೊಂಡ ಕೂಡಲೆ ಜಮಾಖರ್ಚನ್ನು ಮಾಡದೆ, ೨ನೇ ಸಾವುಕಾರನಿಂದ ರಕಮನ್ನು ತಂದಂತೆ ೧ನೇ ಸಾವುಕಾರನ ಹೆಸರಲೆ ಜಮೆ ಮಾಡಿ, ತಪಶೀಲಿನಲ್ಲಿ ೨ನೇ ಸಾವುಕಾರ

ನಿಂದ ಬಂದಿತೆಂದು ಬರೆಯುಬೇಕು. ಗಂಟು ಬಡ್ಡಿ ಕೊಟ್ಟಾಗ ೧ನೇ ಸಾವುಕಾರನ ಖಾತೆಗೂ ಬಡ್ಡಿಯನ್ನು ಬಡ್ಡಿಯ ಖಾತೆಗೂ ಖರ್ಚು ಬರೆಯುಬೇಕು. ಕಡಿಮೆ ಹಣ ಮುಟ್ಟಿದ್ದರೆ, ಉಳಿದಷ್ಟು ರಕಮನ್ನು ಮೊದಲನೆಯ ಸಾವುಕಾರನ ಖಾತೆಗೆ ಜಮೆ ೨ನೆಯ ಸಾವುಕಾರನ ಖಾತೆಗೆ ಖರ್ಚು ಬರೆಯುಬೇಕು. ತಪಶೀಲಿನಲ್ಲಿ "ಒಯ್ಯುದಿದ್ದ ಕಾರಣ" ಎಂದು ಬರೆಯುಬೇಕು.

ಕ) ಭಲಾವಣಿ ಪತ್ರ ಬರೆಸಿಕೊಂಡ ಕೂಡಲೆ ಜಮಾಖರ್ಚನ್ನು ಮಾಡದೆ ೨ನೆಯ ಸಾವುಕಾರನಿಂದ ರಕಮನ್ನು ತೆಗೆದುಕೊಂಡಂತೆ ಅವನ ಹೆಸರಲೆ ಜಮೆ ಮಾಡಬೇಕು. ಬಡ್ಡಿಗಂಟು ಕೊಟ್ಟಾಗ ಬಡ್ಡಿಯ ಖಾತೆಗೂ ಗಂಟನ್ನು ೨ನೆಯ ಸಾವುಕಾರನ ಖಾತೆಗೂ ಖರ್ಚು ಬರೆಯುಬೇಕು.

ಉದಾ :—(೪ ಧಾರವಾಡ ನಾಯಿಕ ರಂಗಪ್ಪನು ನೀಲಿ ಸಂಗಪ್ಪನಿಗೆ ೩೦೦೦ ರೂ ಗಳನ್ನು ೩ ತಿಂಗಳಲ್ಲಿ ಕೊಡಬೇಕೆಂದು ಗದಗ ಗೋಕುಲದಾಸ ಮಾರವಾಡಿಗೆ ಭಲಾವಣಿ ಪತ್ರವನ್ನು ತಾರೀಖು ೧೦—೫—೪೪ನೆಯ ದಿವಸ ಬರೆದನು. ಮನೋತಿ ೧೦೦ಕ್ಕೆ ೮ ೨ ಯಂತೆ, ಬಡ್ಡಿಯುದರ ೧೦೦ಕ್ಕೆ ೬ ರೂ. ಪ್ರ. ಇದ್ದವು. ನೀಲಿ ಸಂಗಪ್ಪನು ತಾರೀಖು ೧೫—೫—೪೪ನೆಯ ೧೦೦೦ ರೂ. ಗಳನ್ನೂ ತಾ. ೧—೬—೪೪ನೆಯ ದಿವಸ ೧೫೦೦ ರೂ. ಗಳನ್ನೂ ಗೋಕುಲದಾಸರಿಂದ ತೆಗೆದುಕೊಂಡನು, ತಾ. ೧೦—೯—೪೪ನೇ ದಿವಸ ನೀಲಿ ಸಂಗಪ್ಪನು ಗಂಟನ್ನೂ ಬಡ್ಡಿಯನ್ನೂ ಕೊಟ್ಟನು. ಮೂವರಲ್ಲಿಯೂ ಇದರ ಜಮಾಖರ್ಚನ್ನು ಬರೆಯಿರಿ.

ಬರೆದ ಸಾವಕಾರ.

ರಂಗಪ್ಪ ನಾಯಿಕ ಇವರ ಕೀರ್ದಿ. ತಾ. ೧೦—೫—೪೪.

ಜಮೆ		ರೂ.	ಖರ್ಚು		ರೂ.
೩೦೦೦	ಗೋಕುಲದಾಸ ಮಾರವಾಡಿ ಖಾತೆ:— ಅವರಿಗೆ ೩ ತಿಂಗಳಲ್ಲಿ ೩೦೦೦ ರೂ. ಗಳನ್ನು ೧೦೦ಕ್ಕೆ ೬ ರೂ. ಬಡ್ಡೀ ಕರಾರು ಮಾಡಿ ನೀಲಿ ಸಂಗಪ್ಪನಿಗೆ ಕೊಡಿರಿ. ಎಂದು ಭಲಾವಣಿ ಪತ್ರ ಕೊಟ್ಟದ್ದರಿಂದ ಅವನ ಖಾತೆಗೆ ಖರ್ಚು. ಖಾ. ಪಾ.		೩೦೦೦	ನೀಲಿ ಸಂಗಪ್ಪನ ಖಾತೆ:— ಗೋಕುಲದಾಸರ ಮೇಲೆ ಭಲಾವಣಿ ಪತ್ರ ಕೊಟ್ಟದ್ದರಿಂದ ಅವರ ಖಾತೆಗೆ ಜಮೆ. ಖಾ. ಪಾ.	

ಖತಾವಣಿ

ಖಾತೆ:— ಗೋಕುಲದಾಸ ಮಾರವಾಡಿ. ಖಾತೆ:— ಸಂಗಪ್ಪ ನೀಲಿ.

ಜಮೆ ರೂ. ಖರ್ಚು——ರೂ. ಜಮೆ—— ರೂ. ಖರ್ಚು——ರೂ.

೩೦೦೦ ಕೀ. ಪಾ. ೨೦ ೩೦೦೦ ಕೀ. ಪಾ. ೨೦

ತಾ. ೧೦-೫-೪೪. ತಾ. ೧೦-೫-೪೪

ನೀಲಿ ಸಂಗಪ್ಪನ ಕೀರ್ದಿ ತಾ. ೧೫—೫—೪೪

ಜಮೆ__________ರೂ. ಖರ್ಚು__________ರೂ.

೧೦೦೦ ರಂಗಪ್ಪ ನಾಯಿಕ ಇವರ ಖಾತೆ:
ಗೋಕುಲ ದಾಸರಿಂದ ನಾಯಿಕ
ಇವರ ೩೦೦೦ ರೂ. ಯ ಭಲಾ
ವಣಿ ಪತ್ರದ ಪ್ರಕಾರ ೧೦೦೦ ರೂ.
ಇಸಗೊಂಡದ್ದು.
ಖಾ. ಪಾ.

ಕೀರ್ದಿ ತಾ. ೧—೬—೪೪

ಜಮೆ__________ರೂ. ಖರ್ಚು__________ರೂ.

೧೫೦೦ ರಂಗಪ್ಪ ನಾಯಿಕ ಇವರ ಖಾತೆ:
ಇವರ ಭಲಾವಣಿ ಪತ್ರದ ಪ್ರಕಾರ
ಗೋಕುಲದಾಸರಿಂದ ಇಸಗೊಂ
ಡದ್ದು.
ಖಾ. ಪಾ.

ಕೀರ್ದಿ ತಾ. ೧೫—೯—೪೪

ಜಮೆ__________ರೂ. ಖರ್ಚು__________ರೂ.

೨೫೦೦ ರಂಗಪ್ಪ ನಾಯಿಕರ ಖಾತೆ:—
ಇವರ ೩೦೦೦ ರೂ. ಭಲಾವಣಿ
ಪತ್ರದ ಪ್ರಕಾರ ೨೫೦೦ ರೂ.
ಗೋಕುಲ ದಾಸರಿಂದ ತೆಗೆದು
ಕೊಂಡ ಬಾ. ತಿರುಗಿ ಕೊಟ್ಟಿದ್ದು.
ಖಾ. ಪಾ.

೩/೨ ಮನೋತಿ ಖಾತೆ:— ರಂಗಪ್ಪ ನಾಯಿಕ ಲಾವಣಿ ಪತ್ರ್ರ ಬಾ. ೩/೨ ರೂ. ಮನೋತಿ ಕೊಟ್ಟದ್ದು.
ಖಾ. ಪಾ.

೪೨/೮ ಬಡ್ಡಿಯ ಖಾತೆ:— ತಪಶೀಲು-
೨೦ ರೂ. ೧೦೦೦ ರೂ. ಗಳ ೪ ತಿಂಗಳ ಬಡ್ಡಿ ೧೦೦ಕ್ಕೆ ೬ ರೂ. ಪ್ರಕಾರ.
೨೨/೮ ೧೫೦೦ಗಳ ೩ ತಿಂಗಳ ಬಡ್ಡಿ ದರ ಮೇಲಿನಂತೆ.

೪೨/೮ ಅಂತೂ ಬಡ್ಡಿ.
ಖಾ. ಪಾ.

ಖತಾವಣಿ

ಖಾತೆ:— ರಂಗಪ್ಪ ನಾಯಿಕ		ಮನೋತಿ ಖಾತೆ:—	
ಜಮೆ——ರೂ.	ಖರ್ಚು——ರೂ.	ಜಮೆ——ರೂ.	ಖರ್ಚು——ರೂ.
೧೦೦೦ ಕೀ. ಪಾ. ೨೫ ೧೫-೫-೪೪	೨೫೦೦ ಕೀ. ಪಾ. ೪೭ ೧೫-೯-೪೪		೩/೨ ಕೀ. ಪಾ. ೪೭ ೧೫-೯-೪೪
೧೫೦೦ ಕೀ. ಪಾ. ೩೩ ೧-೬-೪೪			

ಬಡ್ಡಿಯ ಖಾತೆ

ಜಮೆ——ರೂ.	ಖರ್ಚು——ರೂ.
	೪೨/೮ ಕೀ ಪಾ ೪೭ ೧-೯-೪೪

ಗೋಕುಲ ದಾಸರ ಕೀರ್ದಿ ತಾ. ೧೫—೫—೪೪

ಜಮೆ——ರೂ.	ಖರ್ಚು——ರೂ.
	೧೦೦೦ ರಂಗಪ್ಪ ನಾಯಿಕರ ಖಾತೆ:— ಸದರಿಯವರ ೧೦೦೦ ರೂ. ಯ

ಭಲಾವಣಿ ಪತ್ರದ ಪ್ರಕಾರ ನೀಲಿ
ಸಂಗಪ್ಪನಿಗೆ ೧೦೦೦ ರೂ ಕೊ
ಟ್ಟೆವು. ಹಸ್ತೆ ಸಂಗಪ್ಪ ನೀಲಿ
ಖಾ. ಪಾ.

ತಾ. ೧—೬—೪೪

ಜಮೆ	ರೂ.	ಖರ್ಚು	ರೂ.
		೧೫೦೦ ರಂಗಪ್ಪ ನಾಯಿಕರ ಖಾತೆ:— ಇವರ ಭಲಾವಣಿ ಪತ್ರದ ಪ. ನೀಲಿ ಸಂಗಪ್ಪನಿಗೆ ೧೫೦೦ ರೂ. ಕೊಟ್ಟೆವು. ಹಸ್ತೆ ಖಾ. ಪಾ.	

ತಾ. ೧೫—೯—೧೮೪೪

ಜಮೆ	ರೂ.	ಖರ್ಚು	ರೂ.
೨೫೦೦ ರಂಗಪ್ಪ ನಾಯಿಕ ಖಾತೆ:— ನೀಲಿ ಸಂಗಪ್ಪನಿಂದ ಇವರ ಭಲಾವಣಿ ಪತ್ರದ ಬಾ. ರೋಖ ಬಂದವು. ಖಾ. ಪಾ.			
೪೨೭೮ ಬಡ್ಡಿಯು ಖಾತೆ:— ರಂಗಪ್ಪ ನಾಯಿಕರ ಭಲಾವಣಿ ಪತ್ರದ ಪ್ರಕಾರ ನೀಲಿ ಸಂಗಪ್ಪನಿಗೆ ಕೊಟ್ಟ ೨೫೦೦ ರೂ. ಗಳ ಮೇಲಿನ ಬಡ್ಡಿ ೪೨೭೮ ರೂ. ದರ ೧೦೦ಕ್ಕೆ ೬ರೂ. ಪ್ರಕಾರ. ಖಾ. ಪಾ.			

ಖತಾವಣಿ

ಖಾತೆ :— ರಂಗಪ್ಪ ನಾಯಿಕ		ಬಡ್ಡಿಯ ಖಾತೆ :—	
ಜಮೆ——ರೂ.	ಖರ್ಚು——ರೂ.	ಜಮೆ——ರೂ.	ಖರ್ಚು——ರೂ
೨೫೦೦ ಕೀ. ಪಾ. ೪೦ ತಾ. ೧೫-೯-೪೪	೧೦೦೦ ಕೀ. ಪಾ. ೧೮ ತಾ. ೧೫-೫-೪೪	೪೨೭೮ ಕೀ. ಪಾ. ೪೦ ತಾ. ೧೫-೯-೪೪	
	೧೫೦೦ ಕೀ. ಪಾ. ೨೯ ತಾ. ೧—೬—೪೪		

೫ ಬಡ್ಡಿಯನ್ನು ಆಕಾರ ಮಾಡುವ ರೀತಿಗಳು:— ಬಡ್ಡಿಯ ಆಕಾರವನ್ನು ಅನೇಕ ರೀತಿಯಿಂದ ಮಾಡಲಿಕ್ಕೆ ಬಂದರೂ ಇಲ್ಲಿ ಎರಡೇ ರೀತಿಗಳನ್ನು ತೋರಿಸಿದೆ. ೧ನೆಯ ರೀತಿಯು ಸುಲಭವಿದ್ದದರಿಂದ ವಿಶೇಷ ಪ್ರಚಾರದಲ್ಲಿದೆ

ಎರಡೂ ರೀತಿಗಳನ್ನು ಹೇಳುವ ಮೊದಲು ಬಡ್ಡಿಯ ಸಂಬಂಧದ ಕೆಲವು ಸಂಕೇತಗಳನ್ನು ತಿಳಿಸುವೆವು. ೧೦೦ಕ್ಕೆ ೧ ತಿಂಗಳಿಗೆ ಅಥವಾ ೧ ವ. ಕ್ಕೆ ಇಂತಿಷ್ಟು ಆಣೆಗಳ; ೧ ರೂ. ಗೆ ಇಂತಿಷ್ಟು ಪೈಗಳು ಎಂದು ಬಡ್ಡಿಯ ದರವನ್ನು ಹೇಳುವ ರೀತಿಯು ಈ ದೇಶದಲ್ಲಿದೆ. ಸಾಲಗಳ ಮೇಲೆ ಬಹಳ ಮಾಡಿ ಸರಳಬಡ್ಡಿಯ ಆಕಾರ ಮಾಡುವರು. ಮುದ್ದತು ಮೂರು ವರ್ಷಗಳಿಗಿಂತ ಹೆಚ್ಚು ಇದ್ದರೆ ಅಥವಾ ಸರಿ ಮೂರು ವರ್ಷಗಳಿದ್ದರೆ ಅಧಿಕ ಮಾಸವನ್ನು ಮುದ್ದತಿನಲ್ಲಿ ಹಿಡಿಯುವದಿಲ್ಲ. ಮುದ್ದತು ಒಂದೇ ವರ್ಷ ವಿದ್ದಾಗ ಅಧಿಕಮಾಸವು ಬಂದರೆ ೧೦ ದಿವಸಗಳನ್ನು ಬಿಟ್ಟು ೨೦ ದಿವಸಗಳ ಬಡ್ಡಿಯನ್ನು ಆಕಾರ ಮಾಡುವರು. ಅಸಲು ಮುದ್ದತುಗಳ ಗುಣಾಕಾರಕ್ಕೆ ಕಚ್ಚಿಗಳೆಂದೆನ್ನುವರು. ಬಡ್ಡಿಯ ದರ ಮತ್ತು ಕಚ್ಚಿಗಳ ಗುಣಾಕಾರಕ್ಕೆ ೧೦೦ರಿಂದ ಭಾಗಿಸಿದರೆ ಬರುವದೇ ಬಡ್ಡಿಯು.

$$\therefore \frac{\text{ಅಸಲು} \times \text{ಮುದ್ದತು} \times \text{ಬಡ್ಡಿಯ ದರ}}{೧೦೦} = \text{ಬಡ್ಡಿಯು}$$

೧ನೆಯ ರೀತಿಯು:—ಪ್ರತಿಯೊಂದು ರಕಮಿಗೆ ಆಥಾವೆಯ ಕಾಲದ ವರೆಗೆ ಕಚ್ಚಿಗಳನ್ನು ಆಕಾರ ಮಾಡುವರು. ಖಾತೆಯ ಹೆಸರಿನ ಮುಂದೆ ಇಂಥ ವರ್ಷದ ಬಡ್ಡಿಯ ಆಕಾರ ಎಂದು ಬರೆಯಬೇಕು. ಆ ಮೇಲೆ ಖಾತೆ ಯಂತೆ ಬರೆಯಬೇಕು. ಖಾತೆಯೊಳಗಿನ ಜಮೆಯ ಮತ್ತು ಖರ್ಚಿನ ರಕಮು

ಗಳಿಗೆ ಅಧಾವೆಯ ಕಾಲದ ವರೆಗೆ ಆಗುವ ಮುದ್ದತುಗಳನ್ನು ತೆಗೆದು ಯೋಗ್ಯ ಕಡೆಗೆ ೧ನೆಯ ಮನೆಯಲ್ಲಿ ಕಚ್ಚೆಗಳನ್ನೂ, ೨ನೆಯ ಮನೆಯಲ್ಲಿ ರಕಮನ್ನೂ, ೩ನೆಯ ಮನೆಯಲ್ಲಿ ಮುದ್ದತನ್ನೂ ಬರೆಯಬೇಕು. ಮುಂದೆ ಜಮೆಯ ಮತ್ತು ಖರ್ಚಿ ಕಚ್ಚೆಗಳನ್ನು ಪ್ರತ್ಯೇಕವಾಗಿ ಬೇರೀಜು ಮಾಡಬೇಕು. ಜಮೆಯ ಕಚ್ಚೆಗಳು ಖರ್ಚಿನ ಕಚ್ಚೆಗಳಿಗಿಂತ ಹೆಚ್ಚಾದರೆ ಹೆಚ್ಚಾದ ಕಚ್ಚೆಗಳ ಮೇಲೆ ಬಡ್ಡಿಯನ್ನು ಕೊಡಬೇಕೆಂದೂ, ಕಡಿಮೆಯಾದರೆ ಕಡಿಮೆಯಾದಷ್ಟು ಕಚ್ಚೆಗಳ ಮೇಲಿನ ಬಡ್ಡಿಯು ಬರಬೇಕೆಂದೂ ತಿಳಿಯಬೇಕು. ಕಚ್ಚೆಗಳಿಗೆ ಬಡ್ಡಿಯ ಆಕಾರವನ್ನು ಮಾಡಬೇಕು.

ಉದಾ:— (೫) ಕೆಳಗೆ ಕೊಟ್ಟ ಖಾತೆಯ ಬಡ್ಡಿಯನ್ನು ಆಶ್ವಿನ ಬಹುಳ ೩೦ಯ ವರೆಗೆ ಆಕಾರ ಮಾಡಿರಿ. ಬಡ್ಡಿಯ ದರವು ೧೦೦ಕ್ಕೆ ೧ ತಿಂಗಳಿಗೆ ೮ ಆ ಪ್ರಕಾರ.

ಖಾತೆ:— ರಾಮಚಂದ್ರ ಗೋಪಾಳ ಸಾವಂತ.

ಜಮೆ	ರೂ.	ಖರ್ಚು	ರೂ.
ಕೀ. ಪಾ. ೧೯ ವೈ. ಶು. ೫	೫೪೦	ಕೀ. ಪಾ. ೧೦ ಚೈ. ಶು. ೧೦	೪೫೦
ಕೀ. ಪಾ. ೨೬ ಜ್ಯೇ. ವ. ೭	೩೬೦	ಕೀ. ಪಾ. ೨೧ ವೈ. ವ. ೩	೭೦೦
ಕೀ. ಪಾ. ೩೫ ಆಷಾ. ವ. ೬	೭೨೦	ಕೀ. ಪಾ. ೪೨ ಶ್ರಾ. ವ. ೨	೭೫೦
ಕೀ. ಪಾ ೩೯ ಶ್ರಾ. ಶು. ೧೫	೮೦೦	ಕೀ ಪಾ. ೪೭ ಭಾ. ವ ೧೨	೧೧೦

ಖಾತೆ:— ರಾಮಚಂದ್ರ ಗೋಪಾಳ ಸಾವಂತ ಶಕೆ ೧೮೪೦ ಆಶ್ವಿನ ಬಹುಳ ೩೦ಯ ವರೆಗೆ ಬಡ್ಡಿಯ ಆಕಾರ ಮಾಡಿದ್ದು. ಬಡ್ಡಿಯ ದರ ೧೦೦ಕ್ಕೆ ೧ ತಿಂಗಳಿಗೆ ೮ ಆ ಪ್ರಕಾರ.

ಕಚ್ಚೆ	ಜಮೆ		ಕಚ್ಚೆ	ಖರ್ಚು	
೩೧೫೦	ರೂ. ೫೪೦	ಮು. ೫/೨೫ ದಿ.	೩೦೦೦	ರೂ. ೪೫೦	ಮು. ೬/೨೦ ದಿ.
೧೫೩೬	ರೂ. ೩೬೦	ಮು. ೪/೮ ದಿ.	೩೭೮೦	ರೂ. ೭೦೦	ಮು. ೫/೧೨ ದಿ.
೨೩೭೬	ರೂ. ೭೨೦	ಮು. ೩/೯ ದಿ.	೧೫೫೦	ರೂ. ೭೫೦	ಮು ೨/೧೩ ದಿ.
೨೦೦೦	ರೂ. ೮೦೦	ಮು. ೨/೧೫ ದಿ.	೧೩೨	ರೂ ೧೨೦	ಮು. ೧/೩ ದಿ.
೯೦೬೨			೮೪೬೨		

೬೦೦ ಕಚ್ಚೆಗಳು (೬೦೦×ಬಡ್ಡಿಯ ದರ

$\frac{೧}{೨} \times \frac{೧}{೧೦೦} =$)

= ೩ ರೂ. ಬಡ್ಡಿ ಕೊಡತಕ್ಕದ್ದು.

೯೦೬೨

∴ ಬಡ್ಡಿ = $\frac{೬೦೦}{೨೦೦}$ = ೩ ರೂ.

೨ನೆಯ ರೀತಿಯು:—ಪ್ರತಿಯೊಂದು ಮುದ್ದತಿಗೆ ಇರುವ ಬಾಕಿಗಳ ಮೇಲೆ ಕಚ್ಚೆಗಳನ್ನು ಆಕಾರ ಮಾಡುವದು. ಹಿಂದಿನ ಉದಾಹರಣೆಯನ್ನು ಈ ರೀತಿಯಿಂದ ಬಿಡಿಸಿರಿ.

ಸ್ಪಷ್ಟೀಕರಣ:— ೪೫೦ ರೂ. ಗಳನ್ನು ಜ್ಯೈ. ಶು. ೧೦ ಗೆ ಒಯ್ದು ೫೪೦ ರೂ. ಗಳನ್ನು ವೈ. ಶು. ೫ ಗೆ ತಂದು ಕೊಟ್ಟಿರುತ್ತಾನೆ. ೪೫೦ ರೂ. ಗಳಿಗೆ ಜ್ಯೈ. ಶು. ೧೦ ಯಿಂದ ವೈ. ಶು. ೫ ಯ ವರೆಗೆ ಅಂದರೆ ೨೫ ದಿ. ಮುದ್ದತಿಗೆ (೪೫೦×೨೫/೩೦=) ೩೭೫ ಖರ್ಚಿ ಕಚ್ಚೆಗಳಾದವು. ವೈ. ಶು. ೫ ಗೆ (೫೪೦-೪೫೦=) ೯೦ ರೂ. ಜಮೆಯ ಬಾಕಿಯು ಆಯಿತು. ವೈ. ಶು. ೫ ಯಿಂದ ವೈ. ವ. ೩ ಯ ವರೆಗೆ ಅಂದರೆ ೧೩ ದಿ. ಮುದ್ದತಿಗೆ ೯೦ ರೂ. ಗಳಿಗೆ (೯೦×೧೩/೩೦=) ೩೯ ಜಮೆಯ ಕಚ್ಚೆಗಳಾದವು. ವೈ. ವ. ೩ ಯ ವರೆಗೆ (೭೦೦-೯೦=) ೬೧೦ ರೂ. ಖರ್ಚಿನ ಬಾಕಿಯು ಆಯಿತು. ವೈ. ವ. ೩ ಯಿಂದ ಜ್ಯೈ. ವ. ೭ ಯ ವರೆಗೆ ಅಂದರೆ ೩೪ ದಿ. ಮುದ್ದತಿಗೆ ೬೧೦ ರೂಪಾಯಿಗಳಿಗೆ (೬೧೦×೩೪/೩೦=) ೬೯೧ ೧/೩ ಖರ್ಚಿನ ಕಚ್ಚೆಗಳಾದವು. ಜ್ಯೈ. ವ. ೭ ಗೆ (೬೧೦-೩೬೦=) ೨೫೦ ರೂ. ಖರ್ಚಿನ ಬಾಕಿಯಾಯಿತು. ಜ್ಯೇ. ವ. ೭ ಯಿಂದ ಆಷಾ. ವ. ೬ ಯ ವರೆಗೆ ಅಂದರೆ ೨೯ ದಿ. ಮುದ್ದತಿಗೆ ೨೫೦ ರೂ. ಗಳಿಗೆ (೨೫೦×೨೯/೩೦=) ೨೪೧ ೨/೩ ಖರ್ಚಿನ ಕಚ್ಚೆಗಳಾದವು. ಆಷಾಢ ವ ೬ ಗೆ (೭೨೦—೨೫೦=) ೪೭೦ ರೂಪಾಯಿ ಜಮೆಯ ಬಾಕಿಯಾಯಿತು. ಆಷಾಢ ವದ್ಯ ೬ ಯಿಂದ ಶ್ರಾ. ಶು. ೧೫ನೆಯ ವರೆಗೆ ಅಂದರೆ ೨೪ ದಿ. ಮುದ್ದತಿಗೆ ೪೭೦ ರೂಪಾಯಿಗಳಿಗೆ (೪೭೦×೨೪/೩೦=) ೩೭೬ ಜಮೆಯ ಕಚ್ಚೆಗಳಾದವು. ಶ್ರಾ. ಶು. ೧೫ ಗೆ (೪೭೦+೮೦೦=) ೧೨೭೦ ರೂ. ಜಮೆಯ ಬಾಕಿಯಾಯಿತು. ಶ್ರಾ. ಶು. ೧೫ ಯಿಂದ ಶ್ರಾ. ವ. ೧೩ ಯ ವರೆಗೆ ಅಂದರೆ ೧೩ ದಿವಸ ಮುದ್ದತಿಗೆ ೧೨೭೦ ರೂಪಾಯಿಗಳಿಗೆ (೧೨೭೦×೧೩/೩೦=) ೫೫೦ ೧/೩ ಜಮೆಯ ಕಚ್ಚೆಗಳಾದವು. ಶ್ರಾ. ವ. ೧೩ ಗೆ (೧೨೭೦-೭೫೦=) ೫೨೦ ರೂ. ಜಮೆಯ ಬಾಕಿಯಾಯಿತು. ಶ್ರಾ. ವ. ೧೩ ಯಿಂದ ಭಾದ್ರಪದ ವದ್ಯ ೧೨ ಯ ವರೆಗೆ ಅಂದರೆ ೨೯ ದಿವಸ ಮುದ್ದತಿಗೆ ೫೨೦ ರೂಪಾಯಿಗಳಿಗೆ (೫೨೦×೨೯/೩೦=) ೫೦೨ ೨/೩ ಜಮೆಯ ಕಚ್ಚೆಗಳಾದವು. ಭಾ. ವ. ೧೨ ಗೆ (೫೨೦-೧೨೦=) ೪೦೦ ರೂ. ಜಮೆಯ ಬಾಕಿಯಾಯಿತು. ಭಾ. ವ. ೧೨ ಯಿಂದ ಆ. ವ. ೩೦ ಯ ವರೆಗೆ ಅಂದರೆ ೧/೩ ತಿ. ಮುದ್ದತಿಗೆ ೪೦೦ ರೂಪಾಯಿಗಳಿಗೆ (೪೦೦×೩೩/೩೦=) ೪೪೦ ಜಮೆಯ ಕಚ್ಚೆಗಳಾದವು. ಇದನ್ನು ಖಾತೆಯಲ್ಲಿ ಬರೆಯುವ ಕ್ರಮವನ್ನು ಕೆಳಗೆ ತೋರಿಸಿದೆ.

ಮೊದಲಿಗೆ ಹಿಂದೆ ಹೇಳಿದಂತೆ ಬರೆಯಬೇಕು.

ಜಮೆ	ಕಚ್ಚೆ	ಖರ್ಚು	ಕಚ್ಚೆ
೩೯ ರೂ.	೯೦ ಮು. ೧೩ ದಿ.	೩೭೫ ರೂ.	೪೫೦ ಮು. ೨೫ ದಿ
೩೭೬ ರೂ.	೪೭೦ ಮು. ೨೪ ದಿ.	೬೯೧½ ರೂ.	೬೧೨ ಮು. ೧ ತಿ ೪ ದಿ.
೫೫೦½ ರೂ.	೧೨೭೦ ಮು. ೧೩ ದಿ.	೨೪೧¾ ರೂ.	೨೫೦ ಮು. ೨೯ ದಿ.
೫೦೨¾ ರೂ,	೫೨೦ ಮು. ೨೯ ದಿ.	೬೦೦ ಕಚ್ಚೆಗಳು ೩ ರೂ. ಬಡ್ಡಿ ಕೊಡತಕ್ಕದ್ದು	
೪೪೦ ರೂ,	೪೦೦ ಮು. ೧ ತಿ. ೩ ದಿ.		
೧೯೦೮		೧೯೦-	

$$ಬಡ್ಡಿ = \frac{೬೦೦ \times \frac{೧}{೨}\ ರೂ.}{೧೦೦} = ೩\ ರೂ.$$

೬. ಬಡ್ಡಿಯ ಖಾತೆ:—(೧) ಸಾಧಾರಣವಾಗಿ ಸಾವುಕಾರರು ಗಿರಾಕಿಯು ಲೆಕ್ಕ ತೀರಿಸಲಿಕ್ಕೆ ಬಂದಾಗ್ಗೆ ಬಡ್ಡಿಯ ಲೆಕ್ಕವನ್ನು ಮಾಡುವರು. **ಸಾವುಕಾರನಲ್ಲಿ:**—ಸಾಲಗಾರನ ಖಾತೆಗೆ ಅಸಲನ್ನೂ ಬಡ್ಡಿಯ ಖಾತೆಗೆ ಬಡ್ಡಿಯನ್ನೂ ಜಮೆ ಮಾಡಬೇಕು. ಗೊತ್ತು ಮಾಡಿದ ಬಡ್ಡಿಯ ದರದ ಪ್ರಕಾರ ಆಕಾರ ಮಾಡಿದ ಬಡ್ಡಿಯಲ್ಲಿ ಸಾವುಕಾರನು ಬಿಟ್ಟ ಹಣಕ್ಕೆ **ಸೂಟ** ಅನ್ನುವರು. ಸೂಟ ಬಿಟ್ಟಿದ್ದರೆ, ಅಷ್ಟು ರಕಮನ್ನು ಸೂಟ ಖಾತೆಗೆ ಖರ್ಚು ಬರೆಯಬೇಕು. ಮತ್ತು ಸಾಲಗಾರನ ಖಾತೆಗೆ ಜಮೆ ಮಾಡಬೇಕು. **ಸಾಲಗಾರನಲ್ಲಿ:**— ಸಾವುಕಾರನ ಖಾತೆಗೂ ಬಡ್ಡಿಯ ಖಾತೆಗೂ ಅವೇ ರಕಮುಗಳನ್ನು ಖರ್ಚು ಬರೆಯಬೇಕು. ಸೂಟ ಬಂದಷ್ಟು ರಕಮನ್ನು ಸೂಟ ಖಾತೆಗೆ ಜಮೆ ಬರೆಯಬೇಕು. (೨) ಆದರೆ ಕೆಲವರು ಪ್ರತಿವರ್ಷ ಆಢಾವೆಯ ಕಾಲಕ್ಕೆ ಬಡ್ಡಿಯ ಲೆಕ್ಕವನ್ನು ಮಾಡಿ ಬಂದ ಬಡ್ಡಿಯನ್ನು ಬಡ್ಡಿಯ ಖಾತೆಗೆ ಜಮೆ, ಕೊಟ್ಟ ಬಡ್ಡಿಯನ್ನು ಬಡ್ಡಿಯ ಖಾತೆಗೆ ಖರ್ಚು ಬರೆಯುವರು. ಇದರಂತೆ ಕೊಡತಕ್ಕ ಬಡ್ಡಿಯನ್ನು ಬಡ್ಡಿಯ ಖಾತೆಗೆ ಖರ್ಚು ಮತ್ತು ಕೊಡತಕ್ಕ ಬಡ್ಡಿಯ ಖಾತೆಗೆ ಜಮೆ ಹಿಡಿಯಬೇಕು ಸೂಟ ಬಿಡುವದೂ ಬಿಡಿಸಿಕೊಳ್ಳುವದೂ ಇರುವದರಿಂದ ಕೆಲವು ರಕಮನ್ನು ಕಾದಿಡಬೇಕಾಗುವದು. (ವರ್ಷ ತುಂಬಿದ ಕೂಡಲೆ ಕೆಲವರು ಪ್ರತಿಯೊಬ್ಬ ಸಾಲಗಾರನಿಂದ ಬರತಕ್ಕ ಬಡ್ಡಿಯನ್ನು ಅವನ ಖಾತೆಗೆ ಖರ್ಚು ಬಡ್ಡಿಯ ಖಾತೆಗೆ ಜಮೆ ಮಾಡುವರು. ಆಢಾವೆಯ ಕಾಲಕ್ಕೆ ಬಡ್ಡಿಯು

ಬಂದರೆ, ಇದೇ ಖಾತೆಗೆ ಜಮೆ ಮಾಡುವರು. ಇಲ್ಲದಿದ್ದರೆ, ಸಾಲಗಾರನ ಮುಂದಿನ ವರ್ಷದ ಬಾಕಿಯು ಅಸಲು ಬಡ್ಡಿಗಳ ಬೇರೀಜಿಗೆ ಸರಿಯಾಗುವದು. ಹೀಗೆ ಜಮಾಖರ್ಚು ಮಾಡುವದರಿಂದ ಚಕ್ರಬಡ್ಡಿಯ ಆಕಾರ ಮಾಡಿದಂತಾಗುವದು (ಆದುದರಿಂದ ಮೇಲಿನಂತೆ ಜಮಾಖರ್ಚು ಬರೆಯಬೇಕು.) ಬಡ್ಡಿಯು ವಸೂಲಾಗುವದು ನಿಶ್ಚಯವಿದ್ದರೆ, ೨ನೆಯ ರೀತಿಯಿಂದ ಜಮಾಖರ್ಚು ಮಾಡುವರು.

ಉದಾ:— ಸೇವ್ಹಿಂಗ್ಸ ಬ್ಯಾಂಕ, ಠೇವಿನ ಪತ್ರ ಇತ್ಯಾದಿ.

ಬಡ್ಡಿಯು ವಸೂಲಾಗುವದು ಸಂಶಯವಿದ್ದರೆ ೧ನೆಯ ರೀತಿಯಿಂದ ಜಮಾಖರ್ಚು ಮಾಡುವರು.

ಉದಾ:— ಸಾಲಗಾರನ ಬಡ್ಡಿ

ಬಡ್ಡಿ ಗಂಟು ಬಂದ ಕೂಡಲೆ ಅದನ್ನು ಸಾಲಗಾರನ ಖಾತೆಗೆ ಜಮೆ ಮಾಡಿ, ಬಡ್ಡಿಯ ರಕಮನ್ನು ಅವನ ಖಾತೆಗೆ ಖರ್ಚು, ಬಡ್ಡಿಯ ಖಾತೆಗೆ ಜಮೆ ಮಾಡುವರು. ಇದರಿಂದ ಸಾಲಗಾರನಿಂದ ಬಡ್ಡಿ ವಸೂಲಾದದ್ದು ತಿಳಿಯುವದು.

೭. ಪ್ರಶ್ನೆಗಳು.

೧ ಸಾವುಕಾರಿಕೆಯ ಮುಖ್ಯ ಭಾಗಗಳು ಯಾವವು? ಸಾಲಗಳಲ್ಲಿ ಎಷ್ಟು ಪ್ರಕಾರಗಳು?

೨ ಜಂಗಮ ಮಾಲನ್ನು ಒತ್ತೆ ಇಟ್ಟುಕೊಂಡವರು ಜಮಾಖರ್ಚನ್ನು ಹೇಗೆ **ಮಾಡುವರು?**

೩ ತೋರಒತ್ತೆ, ಕಬ್ಜಾಒತ್ತೆ, ಇಳಿಒತ್ತೆ ಇವುಗಳ ಜಮಾಖರ್ಚನ್ನು ಹೇಗೆ ಮಾಡುವರು?

೪ ಇಡಗಂಟು ಅಂದರೇನು? ಅದರ ಜಮಾಖರ್ಚನ್ನು ಹೇಗೆ ಮಾಡಬೇಕು?

೫ ಭಲಾವಣಿ ಪತ್ರ ಅಂದರೇನು? ಅದರ ಜಮಾಖರ್ಚನ್ನು ಹೇಗೆ ಮಾಡಬೇಕು?

೬ ಭಲಾವಣಿ ಪತ್ರ ಮತ್ತು ಹುಂಡಿ ಇವುಗಳಲ್ಲಿ ಭೇದವೇನು?

೭ ಬಡ್ಡಿಯ ಆಕಾರ ಮಾಡುವ ರೀತಿಗಳು ಯಾವವು? ಉದಾಹರಣೆಗಳಿಂದ ಎರಡೂ ರೀತಿಗಳನ್ನು ಸ್ಪಷ್ಟೀಕರಿಸಿರಿ.

೮ ಬಡ್ಡಿಯ ಜಮಾಖರ್ಚನ್ನು ಹೇಗೆ ಮಾಡಬೇಕು? ಬರತಕ್ಕ ಮತ್ತು ಕೊಡತಕ್ಕ ಬಡ್ಡಿಯ ಜಮಾಖರ್ಚನ್ನು ಹೇಗೆ ಮಾಡಬೇಕು?

೫ನೆಯ ಪ್ರಕರಣ

ಒಂದು ತಿಂಗಳ ಜಮಾಖರ್ಚು

೧. ಉದಾಹರಣೆ. ೨. ಕೀರ್ದಿ ೩. ಖತಾವಣಿ (ಅ) ಬಾಕಿಗಳ ತಾಳೆ; (ಬ) ಖ. ವಿ. ಖಾತೆ; ಲಾ. ಹಾ. ಖಾತೆ; (ಕ) ಅಢಾವೆ. ೪. ತೋಂಡ ಮಿಳವಣಿ ೫. ಜೀನಸಿನ ಯಾದಿ ೬. ದಲಾಲಿ ಯಾದಿ. ೭. ಅಂಗಡಿ ಸಾಮಾನಿನ ಯಾದಿ.

೧. ಹಿಂದಿನ ಪ್ರಕರಣಗಳಲ್ಲಿ ವಿವರಿಸಿದ ತತ್ವಗಳನ್ನು ಉದಾಹರಿಸಬೇಕೆಂದು ಒಬ್ಬ ವ್ಯಾಪಾರಸ್ಥನ ಒಂದು ತಿಂಗಳ ವ್ಯವಹಾರಗಳನ್ನು ಕೀರ್ದಿ, ಖತಾವಣಿಗಳಲ್ಲಿ ಬರೆದು ತೋಂಡ ಮಿಳವಣಿಯನ್ನು ಮಾಡಿ ಖರೀದಿ ವಿಕ್ರಿಖಾತೆ, ಲಾಭಹಾನಿ, ಆಢಾವೆಗಳನ್ನು ತೆಗೆದದೆ

ಉದಾ:— ಸಂಗಪ್ಪ ಅಂಗಡಿ, ಜವಳೀಪೇಟೆ, ಧಾರವಾಡ ಇವರ ಅರಿವೆಯ ಅಂಗಡಿಯ ಜನೇವರಿ ೧೯೪೫ನೆಯ ಇಸವಿಯ ಜಮಾಖರ್ಚು ಬರೆಯಿರಿ. ಬೈಠೀ ಕಿರ್ದಿಯಂತೆ ಶಿಲಕು ತೆಗೆಯಬೇಕು.

ಆರಂಭದ ಸ್ಥಿತಿ.

ರೋಖು ೪೩೫ ರೂ.; ಬ್ಯಾಂಕಿನಲ್ಲಿ ೭೦೦ ರೂ.; ೧೫ ರೂ. ಕಾರಕೂನನ ಕಡೆಗೆ ಚಿಲ್ಲರ ಖರ್ಚಿಗಾಗಿ ಕೊಟ್ಟದ್ದು; ಅಂಗಡಿಯ ಸಾಮಾನು ೧೫೦ ರೂ.; ಅಂಗಡಿಮನೆ ೧೫೦೦ ರೂ; ರಂಗಪ್ಪ ನಾಯಿಕ ಬೆಳಗಾಂವ ಇವರ ಶಾಖಲೆಯಿಂದ ಗದಗಿನ ಸಂಗಪ್ಪನ ಮೇಲೆ ಬರೆದ ದರ್ಶನೀ ಹುಂಡಿ ಖರೀದಿ ೪೫೦ ರೂ.; ಮುಂಗಡ ಬಾಡಿಗೆ ಕೊಟ್ಟಿದ್ದು ೫೦ ರೂ.

ಬಾಳಪ್ಪ ದೇಸಾಯಿ ಇವರಿಂದ ೫೨ ರೂ.; ಜವಳೀ ಫಕೀರಪ್ಪನಿಂದ ೧೫೨ ರೂ; ಭೋಗಾರ ಮಾಕಪ್ಪನಿಂದ ೧೦ ರೂ. ಬರತಕ್ಕದ್ದು.

ಆತ್ಮಾರಾಮ ಫಡಕೆ ಇವರ ಶಾಖಲೆಯಿಂದ ಹರಗೋಲಾಲ ಮಾರವಾಡಿ ಇವರ ಮೇಲೆ ಬರೆದ ನಾಮಜೋಗ ದರ್ಶನಿ ಹುಂಡಿ ವಿಕ್ರಿ ೨೧೨ ರೂ.; ಭೀಮರಾವ ಗದಗ ಇವರಿಂದ ೪೦೦ ರೂ. ೧೦೦ಕ್ಕೆ ೧ ವರ್ಷಕ್ಕೆ ೧೨ ರೂ. ಪ್ರಕಾರ ಸಾಲ ತಂದದ್ದು. ವಾಣೀ ಬಸಪ್ಪನಿಗೆ ೨೫೦ ರೂ.; ಬಳೆಗಾರ ಕಾಳಪ್ಪನಿಗೆ ೧೪೦ ರೂ.; ಸೂಡಿ ಶಾಂತಪ್ಪನಿಗೆ ೧೧೨ ರೂ.; ಮ್ಯುನಸಿಪಾಲ್ಟಿಗೆ, ಅಂಗಡಿ ಮತ್ತು ನಳಪಟ್ಟಿ ೬೨ ರೂ. ಕೊಡತಕ್ಕದ್ದು.

ಶಿಲಕು ಮಾಲು:-ಇಳಕಲ್ ಶೀರೆ ೧೦ ದರ ೨೫ ಪ್ರ, ಗದಗಿನ ಶೀರೆ ೫ ದರ ೧೫ ರೂ. ಪ್ರ. ಗುಳೇದಗುಡ್ಡದ ಖಣ ೧೦, ದರ ೩॥ ರೂ. ಪ್ರ. ಬೆಂಗಳೂರಿನ ಖಣ ೧೭ ದರ ೫ ರೂ. ಪ್ರಕಾರ.

ತಾ. ೨—೧—೪೫ ರಿಂದ ತಾ. ೧೦—೧—೪೫ ರ ವರೆಗೆ ಆದ ವ್ಯವಹಾರಗಳು.

ತಾ. ೨ ೨ ರೂ. ಯ ಕಾರ್ಡ ಟಿಕೇಟು ತರಿಸಿತು.

ವಾಣೀ ಬಸಪ್ಪನಲ್ಲಿ ಕೆಳಗಿನ ಮಾಲು ಉದ್ಧರೀ ಖರೀದಿ ಮಾಡಿತು.

೨೦೦ ರೂ. ನಾಗಪುರ ಉಡುವ ಧೋತರ ಜೋಡು ೧೦, ದರ ೨೦ ರೂ. ಪ್ರ. ೫೦ ರೂ ಹೊರುವ ಧೋತರ ಜೋಡು ೫, ದರ ೧೦ ರೂ. ಪ್ರಕಾರ.

ಅಂಗಡಿಯ ಉಪಯೋಗಕ್ಕಾಗಿ ೧ ರೂ. ಯ ಚಿಮಣೀ ಎಣ್ಣೆಯನ್ನು ತರಿಸಿತು.

ತಾ. ೩ ೯೦ ರೂ. ಗೋವಿಂದ ಶೇಟಜಿಯವರು ಮನಿಯಾರ್ಡರಿನಿಂದ ಕಳಿಸಿದರು. ವ್ಯವಸ್ಥೆಯ ಬಗ್ಗೆ ತಿಳಿಸಿಲ್ಲ.

ತಾ. ೫ ಬಾಳಪ್ಪ ದೇಸಾಯಿಯು ೪೫ ರೂ. ಕೊಟ್ಟು ೫ ರೂ. ಸೂಟ ಬಿಡಿಸಿಕೊಂಡನು.

ತಾ. ೬ ಒಂದು ಜರದ ಮುಡಿ ಕಳಿಸಿರೆಂದು ನಾರಾಯಣರಾವ ಸತ್ತಿ ಇವರು ೧೨೦ ರೂ. ಕಳಿಸಿದರು.

ತಾ. ೭ ೨೧೦ ರೂ. ಗೆ ವಿಕ್ರೀ ಮಾಡಿದ ಹುಂಡಿಯ ಖೋಕೆ ಹರಗೋಲಾಲನಿಂದ ಬಂತು.

ತಾ. ೮ ಭೀಮರಾವ ಗದಗ ಇವರಿಂದ ೧೦೦ಕ್ಕೆ ೫ರಂತೆ ದಲಾಲಿ ಗೊತ್ತುಮಾಡಿಕೊಂಡು ಕೆಳಗಿನ ಮಾಲು ತರಿಸಿತು.

೩೦೦ ರೂ. ರಾಮಕೃಷ್ಣ ಮಿಲ್ಲಿನ ಧೋತರ ಜೋಡು ೭೫, ದರ ೪ ರೂ. ಪ್ರ.
೪೦೦ ರೂ. ಪೈರಣದ ಅರಿವೆ ತಾಗೆ ೪೦ ದರ ೧೦ ರೂ. ಪ್ರಕಾರ.
೩೦೦ ರೂ. ನೀಲಿ ಸರ್ಜ ವಾರ ೩೦, ದರ ೧೦ ರೂ. ಪ್ರಕಾರ.

ಚಿಲ್ಲರ ಖರ್ಚಿನ ವಿವರ:—

ರೇಲವೆ ಬಾಡಿಗೆ	೩೦ ರೂ.
ಚಕ್ಕಡಿ ಬಾಡಿಗೆ	೩ ರೂ.
ಹಮಾಲಿ	೨ ರೂ.
ಜಕಾತಿ	೬೫ ರೂ.
	೧೦೦ ಅಂತು.

ತಾ. ೯ ಬಾಳಪ್ಪ ದೇಸಾಯಿ ಇವರಿಗೆ ಉದ್ರಿ ಮಾರಿದ ಮಾಲಿನ ವಿವರ.—
೩೬ ರೂ. ಗದುಗಿನ ಶೀರೆ ೨, ದರ ೧೮ ರೂ. ಪ್ರಕಾರ.
೫೦ ರೂ. ಉಡುವ ನಾಗಪುರ ಧೋತರ ಜೋಡು ೨ ದರ ೨೫ ರೂ ಪ್ರ.

೨೪ ರೂ. ಹೊರುವ ನಾಗಪುರ ಧೋತರ ಜೋಡು ೨, ದರ ೧೨ ರೂ. ಪ್ರ.
೧೫ ರೂ. ಗುಳೇದಗುಡ್ಡದ ಖಣ ೫, ದರ ೩ ರೂ. ಪ್ರಕಾರ.
೧೨ ರೂ. ಪೈರಣ ಅರಿವೆಯ ತಾಗೆ ೧, ದರ ೧೨ ರೂ. ಪ್ರಕಾರ.

೧೩೭

೧೦೦ ರೂ. ರೋಖು ಕೊಟ್ಟನು.

ಗೋವಿಂದ ಶೇಟಜಿಯ ಪತ್ರದ ಪ್ರಕಾರ ೯೦ ರೂ. ಯ ಯಾಲಕ್ಕಿ ಕಳಿಸಿದನು.

ತಾ. ೧೦ ಭೀಮರಾವ ಗದಗ ಇವರ ಪತ್ರದ ಪ್ರಕಾರ ಮಾಲು ಕಳಿಸಿದ ವಿವರ:—

೧೪೦ ರೂ. ಇಳಕಲ್ ಶೀರೆ ೫, ದರ ೨೮ ರೂ. ಪ್ರಕಾರ.
೧೫ ರೂ. ಗುಳೆದಗುಡ್ಡದ ಖಣ ೫, ದರ ೩ ರೂ. ಪ್ರಕಾರ.
೯೫ ರೂ. ಯಾಲಕ್ಕಿ ಮಣ ೧, ದರ ೯೫ ರೂ. ಪ್ರ. (ರೋಖು ಕೊಂಡು)
ಕಳಿಸಿದನು. ಯಾಲಕ್ಕಿ ಕೊಂಡದ್ದರಿಂದ ೨ ರೂ. ದಲಾಲಿ ಸಿಕ್ಕಿತು.

೧೦೦ ರೂ. ಜವಳೀ ಫಕೀರಪ್ಪನು ೫ ತೊಲಿಯ ಬಂಗಾರ ಬಳಿ ಜೋಡನ್ನು ಒತ್ತೆ ಇಟ್ಟು ದರ ತಿಂಗಳಿಗೆ ಒಂದು ರೂಪಾಯಿಗೆ ೨ ಪೈ ಪ್ರಕಾರ ಬಡ್ಡಿ ಗೊತ್ತು ಮಾಡಿಕೊಂಡು ಸಾಲಾ ಒಯ್ದನು.

೧೫೦ ರೂ. ಬೋಗಾರ ವಾಸಪ್ಪನಿಂದ ಕಾರಣ ಗೊತ್ತಾಗದೆ ಬಂದವು.

ತಾ. ೧೧—೧—೪೫ ರಿಂದ ತಾ. ೨೧—೧—೪೫ ರ ವರೆಗೆ ಆದ ವ್ಯವಹಾರಗಳು.

ತಾ. ೧೧ ೨೦ ರೂ. ರಾಮಕೃಷ್ಣ ಮಿಲ್ಲಿನ ಧೋತರ ಜೋಡು ೪, ದರ ೫ ರೂ. ಪ್ರ.
೬೦ ರೂ. ಪೈರಣದ ಅರಿವೆ ತಾಗೆ ೫ ದರ ೧೨ ರೂ. ಪ್ರಕಾರ.
೧೩೦ ರೂ. ನೀಲಿ ಸರ್ಜ ವಾರ ೧೦ ದರ ೧೩ ರೂ. ಪ್ರಕಾರ.
೧೮ ರೂ. ಬೆಂಗಳೂರ ಖಣ ೩ ದರ ೬ ರೂ. ಪ್ರ. ರೋಖು ಮಾರಲ್ಪಟ್ಟವು.

ತಾ. ೧೨ ಬ್ಯಾಂಕಿನಿಂದ ೭೦ ರೂ. ತರಿಸಿ ಮನೆಯ ಖರ್ಚಿಗಾಗಿ ಕೊಟ್ಟನು.

ನಾರಾಯಣರಾವ ಸತ್ತಿ ಇವರಿಗೆ ವಾಣೀ ಬಸಪ್ಪನ ದೆಶೆಯಿಂದ ೫೦ ರೂ. ಕೊಡಲಿಕ್ಕೆ ಒಪ್ಪಿದನು.

ತಾ. ೧೪ ಒಡ್ಡರ ತಿಮ್ಮಣ್ಣನಿಗೆ ಬಾವಿ ಕಡಿಯುವದಕ್ಕಾಗಿ ೧೨೦ ರೂ. ರೋಖು ಕೊಟ್ಟನು.

ತಾ. ೧೭ ಬ್ಯಾಂಕಿಗೆ ೫೦ ರೂ. ಕಳಿಸಿದನು. ನಾರಾಯಣರಾವ ಸತ್ತಿ ಇವರಿಗೆ ೧೫೦ ರೂ. ಯ ಜರದ ಮಡಿ ಕೊಂಡು ೧೦ ರೂ. ಪೋಷ್ಟ ಖರ್ಚು ಮಾಡಿ ಕಳಿಸಿದನು.

ತಾ. ೧೮ ಬಳೆಗಾರ ಕಾಳಪ್ಪನು ೧೬೦ ರೂ. ಹೆಚ್ಚು ಕೊಟ್ಟು ೧೦೦ಕ್ಕೆ ವರ್ಷಕ್ಕೆ ೬ ರೂ. ಪ್ರಕಾರ ಬಡ್ಡೀ ಕರಾರ ಮಾಡಿ ೩೦೦ ರೂ. ಠೇವು ಇಟ್ಟನು.

ಎಲೆಗಾರ ಹುಸೇನಿಯ ಕೈಯಲ್ಲಿ ೧೫೦ ರೂ. ಕೊಟ್ಟು (ಮನೆಯ ಸಲುವಾಗಿ) ಭತ್ತದ ಖರೀದಿಗೆ ಹುಲಕೊಪ್ಪಕ್ಕೆ ಕಳಿಸಿದನು.

೧ ರೂ. ಯ ಚಿಮಣಿ ಎಣ್ಣೆಯನ್ನು ತರಿಸಿದನು.

ತಾ. ೧೯ ವಾಸಪ್ಪ ಜೋಗಾರ ಇವರ ಶಾಖೆಯಿಂದ ಹರಗೋಲಾಲ ಶೇಟಜಿಯು ಕಳಿಸಿದ ೨೦೦ ರೂ. ೩ ತಿಂಗಳ ಮುದ್ದತಿ ಶಹಾಜೋಗ ಹುಂಡಿಯನ್ನು ಸ್ವೀಕರಿಸಿದನು.

೧೫ ರೂ. ರಾಮಕೃಷ್ಣ ಮಿಲ್ಲಿನ ಧೋತರ ಜೋಡು ೩ ದರ ೫ ರೂ. ಪ್ರಕಾರ ರೋಖು ಮಾರಲ್ಪಟ್ಟವು.

೬೦ ರೂ. ಕೊಟ್ಟು ಬಂದು ಬೆನಕಟ್ಟಿ ಬಸಪ್ಪನ ಎಮ್ಮೆಯನ್ನು ಕೊಂಡನು.

ತಾ. ೨೦ ಮುಂಬಯಿಯಿಂದ ಬಂದ ೪೦೦೦ ರೂ. ಜವಳೀ ೧೦೦ಕ್ಕೆ ೩ ರಂತೆ ಲಾಭ ತಕ್ಕೊಂಡು ಮಾರಿದನು.

೫೬೦ ರೂ. ರೋಖು ಕೊಟ್ಟು ೭ ವಾರ ಬಾಂಡು ೮೦ ದರದ ಪ್ರಕಾರ ಕೊಂಡನು.

೧೫೦ ರೂ. ಜವಳೀ ಫಕೀರಪ್ಪನ ಹೆಸರಲೆ ಜಮಾ ಹಿಡಿಯಬೇಕೆಂದು ಜೋಗಾರ ವಾಸಪ್ಪನು ತಿಳಿಸಿದನು.

ಸೂಡಿ ಸಂಗಪ್ಪನು ೨೦೦ ರೂ. ಕಳಿಸಿದನು, ಕಾರಣ ತಿಳಿಸಲಿಲ್ಲ.

ತಾ. ೨೧ ಜವಳೀ ಫಕೀರಪ್ಪನಿಗೆ ಸಂಜಾಯುತ ಕರಾರಿನಿಂದ ಮಾರಿದ ಮಾಲಿನ ವಿವರ:—

೧೦೦ ರೂ. ರಾಮಕೃಷ್ಣ ಮಿಲ್ಲಿನ ಧೋತರ ಜೋಡು ೨೦ ದರ ೫ ರೂ. ಪ್ರಕಾರ.

೨೪೦ ರೂ. ಪೈರಣದ ಅರಿವೆ ತಾಗೆ ೨೦ ದರ ೧೨ ರೂ. ಪ್ರಕಾರ.

ತಾ. ೨೨—೧—೪೫ ರಿಂದ ತಾ. ೩೧—೩—೪೫ ರ ವರೆಗೆ ಆದ ವ್ಯವಹಾರಗಳು.

ತಾ. ೨೨ ಭತ್ತ ತರಲಿಕ್ಕೆ ಹೋದ ಎಲಿಗಾರ ಹುಸೇನಿಯು ೨೦ ರೂ. ಪ್ರಕಾರ ೫ ಹೇರು ಭತ್ತ, ೩೦ ರೂ. ರೋಖು. ೧೦ ರೂ. ಹೊಟ್ಟೆ ಖರ್ಚು ಮಾಡಿಕೊಂಡು ೧೦ ರೂ. ಬಾಡಿಗೆ ಕೊಟ್ಟು ತಂದು ಮುಟ್ಟಿಸಿದನು.

ವಾರ ಬಾಂಡು ೭ ದರ ೯೫ ರೂ. ಭಾವದ ಪ್ರಕಾರ ಮಾರಿದವು.

೪ ರೂ. ಸೂಟ ಬಿಡಿಸಿಕೊಂಡು ೨೦೦ ರೂ. ಹುಂಡಿ ಜೋಗಾರ ವಾಸಪ್ಪ ಇವರಿಂದ ರಕಮು ಕೊಟ್ಟು ತಂದನು.

ತಾ. ೨೩ ಮುದ್ದತ ತುಂಬುವದರೊಳಗಾಗಿ ೨೦೦ ರೂ. ಚೆಕ್ ಕೊಟ್ಟು ೧೦ ರೂ. ಬಿಡಿಸಿಕೊಂಡು ಉಳಿದ ರಕಮಿಗೆ ದರ್ಶನಿ ಪ್ರಾಮಿಸರಿ ನೋಟು ಬರಕೊಟ್ಟು ೪೫೦ ರೂ. ಗಳ ಹುಂಡಿಯನ್ನು ರಂಗಪ್ಪ ನಾಯಿಕರು ಪರತ ತೆಗೆದುಕೊಂಡರು.

ತಾ. ೨೪ ಕಾಳೆ ಇವರು ವಾಣೀ ಬಸಪ್ಪನಿಗೆ ಕೊಡತಕ್ಕ ೧೮೦ ರೂ. ಗಳನ್ನು (ಮುಟ್ಟಿಸುವದಕ್ಕಾಗಿ) ನಮ್ಮಲ್ಲಿ ಜಮೆ ಮಾಡಿದರು.

ತಾ. ೨೫ ಭೀಮರಾವ ಗಡೆಗೆ ಇವರು ಇಟ್ಟ ಜವಳಿಯಲ್ಲಿ ರಾಮಕೃಷ್ಣ ಮಿಲ್ಲಿನ ಧೋತರ ಜೋಡು ೪೦ ದರ ೪ ರಂತೆ. ಪ್ಯೈರಣದ ಅರಿವೆ ತಾಗೆ ೧೦ ದರ ೧೦ ರಂತೆ ಕೋಟಿಗೆ ಅರಿವೆ ನೀರಿ ಸರ್ಜ ವಾರ ೨೦ ದರ ೧೩ ರೂ. ಪ್ರಕಾರ, ರೋಖು ಮಾರಿದನು. ೪೦೦ ರೂ. ಅವರಿಗೆ ಮನಿಯಾರ್ಡರ ಮಾಡಿದನು. ಕಮಿಶನ್ ೪ ರೂ

ತಾ. ೨೬ ಬಸಪ್ಪ ವಾಣಿ ಇವರಿಗೆ ೩೦೦ ರೂ. ಕೊಟ್ಟು ೧೫ ರೂ. ಸೂಟು ಬಿಡಿಸಿಕೊಂಡನು.

ಇಳಕಲ್ ಶೇರಿ ೧೫ ದರ ೨೧ ರೂ. ಪ್ರಕಾರ, ಗದಗಿನ ಶೇರಿ ೨೫ ದರ ೧೭ ರೂ. ಪ್ರಕಾರ. ಗುಳೇದಗುಡ್ಡದ ಖಣ ೫೦ ದರ ೨ ರೂ. ಪ್ರಕಾರ, ಬೋಗಾರ ವಾಸಪ್ಪನಲ್ಲಿ ಉದ್ದರಿ ಕೊಂಡನು.

ತಾ. ೨೭ ವಾಣೀ ಬಸಪ್ಪನ ದೆಸೆಯಿಂದ ನಾರಾಯಣರಾವ ಸತ್ತಿ ಇವರಿಗೆ ೫೦ ರೂ. ಕೊಟ್ಟನು.

೯೦ ರೂ. ಮ್ಯುನಿಸಿಪಾಲಿಟಿ ಪಟ್ಟಿ ಕೊಟ್ಟನು.

೦ ರೂ. ಹಾಳೆ ತರಿಸಿದನು.

ಬಸವಂತಪ್ಪ ಸತ್ತಿ ಧಾರವಾಡ ಇವರ ದಾಖಲೆಯಿಂದ ರಂಗಪ್ಪ ನಾಯಿಕ ಬೆಳಗಾವಿ ಇವರ ಮೇಲೆ ೪೦೦ ರೂ. ಗಳ ನಾಮಜೋಗ-ದರ್ಶನಿ ಹುಂಡಿ ಕಳಿಸಿದನು.

ಹುಂಡಾವಳಿ ೧೦೦ಕ್ಕೆ ೦।೪ ಯಂತೆ ೧ ರೂ. ಸಿಕ್ಕಿತು.

ತಾ. ೨೮ ತನ್ನ ಆಯುಷ್ಯ ವಿಮೆಯ ಕಂತ ೪೮ ರೂ. ಚಕ್ಕಿನಿಂದ ಮುಟ್ಟಿಸಿದನು.

ವಾಣೀ ಬಸಪ್ಪನಲ್ಲಿ ಕೊಂಡ ಜವಳಿಯನ್ನು ೧೦೦ಕ್ಕೆ ೫ ರಂತೆ ಲಾಭ ತಕ್ಕೊಂಡು ಮಾರಿದನು.

ತಾ. ೨೯ ಗದಗಿನ ಶೇರಿ ೩ ದರ ೧೮ ರಂತೆ. ಬೆಂಗಳೂರ ಖಣ ೬, ದರ ೬ ರಂತೆ, ಇಳಕಲ್ ಶೇರಿ ೨ ದರ ೩೦ ರಂತೆ ರೋಖು ಮಾರಿದನು.

೩ ರೂ. ಕಾರ್ಡು ಟಿಕೀಟು ತರಿಸಿತು. ೭೫ ರೂ. ಹಳೆಯ ತಿಜೋರಿ ಕೊಂಡನು.

ರಾಮಕೃಷ್ಣ ಮಿಲ್ಲಿನ ಧೋತರ ಜೋಡು ೪ ದರ ೫ ರೂ. ಪ್ರಕಾರ ಮಾರಿದನು.

ತಾ. ೩೦ ರಂಗಪ್ಪ ನಾಯಿಕರ ಮೇಲೆ ಬರೆದ ೪೦೦ ರೂ. ಯ ನಾಮಜೋಗ-ದರ್ಶನಿ ಹುಂಡಿಯು ಸ್ವೀಕಾರ ಸಾಕಾರ ಆದ್ದರಿಂದ ೪೦೦ ರೂ. ಹಾಗೂ ಸಕ್ರಾಯಿ ನಕ್ರಾಯಿ ೫ ರೂ. ಕೊಟ್ಟನು.

ಬಾವೀ ಕಡಿಯುವದಕ್ಕಾಗಿ ಒಡ್ಡರ ರಾಮನಿಗೆ ಕೊಟ್ಟ ರೂ. ಗಳಲ್ಲಿ ೧೮೦ ರೂ. ಖರ್ಚು ಮಾಡಿ ೨೦ ರೂ. ಗಳನ್ನು ಉಳಿದ ಕೆಲಸಕ್ಕಾಗಿ ಇಟ್ಟುಕೊಂಡನು.

ತಾ. ೩೧—೧—೪೫ ನೇ ದಿವಸ ಆದ ವ್ಯವಹಾರಗಳು.

ತಾ. ೩೧ ಬ್ಯಾಂಕಿನಿಂದ ೬೦ ರೂ. ತರಿಸಿದನು. ಭೀಮರಾವ ಗದಗ ಇವರ ಶಾಲಿನ ಮೇಲೆ ಬಂದ ದಲಾಲಿ ೫೫ ರೂ.

೩೦ ರೂ. ಮುಂಗಡ ಬಾಡಿಗೆ ಕೊಟ್ಟದ್ದು ೩೧ ನೇ ತಾರೀಖಿಗೆ ಮುಗಿಯಿತು.

೪೦೦ ರೂ. ಸಾಲದ ಮೇಲೆ ಒಂದು ತಿಂಗಳ ಬಡ್ಡಿ ೪ ರೂ. ಕೊಡಬೇಕು.

೨೩೧೦ ರೂ. ಭಾಂಡವಲಿನ ಮೇಲೆ ಬಡ್ಡೀ ಆಕಾರ ಮಾಡಬೇಕು; ದರ ೧೦೦ಕ್ಕೆ ೧ ತಿಂಗಳಿಗೆ ೧ ರಂತೆ ೨೩ ರೂ.

ಚಿಲ್ಲರ ಕೊಡತಕ್ಕ ವಿವರ:—

೬—೦—೦	ಜಯಕರ್ನಾಟಕದ ಚಂದಾಹಣ.
೧೦—೦—೦	ಅಂಗಡಿ ಸಿಪಾಯಿಯ ಪಗಾರ.
೪—೦—೦	ಅಂಗಡಿ ಉಡುಗಿಸುವದಕ್ಕೆ.
೪೪—೦—೦	ವಿಮೆ ಕಂತ.
೬೪—೦—೦	

ಶ್ರೀ

ಖಾಸಗತ ರಾಜಶ್ರೀ ಸಂಗಪ್ಪಾ ಅಂಗಡಿ, ಜವಳೀ ಪೇಟೆ, ಧಾರವಾಡ
ಇವರ ೧೯೩೮ನೇ ಇಸವಿ ಜನವರಿಯ ಜಮಾಖರ್ಚು.

೧

ಬೈಠೀ ಕೀರ್ದಿ ೧—೧—೧೯೪೫ ಇಸವಿ.

ಜಮೆ — ರೂ.

೨೭೧೦ ಭಾಂಡವಲ ಖಾತೆ:—

೪೩೫ ರೋಖು
೭೦೦ ಬ್ಯಾಂಕು
೧೫ ತಸಲಮಾತ
೧೫೦ ಅಂಗಡಿಯ ಸಾಮಾನು
(ಡೆಡಸ್ಟಾಕ)
೧೫೦ ಅಂಗಡಿ
೪೫೦ ಹುಂಡಿ ಖರೀದಿ
೫೦ ಬಾಡಿಗೆ
೫೦ ಬಾಳಪ್ಪ ದೇಸಾಯಿಯಿಂದ
ಬರತಕ್ಕದ್ದು
೧೫೦ ಜವಳಿ ಫಕೀರಪ್ಪನಿಂದ
ಬರತಕ್ಕದ್ದು
೧೦ ಬೋಗಾರ ವಾಸಪ್ಪನಿಂದ
ಬರತಕ್ಕದ್ದು
೪೦೦ ಶಿಲಕು ಮಾಲು

೩೯೧೦ ಆಯಾ ಖಾತೆಗಳಿಗೆ ಖರ್ಚ

೨೧೦ ಹುಂಡಿ ವಿಕ್ರಿ
೪೦೦ ಭೀಮಶಾವ ಗದಗ ಇವರಿಂದ
ಸಾಲ ತಂದದ್ದು
೨೫೦ ವಾಣೀ ಬಸಪ್ಪನಿಗೆ
ಕೊಡತಕ್ಕದ್ದು

ಖರ್ಚು — ರೂ.

೭೦೦ ಬ್ಯಾಂಕಿನ ಖಾತೆ:— ಇವತ್ತಿನ ಶಿಲಕು ಇದ್ದದ್ದರಿಂದ ಜಮೆ.
ಖಾ. ಪಾ. ೩

---

೧೫ ತಸಲಮಾತ ಖಾತೆ:—ಇವತ್ತಿನ ಬಾಕಿ ಇದ್ದದ್ದು ಕಾರಕೂನನ ಕಡೆಗೆ ಖರ್ಚಿಗಾಗಿ ಕೊಟ್ಟದ್ದು.
ಖಾ. ಪಾ. ೧೪

---

೧೫೦ ಅಂಗಡಿ ಸಾಮಾನಿನ ಖಾತೆ:— ಇತ್ತಿಗೆ ಇದ್ದ ಸಾಮಾನುಗಳ ಅಂದಾಜು ಬೆಲೆ. ಖಾ. ಪಾ ೧೯

೧೫೦೦ ಅಂಗಡಿಯ ಖಾತೆ:— ಈಗಿನ ಅಂಗಡಿಯ ಸದ್ಯದ ಬೆಲೆ.
ಖಾ. ಪಾ ೧೮

---

೧೫೦ ಹುಂಡೀ ಖರೀದಿ ಖಾತೆ:— ರಂಗಪ್ಪ ನಾಯಿಕ ಬೆಳಗಾವ ಇವರಿಂದ ಗದಗಿನ ಸಂಗಪ್ಪನ ಮೇಲೆ ಬರೆದ ದರ್ಶನಿ ಹುಂಡಿ ಖರೀದಿ ಮಾಡಿದ್ದು.
ಖಾ. ಪಾ. ೧೫

---

೫೦ ಮುಂಗಡ ಬಾಡಿಗೆ ಖಾತೆ:— ಅಂಗಡಿಯ ಬಗ್ಗೆ ಮುಂಗಡ ಬಾಡಿಗೆ ಕೊಟ್ಟದ್ದರಿಂದ ಭಾಂಡವಲ ಖಾತೆಗೆ ಜಮೆ.
ಖಾ. ಪಾ. ೩೦

೧೪೦ ಬಳಗಾರ ಕಾಳಪ್ಪನಿಗೆ ಕೊಡತಕ್ಕದ್ದು.
೧೧೦ ಸೂಡಿ ಶಾಂತಪ್ಪನಿಗೆ ಕೊಡತಕ್ಕದ್ದು.
೯೦ ಮ್ಯುನಸಿಪಾಲಟಿ ಅಂಗಡಿ ನಳಪಟ್ಟಿ.

೧೨೦೦ ಆಯಾ ಖಾತೆಗಳಿಗೆ ಜಮೆ.

೨೭೧೦ ಖಾ. ಪಾ. ೧

---

೨೧೦ **ಹುಂಡೀ ವಿಕ್ರೀ ಖಾತೆ:—**
ಆತ್ಮಾರಾಮ ಫಡಕೆ ಇವರ ರಾಖಲೆಯಿಂದ ಹರಗೋಲಾಲ ಮಾರವಾಡಿ ಇವರ ಮೇಲೆ ಬರಕೊಟ್ಟ ನಾಮಜೋಗ ದರ್ಶನಿ ಹುಂಡಿ.
ಖಾ. ಪಾ. ೧೬

---

೩೦೦ **ಭೀಮರಾವ ಗದಗ ಇವರ ಖಾತೆ:**
ಇವರಿಂದ ೧೦೦ಕ್ಕೆ ೧ ವ. ಕ್ಕೆ ೧೨ ರೂ. ಪ್ರಕಾರ ಸಾಲ ತಂದದ್ದು
ಖಾ. ಪಾ. ೬

---

೨೫೦ **ವಾಣಿ ಬಸಪ್ಪನ ಖಾತೆ :—**
ಸದರಿಯವರಿಗೆ ಕೊಡತಕ್ಕದ್ದಿರುವದರಿಂದ ಭಾಂಡವಲದಲ್ಲಿ ವಜಾ.
ಖಾ. ಪಾ. ೮

---

೧೪೦ **ಬಳಿಗಾರ ಕಾಳಪ್ಪನ ಖಾತೆ:—**
ಇವರಿಗೆ ರಕಮು ಕೊಡತಕ್ಕದ್ದಿರುವದರಿಂದ ಭಾಂಡವಲಿನಲ್ಲಿ ಕಳೆದದೆ. ಖಾ. ಪಾ. ೧೦

---

೫೦ **ಬಾಳಪ್ಪ ದೇಸಾಯಿ ಖಾತೆ:—**
ಸದರಿಯವರಿಂದ ಬರತಕ್ಕ ರೂ. ಭಾಂಡವಲ ಖಾತೆಗೆ ಜಮೆ.
ಖಾ. ಪಾ. ೪

---

೧೫೦ **ಜವಳೀ ಫಕೀರಪ್ಪನ ಖಾತೆ:—**
ಇವರಿಂದ ಬರತಕ್ಕದ್ದು ಇದ್ದದರಿಂದ ಈ ಖಾತೆಗೆ ಖರ್ಚು ಬರೆದಿದೆ. ಖಾ. ಪಾ. ೫

---

೧೦ **ಬೋಗಾರ ವಾಸಪ್ಪನ ಖಾತೆ:-**
ಸದರಿಯವರಿಂದ ಬರತಕ್ಕದ್ದು ಇದ್ದದರಿಂದ ಭಾಂಡವಲ ಖಾತೆಗೆ ಜಮೆ. ಖಾ. ಪಾ. ೭

---

೪೦೦ **ಜವಳೀ ಖರೀದಿ ಖಾತೆ:—**
ಶಿಲಕು ಮಾಲಿನ ತಪಶೀಲು—
೨೫೦ ಇಳಕಲ್ಲ ಸೀರೆ ೧೦ ದರ ೨೫ ರೂ. ಪ್ರಕಾರ.
೭೫ ಗದಗಿನ ಸೀರೆ ೫ ದರ ೧೫ ರೂ. ಪ್ರಕಾರ.
೨೫ ಗುಳೇದಗುಡ್ಡದ ಖಣ ೧೦ ದರ ೨॥ ರೂ. ಪ್ರಕಾರ.
೫೦ ಬೆಂಗಳೂರಿನ ಖಣ ೧೦ ದರ ೫ ರೂ. ಪ್ರಕಾರ.

೪೦೦ ಭಾಂಡವಲ ಖಾತೆಗೆ ಜಮೆ.
ಖಾ. ಪಾ. ೨೦

೧೧೦ ಸೂಡಿ ಶಾಂತಪ್ಪನ ಖಾತೆ:— ಸದರಿಯವರಿಗೆ ಹಣ ಕೊಡತಕ್ಕದ್ದಿರುವದರಿಂದ ಈ ಖಾತೆಗೆ ಜಮೆ. ಖಾ. ಪಾ. ೯

೯೦ ಮ್ಯು. ಪಾ. ಕರದ ಖಾತೆ:— ಅಂಗಡಿ ನಳಪಟ್ಟಿ ಮುಂತಾದವುಗಳ ಬಗ್ಗೆ ಕರ ಕೊಡತಕ್ಕದ್ದಿದ್ದದರಿಂದ ಭಾಂಡವಲಿನ ಖಾತೆಯಲ್ಲಿ ವಜಾ. ಖಾ. ಪಾ. ೨೩

೩೯೧೦ ತಪಶೀಲು:—
೪೩೫ ರೋಖು
೩೪೭೫ ಪರಭಾರೆ
೩೯೧೦

೩೯೧೦ ಅಂತೂ ಮೂರು ಸಾವಿರ ಒಂಬತ್ತುನೂರ ಹತ್ತು ರೂ. ಮಾತ್ರ. ದಸ್ತೂರ ಸಂಗಪ್ಪ ಅಂಗಡಿ

೩೪೭೫ ತಪಶೀಲು—
೦ ರೋಖು
೩೪೭೫ ಪರಭಾರೆ
೩೪೭೫

೪೩೫ ನಾಳಿನ ಶಿಲಕು,

೩೯೧೦ ಅಂತೂ ಮೂರು ಸಾವಿರ ಒಂಭತ್ತುನೂರ ಹತ್ತು ರೂ. ಮಾತ್ರ ದಸ್ತೂರ ಸಂಗಪ್ಪ ಅಂಗಡಿ.

೨

ಬೈರೀ ಕೀರ್ದಿ.

ತಾರೀಖು ೨—೧—೪೫ ರಿಂದ ತಾ. ೧೦—೧—೪೫ ಪೂರ್ಣ

ಜಮೆ — ರೂ.

೪೩೫ ನಿನ್ನಿನ ಶಿಲಕು.

೨೫೦ ವಾಣೀ ಬಸಪ್ಪನ ಖಾತೆ:— ಸದರಿಯವರಲ್ಲಿ ೨೫೦ ರೂ. ಯ ಮಾಲು ಉದ್ದರೀ ತಂದದ್ದು. ಜವಳೀ ಖರೀದಿ ಖಾತೆಗೆ ಖರ್ಚು ಬರೆದು ತಾ. ೨ ಖಾ. ಪಾ. ೮

ಖರ್ಚು — ರೂ.

೨ ಪೋಷ್ಟ ಖಾತೆ:— ಎರಡು ರೂ. ಗಳ ಕಾರ್ಡ ತರಿಸಿದ್ದು. ತಾ. ೨ ಖಾ. ಪಾ. ೨೪

೨೫೦ ಜವಳೀ ಖರೀದಿ ಖಾತೆ:—ವಾಣೀ ಬಸಪ್ಪನಲ್ಲಿ ಉದ್ದರೀ ತಂದ ಮಾಲಿನ ತಪಶೀಲು—

೯೦ ಅನಾಮತ ಖಾತೆ:- ಗೋವಿಂದ ಶೇಟಜಿಯವರು ಮನಿಯಾರ್ಡರ ದಿಂದ ೯೦ ರೂ. ಕಳಿಸಿದರು. ವ್ಯವಸ್ಥೆಯ ಬಗ್ಗೆ ಪತ್ರ ಬರಲಿಲ್ಲ.

ತಾರೀಖು ೩ ಖಾ. ಪಾ ೧೩

---

೫೦ ಬಾಳಪ್ಪ ದೇಸಾಯಿಯ ಖಾತೆ: ಇವರು ಕೊಡತಕ್ಕ ರೂಪಾಯಿಗಳಲ್ಲಿ ೫ ರೂ. ಸೂಟ ಬಿಡಿಸಿಕೊಂಡು ಉಳಿದ ೪೫ ರೂ. ತಂದುಕೊಟ್ಟರು. ಸದರಿ ೫ ರೂ. ಗಳು ಸೂಟ ಖಾತೆಗೆ ಖರ್ಚು.

ತಾರೀಖು ೫ ಖಾ. ಪಾ. ೪

---

೧೦೦ ನಾರಾಯಣರಾವ ಸತ್ತೀ ಇವರ ಖಾತೆ:- ಸದರೀಯವರಿಂದ ಮಡಿ ಕಳಿಸುವ ಸಲುವಾಗಿ ಈ ಹೊತ್ತಿನ ದಿವಸ ಬಂದದ್ದು. ತಾ. ೬

ಖಾ. ಪಾ. ೧೧

---

೨೧೦ ಹರಗೋಲಾಲ ಮಾರವಾಡಿ ಖಾತೆ:— ಇವರ ಮೇಲೆ ಫಡಕೇನ ರಾಖಲೆಯಿಂದ ಬರೆದ ಹುಂಡಿಯ ಖೋಕೆ ಬಂದದ್ದರಿಂದ ಹುಂಡಿ ವಿಕ್ರಿ ಖಾತೆಗೆ ಖರ್ಚು. ತಾ. ೭

ಖಾ. ಪಾ ೧೨

---

೧೨೫ ಜವಳೀ ವಿಕ್ರೀ ಖಾತೆ:—ಬಾಳಪ್ಪ ದೇಸಾಯಿ ಇವರಿಗೆ ಕೆಳಗಿನ ಮಾಲು ಉದ್ರಿ ಹಾಕಿದ ತಪಶೀಲು—

೩೬ ಗದಗಿನ ಸೀರೆ ೨ ದರ ೧೮ ರೂ. ಪ್ರಕಾರ.

೨೦೦ ರೂ. ನಾಗಪುರ ಉಡುವ ಧೋತರ ಜೋಡು ೨೦ ದರ ೧೦ ರೂ. ಪ್ರಕಾರ.

೫೦ ಹೊರುವ ಧೋತರ ಜೋಡ ೫ ದರ ೧೦ ರೂ. ಪ್ರಕಾರ.

---

೨೫೦ ವಾಣೀ ಬಸಪ್ಪನ ಖಾತೆಗೆ ಜಮೆ. ತಾ. ೨ ಖಾ. ಪಾ. ೨೦

---

೧ ಸಾದಿಲವಾರ ಖಾತೆ:— ಅಂಗಡಿಯ ಉಪಯೋಗಕ್ಕಾಗಿ ಚಿಮಣೀ ಎಣ್ಣೆಯನ್ನು ತರಿಸಿದ್ದು. ತಾ. ೨

ಖಾ. ಪಾ. ೨೬.

---

೫ ಸೂಟ ಖಾತೆ:—ಬಾಳಪ್ಪ ದೇಸಾಯಿಯು ಕೊಡತಕ್ಕ ರೂ. ಗಳಲ್ಲಿ ೫ ರೂ. ಸೂಟ ಬಿಟ್ಟದ್ದು. ಬಾಳಪ್ಪನ ಖಾತೆಗೆ ಜಮೆ. ತಾ. ೫

ಖಾ. ಪಾ. ೨೬

---

೨೧೦ ಹುಂಡೀ ವಿಕ್ರೀ ಖಾತೆ:—

ಆತ್ಮಾರಾಮ ಫಡಕೆ ಇವರ ರಾಖಲೆಯಿಂದ ಹರಗೋಲಾಲ ಮಾರವಾಡಿ ಇವರ ಮೇಲೆ ಬರೆದ ಹುಂಡಿಯ ಖೋಕೆ ಬಂದದ್ದರಿಂದ ಹರಗೋಲಾಲನ ಹೆಸರಲೆ ಜಮೆ.

ತಾ. ೭ ಖಾ. ಪಾ. ೧೬

---

೧೦೦ ಭೀಮರಾವ ಗದಗ ಇವರ ಖಾತೆ: ಸದರಿಯವರು ಮಾಲಾಟಕ್ಕೆಂದು ಕಳಿಸಿದ ದಲಾಲಿ ಮಾಲು ತರುವ ಖರ್ಚಿನ ತಪಶೀಲು—

೫೦ ಉಡುವ ನಾಗಪುರದ ಧೋತರ ಜೋಡು ೨ ದರ ೨೫ ರೂ. ಪ್ರಕಾರ.
೨೪ ಹೊರುವ ನಾಗಪುರ ಧೋತರ ಜೋಡು ೨ ದರ ೧೨ ರೂಪಾಯಿ ಪ್ರಕಾರ.
೧೫ ಗುಳೇದಗುಡ್ಡದ ಖಣ ೫ ದರ ೩ ರೂ. ಪ್ರಕಾರ.

೧೨೫ ತಾ. ೯ ಖಾ. ಪಾ. ೨೧

---

೧೨ ಭೀಮರಾವ ಗದಗ ಇವರ ಖಾತೆ:-ಇವರು ಕಳಿಸಿದ ದಲಾಲಿ ಮಾಲಿನಲ್ಲಿ ಪೈರಣದ ಅರಿವೆ ತಾಗೆ ೧ ದರ ೧೨ ರೂ. ಪ್ರ. ರೋಖು ಮಾರಿದ್ದರಿಂದ. ತಾ. ೯ ಖಾ. ಪಾ. ೬

---

೧೫೫ ಜವಳೀ ವಿಕ್ರೀ ಖಾತೆ:- ಭೀಮರಾವ ಗದಗ ಇವರಿಗೆ ಮಾಲು ಕಳಿಸಿದ ತಪಶೀಲು—
೧೪೦ ಇಳಕಲ್ಲ ಸೀರೆ ೫ ದರ ೨೮ ರೂಪಾಯಿ ಪ್ರಕಾರ.
೧೫ ಗುಳೇದಗುಡ್ಡದ ಖಣ ೫ ದರ ೩ ರೂ. ಪ್ರಕಾರ.

೧೫೫ ಭೀಮರಾಯರ ಖಾತೆಗೆ ಖರ್ಚು ಬರೆದು. ತಾ. ೧೦ ಖಾ. ಪಾ. ೧೩

---

೨ ದಲಾಲಿ ಖಾತೆ:— ಯಾಲಕ್ಕಿ ೧ ಮಣ ಕೊಂಡದ್ದರಿಂದ ದಲಾಲಿ ಬಂದದ್ದು. ತಾ. ೧೦ ಖಾ. ಪಾ. ೨೨

---

೩೦ ರೇಲವೆ ಬಾಡಿಗೆ
೩ ಚಕ್ಕಡಿ ಬಾಡಿಗೆ
೨ ಹಮಾಲಿ
೬೫ ಜಕಾತಿ

೧೦೦ ತಾ. ೮ ಖಾ. ಪಾ. ೬

---

೩೭ ಬಾಳಪ್ಪ ದೇಸಾಯಿಯು ಖಾತೆ:- ಇವರು ಒಯ್ದ ೧೩೭ ರೂ ಜವಳೀ ಪೈಕಿ ೧೦೦ ರೂ. ರೋಖು ಕೊಟ್ಟದ್ದರಿಂದ ಜವಳೀ ವಿಕ್ರೀ ಖಾತೆಗೆ ಜಮೆ. ತಾ. ೯ ಖಾ. ಪಾ. ೪

---

೯೦ ಅಮಾನತ ಖಾತೆ:— ಗೋವಿಂದ ಶೇಟಿಜೀ ಇವರ ಪತ್ರದ ಪ್ರಕಾರ ಯಾಲಕ್ಕಿ ಕಳಿಸಿದ ತಪಶೀಲು—
೮೯ ರೂ. ಯಾಲಕ್ಕಿ
೧ ರೂ. ಪೋಸ್ಟ ಖರ್ಚು

೯೦ ತಾ. ಖಾ. ಪಾ. ೧೩

---

೧ ಸಾದಿಲವಾರ ಖಾತೆ: — ಅಂಗಡಿ ಉಪಯೋಗಕ್ಕಾಗಿ ಚಿಮಣೀ ಎಣ್ಣೆ ತರಿಸಿದ್ದು. ತಾ. ೯ ಖಾ. ಪಾ. ೨೫

---

೨೫೦ ಭೀಮರಾವ ಗದಗ ಇವರ ಖಾತೆ: ಇವರ ಕಡೆಗೆ ಕಳಿಸಿದ ಮಾಲಿನ ತಪಸೀಲು—
೧೫೫ ರೂ. ಜವಳಿ
೯೫ ರೂ. ಯಾಲಕ್ಕಿ ಮಣ ೧ ದರ ೯೫ ರೂ.

೨೫೦ ತಾ. ೧೦. ಖಾ. ಪಾ. ೬

೧೫೦ ಅವಮಾನತ ಖಾತೆ:- ಬೋಗಾರ ವಾಸಪ್ಪನಿಂದ ಈ ಹೊತ್ತಿನ ದಿವಸ ೧೫೦ ರೂಪಾಯಿಗಳು ಬಂದವು. ಕಾರಣ ತಿಳಿಸಿಲ್ಲ. ತಾ. ೧೦
ಖಾ. ಪಾ ೧೩

೧೧೪೪ ತಪಶೀಲು—
೪೮೭ ರೋಖು
೬೫೭ ಪರಭಾರೆ

೧೧೪೪

೧೫೭೯ ಅಂತೂ ಒಂದು ಸಾವಿರದ ಐದ ನೂರ ಎಪ್ಪತ್ತೊಂಭತ್ತು ರೂ. ಗಳು ಮಾತ್ರ
ದಸ್ತೂರ, ಸಂಗಪ್ಪ ಅಂಗಡಿ.

೧೦೦ ಜವಳೀ ಫಕೀರಪ್ಪನ ಖಾತೆ:— ಸದರಿಯವರು ೫ ತೊಲಿ, ನ್ಯಾಶನಲ್ ಘುಟ್ಟೆ ಭಂಗಾರದ ಬಳಿಯ ಜೋಡು ೧ ಒತ್ತೆ ಇಟ್ಟು ೧೦೦ ರೂ ಗಳನ್ನು ೧ ರೂ. ಗೆ ೧ ತಿಂಗಳಿಗೆ ೨ ಪೈಯಂತೆ ಬಡ್ಡಿ ಕರಾರ ಮಾಡಿ ಸಾಲ ಒಯ್ದರು. ತಾ ೧೦. ಖಾ. ಪಾ. ೫

೧೦೪೬ ತಪಶೀಲು—
೩೪೯ ರೋಖು
೬೯೭ ಪರಭಾರೆ

೧೦೪೬

೫೩೩ ನಾಳಿನ ಶಿಲಕು

೧೫೭೯ ಅಂತೂ ಒಂದು ಸಾವಿರದ ಐದ ನೂರಾ ಎಪ್ಪತ್ತೊಂಭತ್ತು ರೂಪಾಯಿ ಮಾತ್ರ
ದಸ್ತೂರ, ಸಂಗಪ್ಪ ಅಂಗಡಿ

೩.

ಬೈರೀ ಕೀರ್ದಿ.

ತಾ. ೧೧—೧—೪೫ ರಿಂದ ೨೧—೧—೪೫ ಪೂರ್ಣ

ಜಮೆ ರೂ.

೫೩೩ ನಿನ್ನಿನ ಶಿಲಕು

೨೦೦ ಭೀಮರಾವ ಗದಗೆ ಇವರ ಖಾತೆ ತಪಶೀಲು—
೨೦ ರಾಮಕೃಷ್ಣ ಮಿಲ್ಲಿನ ಧೋತರ ಜೋಡು ೪ ದರ ೫ ರೂ. ಪ್ರ.
೬೦ ಪೈರಣದ ಅರಿವೆ ತಾಗೆ ೫ ದರ ೧೨ ರೂ. ಪ್ರಕಾರ.

ಖರ್ಚು ರೂ.

೭೦ ಖುದ್ದ ಖಾತೆ:— ಮನೆಯ ಖರ್ಚಿಗಾಗಿ ಬ್ಯಾಂಕಿನಿಂದ ತರಿಸಿದ್ದರಿಂದ ಬ್ಯಾಂಕಿನ ಖಾತೆಗೆ ಜಮೆ. ತಾ. ೧೨ ಖಾ. ಪಾ. ೨

೮೩೦ ನೀಲಿ ಸರ್ಜ ವಾರ ೧೦ ದರ
೧೩ ರೂ. ಪ್ರಕಾರ
೨೧೦ ರೋಖು ಮಾರಿದ್ದು. ತಾ. ೧೧
ಖಾ. ಪಾ. ೬

---

೧೮ ಜವಳೀ ವಿಕ್ರಿ ಖಾತೆ:-- ಬೆಂಗಳೂರ ಖಣ ೩ ದರ ೬ ರೂ. ಪ್ರಕಾರ ಮಾರಿದ್ದು ತಾ. ೧೧
ಖಾ. ಪಾ. ೨೧

---

೭೦ ಬ್ಯಾಂಕಿನ ಖಾತೆ:— ಮನೆಯ ಖರ್ಚಿಗಾಗಿ ತರಿಸಿದ್ದರಿಂದ ಖುದ್ದ ಖಾತೆಗೆ ಖರ್ಚು ತಾ. ೧೨
ಖಾ. ಪಾ.

---

೫೦ ನಾರಾಯಣರಾವ ಸತ್ತಿ ಖಾತೆ:- ವಾಣೀ ಬಸಪ್ಪನ ಖಾತೆಗೆ ಖರ್ಚು. ತಾ. ೧೨ ಖಾ. ಪಾ. ೧೧

---

೧೬೦ ಬಳೆಗಾರ ಕಾಳಪ್ಪನ ಖಾತೆ:—
ತಪಶೀಲು—
೧೪೦ ಹಿಂದಕ್ಕೆ ಬಂದದ್ದು.
೧೬೦ ಈ ಹೊತ್ತು ಬಂದದ್ದು.

೩೦೦ ಕೇವು ಇಟ್ಟರು. ಬಡ್ಡಿಯ ದರ ೧೦೦ಕ್ಕೆ ವರ್ಷಕ್ಕೆ ೬ ರೂ. ಪ್ರಕಾರ. ತಾ. ೧೮
ಖಾ. ಪಾ. ೧೦

---

೨೦೦ ಬೋಗಾರ ವಾಸಪ್ಪನ ಖಾತೆ:— ಇವರ ಶಾಖಲೆಯಿಂದ ಹರಗೋಲಾಲ ಶೇಟಜಿಯು ಕಳಿಸಿದ ೨೦೦ ರೂ. ಯ ೨ ತಿಂಗಳ ಮುದ್ದತಿ ಶಹಾ ಜೋಗ ಹುಂಡಿಯನ್ನು ಸ್ವೀಕರಿಸಿತು. ಹರಗೋಲಾಲನ ಖಾತೆಗೆ ಖರ್ಚು ತಾ. ೧೯
ಖಾ. ಪಾ. ೭

---

೫೦ ವಾಣೀ ಬಸಪ್ಪನ ಖಾತೆ:_ ನಾರಾಯಣರಾಯರಿಗೆ ಕೊಡತಕ್ಕ ರೂ.ಗಳ ಬಗ್ಗೆ ಹವಾಲಿ ಹಿಡಿದದ್ದರಿಂದ ಅವರ ಖಾತೆಗೆ ಜಮೆ. ತಾ. ೧೨
ಖಾ. ಪಾ. ೮

---

೧೨೦ ತಸಲಮಾತ ಖಾತೆ:—ತೋಟದ ಬಾವಿ ಕಡಿಸಲಿಕ್ಕೆ ಒಡ್ಡರ ತಿಮ್ಮನಿಗೆ ಕೊಟ್ಟದ್ದು. ತಾ. ೧೪
ಖಾ. ಪಾ. ೧೪

---

೫೦ ಬ್ಯಾಂಕಿನ ಖಾತೆ:—೫೦ ರೂ. ಕಳಿಸಿದ್ದು. ತಾ. ೧೭ ಖಾ. ಪಾ. ೩

---

೧೬೦ ನಾರಾಯಣರಾವ ಸತ್ತೀ ಖಾತೆ:-
ತಪಶೀಲು—
೧೫೦ ಮುಡಿ
೧೦ ಪೋಷ್ಟ ಖರ್ಚು.

೧೬೦ ತಾ. ೧೭ ಖಾ. ಪಾ. ೧೧

---

೧೫೦ ರವಾನಗಿ ಖಾತೆ:— ಭತ್ತ ತರುವದಕ್ಕಾಗಿ ಹುಸೇನ ಸಾ. ಎಲೆಗಾರ ಇವನನ್ನು ಹುಲಕೊಪ್ಪಕ್ಕೆ ಕಳಿಸಿದ್ದು. ತಾ. ೧೮ ಖಾ. ಪಾ. ೧೭

---

೧ ಸಾದಿಲವಾರ ಖಾತೆ:— ಅಂಗಡಿ ಉಪಯೋಗಕ್ಕಾಗಿ ಚಿಮಣೀಯಣ್ಣೆ ತರಿಸಿದ್ದು. ತಾ. ೧೮.
ಖಾ. ಪಾ. ೨೫

---

೨೦೦ ಹರಗೋಲಾಲನ ಖಾತೆ:—ಬೋಗಾರನ ಶಾಖಲೆಯಿಂದ ಇವರು ಕಳಿಸಿದ ೨೦೦ ರೂ. ಯ ಹುಂಡಿ

೧೫ ಭೀಮರಾವ ಗದಗ ಇವರ ಖಾತೆ-
ರಾಮಕೃಷ್ಣ ಮಿಲ್‌ದ ಧೋತರ
ಜೋಡು ೩ ದರ ೫ ರೂ ಪ್ರಕಾರ
ರೋಖು ಮಾರಿದ್ದು. ತಾ. ೯
ಖಾ. ಪಾ. ೩೦

---

೧೨೦ ದಲಾಲಿ ಖಾತೆ:— ಮುಂಬಯಿ
ಯಿಂದ ಖರೀದಿ ಮಾಡಿದ ಜವಳಿ
೪೦೦೦ ರೂ. ದು ಇದಕ್ಕೆ ೧೦೦ಕ್ಕೆ
೩ ರಂತೆ ಲಾಭ ತಕ್ಕೊಂಡು ಮಾರಿ
ದ್ದರಿಂದ ೧೨೦ ರೂ ಲಾಭ
ತಾ. ೨೦ ಖಾ. ಪಾ. ೨೨

---

೨೦೦ ಅಮಾನತ ಖಾತೆ:— ಸೂಡಿ
ಸಂಗಪ್ಪನ ಕಡೆಯಿಂದ ಬಂದವು.
ವ್ಯವಸ್ಥೆಯ ಬಗ್ಗೆ ಪತ್ರವಿಲ್ಲ.
ತಾ. ೨೧ ಖಾ ಪಾ. ೧೩

---

೧೫೦ ಜವಳೀ ಫಕೀರಪ್ಪನ ಖಾತೆ:—
ಬೋಗಾರ ವಾಸಪ್ಪನ ಹೆಸರಲೆ
ಜಮೆ ಹಿಡಿಯಲಿಕ್ಕೆ ತಿಳಿಸಿದ್ದರಿಂದ
ಅವರ ಖಾತೆಗೆ ಖರ್ಚು. ತಾ. ೨೦
ಖಾ. ಪಾ ೫ ಪತ್ರ ನಂ. ೫

---

೩೪೦ ಭೀಮರಾವ ಗದಗ ಇವರ
ಖಾತೆ:-ಇವರ ಮಾಲು ಸಂಚಾ
ಯತ ಕರಾರಿನಿಂದ ಜವಳೀ ಫಕೀ
ರಪ್ಪನಿಗೆ ಮಾರಿದ ತಪಶೀಲು
೧೦೦ ರಾಮಕೃಷ್ಣ ಮಿಲ್‌ದ
ಧೋತರ ಜೋಡು ೨೦ ದರ
೫ ರೂ. ಪ್ರಕಾ
೨೪೦ ಪೈರಣದ ಅರಿವೆ ಖಾಗೆ ೨೦
ದರ ೧೨ ರೂ. ಪ್ರಕಾರ.

೩೪೦ ಜವಳಿ ಫಕೀರಪ್ಪನ ಖಾತೆಗೆ
ಖರ್ಚು ತಾ. ೨೧. ಖಾ. ಪಾ. ೬

ಸ್ವೀಕರಿಸಿದ್ದರಿಂದ ವಾಸಪ್ಪನ ಖಾ
ತೆಗೆ ಜಮೆ ಬರೆಯಿತು. ತಾ. ೧೯
ಖಾ. ಪಾ. ೧೨

---

೬೦ ಖುದ್ದ ಖಾತೆ:— ಎಮ್ಮೆ ಒಂದು
ಬೆಲೆ ೬೦ ರೂ. ಗೆ ಖರೀದಿ ಮಾ
ಡಿತು. ತಾ ೧೯ ಖಾ. ಪಾ. ೨

---

೫೬೦ ವಾರ ಬಾಂಡ ಖಾತೆ:— ವಾರ
ಬಾಂಡ ೭ ದರ ೮೦ ರೂ. ಪ್ರಕಾರ
ಕೊಂಡದ್ದು. ತಾ. ೨೦
ಖಾ. ಪಾ. ೨೭

---

೧೫೦ ಬೋಗಾರ ವಾಸಪ್ಪನ ಖಾತೆ:—
ಇವರು ತಿಳಿಸಿದ ಪ್ರಕಾರ ೧೫೦
ರೂ. ಜವಳೀ ಫಕೀರಪ್ಪನ ಹೆಸರಲೆ
ಜಮೆ. ಖಾ. ೭

---

೩೪೦ ಜವಳೀ ಫಕೀರಪ್ಪನ ಖಾತೆ:—
ಇವರಿಗೆ ಗದಗ ಭೀಮರಾಯರ
೩೪೦ ರೂ. ಯ ಮಾಲು ಸಂಚಾ
ಯತ ಕರಾರಿನಿಂದ ಕಳಿಸಿದ್ದು,
ಭೀಮರಾಯರ ಖಾತೆಗೆ ಜಮೆ.
ಖಾ. ಪಾ. ೫

೧೯೧೧ ತಪಶೀಲು.
೧೧೦೧ ರೋಖು.
೮೧೦ ಪರಭಾರೆ.

೧೯೧೯

೧೫೩೩ ತಪಶೀಲು.
೭೨೩ ರೋಖು.
೮೧೦ ಪರಭಾರೆ.

೧೫೩೩

೨೦೬೬ ಅಂತೂ ಎರಡುಸಾವಿರದ ಅರವತ್ತಾರು ರೂಪಾಯಿಗಳು ಮಾತ್ರ ದಸ್ತೂರ ಸಂಗಪ್ಪ ಅಂಗಡಿ.

೧೫೫ ನಾಳಿನ ಶಿಲಕು.

೨೦೬೬ ಅಂತೂ ಎರಡು ಸಾವಿರದ ಅರವತ್ತಾರು ರೂ. ಗಳು ಮಾತ್ರ ದಸ್ತೂರ ಸಂಗಪ್ಪಾ ಅಂಗಡಿ.

೪

ಬೈಠೀ ಕೀರ್ದಿ.

ತಾ. ೨೨—೧—೪೫ ರಿಂದ ತಾ. ೩೦—೧—೪೫ ಪೂರ್ಣ

ಜಮೆ ರೂ.

೧೫೫ ನಿನ್ನಿನ ಶಿಲಕು.

೧೫೦ ರವಾನಗಿ ಖಾತೆ:- ಭತ್ತ ತರಲಿಕ್ಕೆ ಹೋದ ಹುಸೇನಿಯು ಕೆಳಗೆ ಬರೆದಂತೆ ಖರ್ಚು ಮಾಡಿದನು. ಅದರ ವಿವರ:—

೧೦೦ ಭತ್ತ ಹೇರು ೫ ದರ ೨೦ ರೂಪಾಯಿ ಪ್ರಕಾರ.
೧೦ ಗಾಡಿ ಬಾಡಿಗೆ.
೧೦ ಹೊಟ್ಟೆ ಖರ್ಚು.

೧೨೦ ಖುದ್ದ ಖಾತೆಗೆ ಖರ್ಚು ಬರೆದು
೩೦ ರೋಖು ತಂದಿರುವನು.

೧೫೦ ತಾ. ೨೨ ಖಾ. ಪಾ. ೧೭

ಖರ್ಚು ರೂ.

೧೨೦ ಖುದ್ದ ಖಾತೆ:— ಹುಸೇನಿಯು ಭತ್ತ ಖರೀದಿ ಮಾಡಿದ ತಪಶೀಲು:—

೧೦೦ ಭತ್ತ ಹೇರು ೫ ದರ ೨೦ ರೂ. ಪ್ರಕಾರ.
೧೦ ಗಾಡಿ ಬಾಡಿಗೆ.
೧೦ ಹೊಟ್ಟೆ ಖರ್ಚು.
೧೨೦ ರವಾನಗಿ ಖಾತೆಗೆ ಜಮೆ.
ತಾ. ೨೨. ಖಾ. ಪಾ. ೨

೨೦೦ ಬೋಗಾರ ವಾಸಪ್ಪನ ಖಾತೆ:— ಇವರ ರಾಖಲೆಯಿಂದ ಹರಗೋಲಾಲನು ಬರೆದ ೨ ತಿಂಗಳ ಮುದ್ದತಿ ಶಹಾಜೋಗ ಹುಂಡಿಯು ಹಣ ಇಲ್ಲೇ ಕೊಟ್ಟೆವು. ೪ ರೂ. ಸೂಟ

೬೬೫ **ವಾರ ಬಾಂಡಖಾತೆ**:- ವಾರ ಬಾಂಡ ೭ ದರ ೯೫ ರೂ. ಪ್ರಕಾರ ಮಾರಿತು. ತಾ. ೨೨ ಖಾ. ಪಾ. ೨೭

೪ **ಸೂಟಿ ಖಾತೆ**:— ಬೋಗಾರ ವಾಸಪ್ಪನ ಹುಂಡಿ ತಕ್ಕೊಂಡದ್ದರಿಂದ ಸೂಟಿ ಸಿಕ್ಕದ್ದು. ತಾ. ೨೨ ಖಾ. ಪಾ. ೨೬

೪೫೦ **ಹುಂಡಿ ಖರೀದಿ ಖಾತೆ**:— ರಂಗಪ್ಪನಾಯಿಕರು ತಮ್ಮ ಹುಂಡಿ ತೆಗೆದುಕೊಂಡು ಹೋದ ತಪಶೀಲು—

೨೦೦ ರೂ. ಚೆಕ್.
೧೦ ರೂ. ಸೂಟ.
೨೪೦ ರೂ. ಪ್ರಾಮಿಸರಿ ನೋಟ

೪೫೦ ರೂ. ಆಯಾ ಖಾತೆಗಳಿಗೆ ಖರ್ಚು ತಾ ೨೩. ಖಾ. ಪಾ. ೧೬.

೧೦೦ **ವಾಣೀ ಬಸಪ್ಪನ ಖಾತೆ**:_ಅನಂತರಾವ ಶಾಳೆ ಇವರ ಕಡಿಂದ ಬಸಪ್ಪನಿಗೆ ಬರತಕ್ಕ ೧೦೦ ರೂ. ಗಳು ವಸೂಲ ಆದವು. ತಾ. ೨೪ ಖಾ. ಪಾ. ೮

೫೨೦ **ಭೀಮರಾವ ಗದಗ ಇವರ ಖಾತೆ.** ಇವರ ಮಾಲು ಮಾರಿದ ತಪಶೀಲು

೧೬೦ ಧೋತರ ಜೋಡು ೪೦ ದರ ೪ ರೂ. ಪ್ರಕಾರ.
೧೦೦ ಪೈರಣದ ಅರಿವೆ ವಾರ ೧೦ ದರ ೧೦ ರೂ. ಪ್ರಕಾರ.
೨೬೦ ನೀಲಿ ಸರ್ಜ ವಾರ ೨೦ ದರ ೧೩ ರೂ. ಪ್ರಕಾರ ತಾ. ೨೫

೫೨೦ ಖಾ. ಪಾ. ೬

ಸಿಕ್ಕಿತು. ಸೂಟಿ ಖಾತೆಗೆ ಜಮೆ ತಾ. ೨೨. ಖಾ. ಪಾ. ೭

೨೦೦ **ಬ್ಯಾಂಕಿನ ಖಾತೆ**:— ರಂಗಪ್ಪನಾಯಕರು ಬರೆದ ಚೆಕ್ಕನ್ನು ಕಳಿಸಿದ್ದರಿಂದ ಹುಂಡಿ ಖರೀದಿ ಖಾತೆಗೆ ಜಮೆ. ತಾ. ೨೩. ಖಾ. ಪಾ. ೩

೧೦ **ಸೂಟಿ ಖಾತೆ**:— ರಂಗಪ್ಪನಾಯಿಕರಿಗೆ ಸೂಟ ಬಿಟ್ಟದ್ದರಿಂದ ಹುಂಡಿ ಖರೀದಿ ಖಾತೆಗೆ ಜಮೆ ತಾ. ೨೩. ಖಾ. ಪಾ ೨೮

೨೪೦ **ಹುಂಡಿ ಖರೀದಿ ಖಾತೆ**:— ರಂಗಪ್ಪನಾಯಿಕರು ಪ್ರಾಮಿಸರಿ ನೋಟ ಬರಕೊಟ್ಟದ್ದರಿಂದ ಹುಂಡಿ ಖರೀದಿ ಖಾತೆಗೆ ಜಮೆ. ತಾ. ೨೩ ಖಾ. ಪಾ. ೧೬

೧೦೦ **ಖುದ್ದ ಖಾತೆ**:— ಮನೆಯ ಸಲುವಾಗಿ ಬೆಳ್ಳಿ ತಂಬಿಗೆ ತಕ್ಕೊಂಡೆವು. ತಾ. ೨೩ ಖಾ. ಪಾ. ೨

೪೦೪ **ಭೀಮರಾವ ಗದಗ ಇವರ ಖಾತೆ** ಇವರಿಗೆ ೪೦೦ ರೂ. ಮನಿಆರ್ಡರ ಮಾಡಿದ್ದು. ಕಮಿಶನ್ ೪ ರೂ. ಕೊಟ್ಟೆವು. ತಾ. ೨೫ ಖಾ. ಪಾ. ೬

೩೧೫ **ಬಸಪ್ಪ ವಾಣಿ ಖಾತೆ**:—
ತಪಶೀಲು—

೩೦೦ ರೋಖು.
೧೫ ಸೂಟ, ಸೂಟ ಖಾತೆಗ ಜಮೆ.

೩೧೫ ತಾ ೨೬ ಖಾ. ಪಾ. ೮

೧೫ ಸೂಟಿ ಖಾತೆ:— ಬಸಪ್ಪ ವಾಣಿ ಇವರಿಂದ ಸೂಟಿ ಬಂದದ್ದು
ತಾ. ೨೬ ಖಾ. ಪಾ. ೨೬

೮೪೦ ಬೋಗಾರ ವಾಸಪ್ಪನ ಖಾತೆ:— ಇವರಲ್ಲಿ ಜವಳೀ ಮಾಲು ಖರೀದಿ
೩೧೫ ಇಳಕಲ್ ಶೀರೆ ೧೫ ದರ ೨೧ ರೂ. ಪ್ರಕಾರ
೪೨೫ ಗದಗಿನ ಶೀರೆ ೨೫ ದರ ೧೭ ರೂ. ಪ್ರಕಾರ
೧೦೦ ಗುಳೇದ ಗುಡ್ಡದ ಖಣ ೫೦ ದರ ೨ ರೂ. ಪ್ರಕಾರ
೮೪೦ ಜವಳೀ ಖರೀದಿ ಖಾತೆಗೆ ಖರ್ಚು ತಾ. ೨೬
ಖಾ. ಪಾ. ೭

೪೦೦ ಹುಂಡಿ ವಿಕ್ರಿ ಖಾತೆ:— ಬಸವಂತಪ್ಪಾ ಹತ್ತಿ ಧಾರವಾಡ ಇವರ ದಾಖಲೆಯಿಂದ ಬೆಳಗಾವಿಯ ರಂಗಪ್ಪ ನಾಯಿಕರ ಮೇಲೆ ಬರೆದ ನಾಮಜೋಗ ದರ್ಶನಿ ಹುಂಡಿ ಕಳಿಸಿದ್ದು. ಹುಂಡಾವಳಿ ೧೦೦ಕ್ಕೆ ¼ ಯಂತೆ ತಾ. ೨೭
ಖಾ. ಪಾ. ೧೬

೧ ಹುಂಡಾವಳಿ ಖಾತೆ:— ಹುಂಡಾವಳಿ ಬಂದದ್ದು ತಾ. ೨೭
ಖಾ. ಪಾ. ೨೯

೪೮ ಬ್ಯಾಂಕಿನ ಖಾತೆ:— ಆಯುಷ್ಯವಿಮೆಯ ಕಂತದ ಸಲುವಾಗಿ ಬ್ಯಾಂಕಿನ ಮೇಲೆ ಚೆಕ್ಕ ಕೊಟ್ಟು ಮುಟ್ಟಿಸಿತು. ಖುದ್ದ ಖಾತೆಗೆ ಖರ್ಚು ತಾ. ೨೮ ಖಾ. ಪಾ. ೩

೮೪೦ ಜವಳೀ ಖರೀದಿ ಖಾತೆ:— ಬೋಗಾರ ವಾಸಪ್ಪನಲ್ಲಿ ೮೪೦ ರೂ. ಗಳ ಜವಳಿ ಖರೀದಿ ಮಾಡಿದ್ದು. ವಾಸಪ್ಪನ ಖಾತೆಗೆ ಜಮೆ. ತಾ. ೨೬
ಖಾ. ಪಾ. ೨೦

೫೦ ನಾರಾಯಣರಾವ ಸತ್ತಿ ಖಾತೆ:- ವಾಣೀ ಬಸಪ್ಪನ ಹವಾಲಿ ಹಿಡಿದದ್ದರಿಂದ ೫೦ ರೂ. ಕೊಟ್ಟಿತು.
ತಾ. ೨೭ ಖಾ. ಪಾ. ೧೧

೯೦ ಮ್ಯು. ಪಾ. ಕರದ ಖಾತೆ:— ಕೊಡತಕ್ಕ ಬಾಕಿ ಮುಟ್ಟಿಸಿದ್ದರಿಂದ ತಾ. ೨೭
ಖಾ. ಪಾ. ೨೩

೧ ಸಾದಿಲವಾರ ಖಾತೆ:— ಅಂಗಡಿ ಸಲುವಾಗಿ ಹಾಳಿ ತಂದದ್ದು.
ತಾ. ೨೭ ಖಾ. ಪಾ. ೨೫

೪೮ ಖುದ್ದ ಖಾತೆ:— ಆಯುಷ್ಯವಿಮೆಯ ಕಂತ ಕೊಟ್ಟದ್ದರಿಂದ ಬ್ಯಾಂಕಿನ ಖಾತೆಗೆ ಜಮೆ.
ತಾ. ೨೮ ಖಾ. ಪಾ. ೨

೩ ಪೋಸ್ಟ ಖಾತೆ:— ಮೂರು ರೂಪಾಯಿಯ ಕಾರ್ಡು ತರಿಸಿದ್ದು.
ತಾ. ೨೯ ಖಾ. ಪಾ. ೨೪

೭೫ ಅಂಗಡಿ ಸಾಮಾನಿನ ಖಾತೆ:— ಅಂಗಡಿಯ ಉಪಯೋಗಕ್ಕಾಗಿ ತಿಜೋರಿ ಕೊಂಡದ್ದು. ತಾ. ೨೯
ಖಾ. ಪಾ. ೧೯

೮೮೨ ಜವಳೀ ವಿಕ್ರೀ ಖಾತೆ:— ತಾ. ೨೬ನೆಯ ದಿವಸ ಖರೀದಿ ಮಾಡಿದ ೮೪೦ ರೂ. ಜವಳಿ ೧೦೦ಕ್ಕೆ ೫ ರಂತೆ ಲಾಭ ತಕ್ಕೊಂಡು ೮೮೨ ರೂ. ಗೆ ಮಾರಿತು. ತಾ. ೨೮
ಖಾ. ಪಾ. ೨೧

---

೧೨೬ ಜವಳೀ ವಿಕ್ರೀ ಖಾತೆ:—ಜವಳಿ ಮಾರಿದ ತಪಶೀಲು—
೩೬ ಗದಗಿನ ಶೀರೆ ೨ ದರ ೧೮ ರಂತೆ
೩೦ ಬೆಂಗಳೂರಿನ ಖಣ ೫ ದರ ೬ ರಂತೆ
೬೦ ಇಳಕಲ್ ಸೀರೆ ೨ ದರ ೩೦ ರಂತೆ

೧೨೬ ತಾ. ೨೯ ಖಾ. ಪಾ. ೨೧

---

೨೦ ಭೀಮರಾವ ಗದಗ ಇವರ ಖಾತೆ:—ಶಾಮಕೃಷ್ಣ ಮಿಲ್‌ದ ಧೋತರ ಜೋಡು ೪ ದರ ೫ ರೂ ಪ್ರಕಾರ ಮಾರಿದ್ದರಿಂದ.
ತಾ. ೨೯ ಖಾ. ಪಾ. ೬

---

೧೦೦ ತಸಲಮಾತ ಖಾತೆ:— ಒಡ್ಡರ ಶಾಮನಿಗೆ ಕೊಟ್ಟ ೧೨೦ ರೂ. ಗಳಲ್ಲಿ ೧೦೦ ರೂ. ಖರ್ಚು ಮಾಡಿರುವನು. ಹಾಗೂ ೨೦ ರೂ. ಗಳನ್ನು ಉಳಿದ ವ್ಯವಸ್ಥೆಗಾಗಿ ಇಟ್ಟುಕೊಂಡಿರುವನು.

ಖರ್ಚಾದ ೧೦೦ ರೂ. ಗಳನ್ನು ಖುದ್ದ ಖಾತೆಗೆ ಖರ್ಚು ಬರೆದು.
ತಾ. ೩೦ ಖಾ. ಪಾ. ೧೪

---

೪೦೦ ಹುಂಡಿ ವಿಕ್ರೀ ಖಾತೆ:— ಬಸವಂತಪ್ಪ ಹತ್ತಿ ಇವರ ರಾಖಲೆಯಿಂದ ಬರೆದ ಹುಂಡಿಯನ್ನು ನಾಕಾರಿಸಿದ್ದರಿಂದ ೪೦೦ ರೂ. ಕೊಟ್ಟಿತು. ತಾ. ೩೦.
ಖಾ. ಪಾ. ೧೬

---

೫ ಸಳಾಯಿ ನಕ್ರಾಯಿ ಖಾತೆ:- ಮೇಲಿನ ೪೦೦ ರೂ. ಯ ಹುಂಡಿಗಾಗಿ ೫ ರೂ. ಸಕ್ರಾಯಿ ನಕ್ರಾಯಿ ಕೊಟ್ಟದ್ದು.
ತಾ. ೩೦. ಖಾ. ಪಾ. ೨೮

---

೧೦೦ ಖುದ್ದ ಖಾತೆ:— ಖಾನಿ ದುರಸ್ತಿಗಾಗಿ ಖರ್ಚು ಮಾಡಿದ್ದು, ತಸಲಮಾತ ಖಾತೆಗೆ ಜಮೆ.
ತಾ. ೩೦ ಖಾ. ಪಾ. ೨

೩೨೦೧ ತಪಶೀಲು
೧೬೨೪ ರೋಖು
೧೫೭೭ ಪಠಭಾರೆ.

೩೨೦೧

೪೩೨೧ ತಪಶೀಲು
೨೭೪೪ ರೋಖು
೧೫೭೭ ಪರಭಾರೆ.

೪೩೨೧

	೧೨೭೫ ನಾಳಿನ ಶಿಲಕು.
೪೪೭೬ ಅಂತೂ ನಾಲ್ಕು ಸಾವಿರದ ನಾಲ್ಕನೂರಾ ಎಪ್ಪತ್ತಾರು ಮಾತ್ರ ದಸ್ತೂರ ಸಂಗಪ್ಪ ಅಂಗಡಿ	೪೪೭೬ ಅಂತೂ ನಾಲ್ಕುಸಾವಿರದ ನಾಲ್ಕುನೂರಾ ಎಪ್ಪತ್ತಾರು ರೂಪಾಯಿ ಮಾತ್ರ. ದಸ್ತೂರ ಸಂಗಪ್ಪ ಅಂಗಡಿ.

೫.

ಬೈರೀ ಕೀರ್ದಿ.

ತಾ. ೩೧—೧—೧೯೪೫

ಜಮೆ ರೂ.	ಖರ್ಚು ರೂ.
೧೨೭೫ ನಿನ್ನಿನ ಶಿಲಕು.	೫೦ ಬಾಡಿಗೆ ಖಾತೆ:— ಹೋದ ತಿಂಗಳು ಮುಂಗಡ ಬಾಡಿಗೆ ಕೊಟ್ಟಿದ್ದರಿಂದ ಮುಂಗಡ ಬಾಡಿಗಿ ಖಾತೆಗೆ ಜಮೆ. ತಾ. ೩೧ ಖಾ. ಪಾ ೩೧
೬೦ ಬ್ಯಾಂಕಿನ ಖಾತೆ:— ಖರ್ಚಿಗಾಗಿ ತರಿಸಿದ್ದು. ತಾ. ೩೧ ಖಾ. ಪಾ. ೧	೩೧ ಬಡ್ಡೀ ಖಾತೆ:— ತಪಶೀಲು— ೪ ರೂ. ಭೀಮರಾಯರಿಂದ ತಂದ ೪೦೦ ರೂ. ಗಳ ಸಾಲಕ್ಕೆ ಕೊಡತಕ್ಕ ಬಡ್ಡಿ ೪ ರೂ. ಚಿಲ್ಲರ ಕೊಡತಕ್ಕ ಖಾತೆಗೆ ಜಮೆ. ೨೭ ರೂ. ಭಾಂಡವಲಿನ ಮೇಲೆ ೧೦೦ಕ್ಕೆ ೧ ತಿಂಗಳಿಗೆ ೧೦ಂತೆ ೧ ತಿಂಗಳ ಬಡ್ಡಿ ಆಕಾರ ಮಾಡಿದ್ದು. ಭಾಂಡವಲ ಖಾತೆಗೆ ಜಮೆ.
೫೦ ಮುಂಗಡ ಬಾಡಿಗೆ ಖಾತೆ:— ಅಂಗಡಿಯು ಜಾನೇವಾರಿ ತಿಂಗಳ ಸಲುವಾಗಿ ೫೦ ರೂ. ಮುಂಗಡ ಕೊಟ್ಟಿದ್ದರಿಂದ ಬಾಡಿಗೆ ಖಾತೆಗೆ ಖರ್ಚು. ತಾ. ೩೧ ಖಾ. ಪಾ. ೩೦	೩೧ ತಾ. ೩೧. ಖಾ. ಪಾ. ೩೨
೬೮ ಚಿಲ್ಲರ ಕೊಡತಕ್ಕ ಖಾತೆ:— ತಪಶೀಲು— ೪ ರೂ. ಬಡ್ಡಿ. ೬ ರೂ. ಜಯಕರ್ನಾಟಕದ ಚಂದಾ.	

೧೦ ರೂ. ಅಂಗಡಿಯ ಸಿಪಾಯಿಯ ಪಗಾರ.
೪ ರೂ. ಅಂಗಡಿ ಉಡುಗುವ ಬಗ್ಗೆ.
೪೪ ರೂ. ಆಯುಷ್ಯ ವಿಮೆಯ ಕಂತ.

೬೮ ರೂ. ಆಯಾ ಖಾತೆಗಳಿಗೆ ಖರ್ಚು ಬರೆದು. ತಾ. ೩೧.
ಖಾ. ಪಾ ೩೫

೨೭ ಭಾಂಡವಲ ಖಾತೆ:— ಇದರ ಮೇಲೆ ೧೦೦ಕ್ಕೆ ೧ ತಿಂಗಳಿಗೆ ೧ರಂತೆ ೧ ತಿಂಗಳ ಬಡ್ಡೀ ಆಕಾರ ಮಾಡಿದ್ದು. ಬಡ್ಡೀ ಖಾತೆಗೆ ಖರ್ಚು. ತಾ. ೩೧
ಖಾ. ಪಾ. ೧

೫೫ ದಲಾಲಿ ಖಾತೆ:— ಭೀಮರಾಯರ ಮಾಲಿನ ಮೇಲೆ ದಲಾಲಿ ಬಂದದ್ದು. ಭೀಮರಾಯರ ಖಾತೆಗೆ ಖರ್ಚು. ತಾ. ೩೧
ಖಾ. ಪಾ. ೨೨

೨೬೦ ತಪಶೀಲು—
೬೦ ರೋಖು
೨೦೦ ಪರಭಾರೆ

೨೬೦

೬ ಮಾಸಪತ್ರಿಕೆ ಖಾತೆ– ವರ್ಗಣೀ ಕೊಡತಕ್ಕದ್ದಿರುವದರಿಂದ ಚಿಲ್ಲರ ಕೊಡತಕ್ಕ ಖಾತೆಗೆ ಜಮೆ.
ತಾ. ೩೧ ಖಾ. ಪಾ. ೩೪

೧೦ ಪಗಾರ ಖಾತೆ:— ಅಂಗಡಿಯ ಸಿಪಾಯಿಗೆ ಕೊಡತಕ್ಕದ್ದಿರುವದರಿಂದ ಚಿಲ್ಲರ ಕೊಡತಕ್ಕ ಖಾತೆಗೆ ಜಮೆ. ತಾ. ೩೧
ಖಾ. ಪಾ. ೩೨

೪ ಸಾದಿಲವಾರ ಖಾತೆ:—ಅಂಗಡಿ ಉಡುಗಿಸುವದಕ್ಕಾಗಿ ಕೊಡತಕ್ಕದ್ದಿರುವದರಿಂದ ಚಿಲ್ಲರ ಕೊಡತಕ್ಕ ಖಾತೆಗೆ ಜಮೆ
ತಾ. ೩೧ ಖಾ. ಪಾ. ೨೫

೪೪ ಖುದ್ದ ಖಾತೆ:— ಆಯುಷ್ಯ ವಿಮೆಯ ಕಂತ ಕೊಡತಕ್ಕದ್ದಿದ್ದದರಿಂದ ಚಿಲ್ಲರ ಕೊಡತಕ್ಕ ಖಾತೆಗೆ ಜಮೆ. ತಾ. ೩೧
ಖಾ. ಪಾ. ೨

೫೫ ಭೀಮರಾವ ಗದಗ ಖಾತೆ:— ಇವರ ಮಾಲಿನ ಮೇಲೆ ದಲಾಲಿ ಬಂದದ್ದರಿಂದ ದಲಾಲಿ ಖಾತೆಗೆ ಜಮೆ ಬರೆದು ತಾ. ೩೧
ಜಮೆ. ಖಾ. ೬

೨೦೦ ತಪಶೀಲು
೦ ರೋಖು
೨೦೦ ಪರಭಾರೆ

೨೦೦

೧ ೩೫ ನಾಳಿನ ಶಿಲಕು

೧೫೩೫ ಅಂತೂ ಒಂದು ಸಾವಿರದ ಐದನೂರ ಮೂತ್ತೈದು ರೂಪಾಯಿ ಮಾತ್ರ. ದಸ್ತೂರ ಸಂಗಪ್ಪ ಅಂಗಡಿ.	೧೫೩೫ ಅಂತೂ ಒಂದು ಸಾವಿರದ ಐದನೂರ ಮೂವತ್ತೈದು ರೂಪಾಯಿ ಮಾತ್ರ ದಸ್ತೂರ ಸಂಗಪ್ಪ ಅಂಗಡಿ

---

೩ ಖತಾವಣಿ.

೧. ಭಾಂಡವಲ ಖಾತೆ.

ಜಮೆ	ರೂ.	ಖರ್ಚು	ರೂ.
೨೭೧೦ ಕೀ. ಪಾ.	ತಾ. ೧-೧-೪೫	೫೪೨ ತೋ. ಮಿ. ಕೀ. ಪಾ. ೬	ತಾ. ೩೧-೧-೪೫
೨೭ ಕೀ. ಪಾ. ೫		೨೧೯೫ ತೋ. ಮಿ. ಕೀ. ಪಾ. ೬	
೨೭೩೭	ತಾ. ೩೧-೧-೪೫	೨೭೩೭	ತಾ. ೩೧-೧-೪೫

೨. ಖುದ್ದ ಖಾತೆ.

ಜಮೆ	ರೂ.	ಖರ್ಚು	ರೂ.
೫೪೨ ತೋ. ಮಿ. ಕೀ. ಪಾ. ೬		೬೦ ಕೀ. ಪಾ. ೩.	ತಾ. ೧೯-೧-೪೫
೫೪೨	ತಾ. ೩೧-೧-೪೫	೬೦ ಕೀ. ಪಾ. ೩.	ತಾ. ೧೯-೧-೪೫
		೧೩೦ ಕೀ. ಪಾ. ೪.	ತಾ. ೨೨-೧-೪೫
		೧೦೦ ಕೀ. ಪಾ. ೪.	ತಾ. ೨೩-೧-೪೫
		೪೮ ಕೀ. ಪಾ. ೪	ತಾ. ೨೮-೧-೪೫
		೧೦೦ ಕೀ. ಪಾ. ೪	ತಾ. ೩೧-೧-೪೫
		೪೪ ಕೀ. ಪಾ. ೫	ತಾ. ೩೧-೧-೪೫
		೫೪೨	

೩. ಬ್ಯಾಂಕಿನ ಖಾತೆ

ಜಮೆ	ರೂ.	ಖರ್ಚು	ರೂ.
ಕೀ. ಪಾ. ೩ ತಾ. ೧೨-೧-೪೫	೭೦	ಕೀ ಪಾ. ೧ ತಾ. ೧-೧-೪೫	೭೦೦
ಕೀ. ಪಾ. ೪ ತಾ. ೨೮-೧-೪೫	೪೮	ಕೀ. ಪಾ. ೩ ತಾ ೧೭-೧-೪೫	೫೦
ಕೀ. ಪಾ. ೪ ತಾ. ೩೧-೧-೪೫	೬೦	ಕೀ. ಪಾ. ೪ ತಾ. ೨೩-೧-೪೫	೨೦೦
ತೋ. ವಿ. ಕೀ. ಪಾ. ೬. ತಾ. ೩೧-೧-೪೫	೭೭೨		
	೯೫೦		೯೫೦

೪ ಬಾಳಪ್ಪ ದೇಸಾಯಿ ಖಾತೆ

ಜಮೆ	ರೂ.	ಖರ್ಚು	ರೂ
ಕೀ. ಪಾ. ೪ ತಾ. ೨೩-೧-೪೫	೫೦	ಕೀ. ಪಾ. ೧. ತಾ. ೧-೧-೪೫	೫೦
ತೋ. ವಿ. ಕೀ. ಪಾ. ೬ ತಾ. ೩೧-೧-೪೫	೩೭	ಕೀ. ಪಾ. ೨. ತಾ. ೯-೧-೪೫	೩೭
	೮೭		೮೭

೫. ಫಕೀರಪ್ಪ ಜವಳೀ ಖಾತೆ

ಜಮೆ	ರೂ.	ಖರ್ಚು	ರೂ.
ಕೀ. ಪಾ. ೩ ತಾ. ೨೦-೧-೪೫	೧೫೦	ಕೀ. ಪಾ. ೧ ತಾ. ೧-೧-೪೫	೧೫೦
ತೋ. ವಿ. ಕಿ. ಪಾ. ೬ ತಾ. ೩೧-೧-೪೫	೪೪೦	ಕೀ. ಪಾ. ೧ ತಾ. ೧೦-೧-೪೫	೧೦೦
		ಕೀ. ಪಾ. ೩ ತಾ. ೨೧-೧-೪೫	೩೪೦
	೫೯೦		೫೯೦

೬. ಭೀಮರಾವ ಗದಗ ಖಾತೆ

ಜಮೆ	ರೂ.	ಖರ್ಚು	ರೂ.
ಕೀ. ಪಾ. ೧ ತಾ. ೧-೧-೪೫	೪೦೦	ಕೀ. ಪಾ. ೨ ತಾ. ೮-೧-೪೫	೧೦೦
ಕೀ. ಪಾ. ೨ ತಾ. ೯-೯-೪೫	೧೨	ಕೀ. ಪಾ. ೨ ತಾ. ೧೦-೧-೪೫	೨೫೦
ಕೀ. ಪಾ ೩ ತಾ. ೧೧-೧-೪೫	೨೧೦	ಕೀ. ಪಾ. ೪ ತಾ. ೨೫-೧-೪೫	೪೦೪
ಕೀ. ಪಾ. ೩ ತಾ. ೧೯-೧-೪೫	೧೫	ಕೀ. ಪಾ. ೫ ತಾ. ೩೧-೧-೪೫	೫೫
ಕೀ. ಪಾ. ೩ ತಾ. ೨೧-೧-೪೫	೩೪೦	ತೋ. ವಿ. ಕೀ. ಪಾ. ೬ ತಾ. ೩೧-೧-೪೫	೭೦೮
ಕೀ ಪಾ. ೪ ತಾ. ೨೫-೧-೪೫	೫೨೦		
ಕೀ. ಪಾ. ೪ ತಾ. ೨೯-೧-೪೫	೨೦		
	೧೫೧೭		೧೫೧೭

೭. ವಾಸಪ್ಪ ಬೋಗಾರ ಖಾತೆ

ಜಮೆ ರೂ.	ಖರ್ಚು ರೂ.
೨೦೦ ಕೀ. ಪಾ. ೩ ತಾ. ೧೯-೧-೪೫	೧೦ ಕೀ. ಪಾ. ೧ ತಾ. ೧-೧-೪೫
೮೪೦ ಕೀ. ಪಾ. ೪ ತಾ. ೨೬-೧-೪೫	೧೫೦ ಕೀ. ಪಾ. ೩ ತಾ. ೨೦-೧-೪೫
	೨೦೦ ಕೀ. ಪಾ. ೪ ತಾ. ೨೨-೧-೪೫
	೬೮೦ ತೋ. ವಿ. ಕೀ. ಪಾ. ೬ ತಾ. ೩೧—೧—೪೫
೧೦೪೦	೧೦೪೦

೮. ಖಾತೆ :– ಬಸಪ್ಪ ವಾಣಿ

ಜಮೆ ರೂ.	ಖರ್ಚು ರೂ.
೨೫೦ ಕೀ. ಪಾ. ೧ ತಾ. ೧-೧-೪೫	೫೦ ಕೀ. ಪಾ. ೩ ತಾ. ೧೨-೧-೪೫
೨೫೦ ಕೀ. ಪಾ. ೨ ತಾ. ೨-೧-೪೫	೩೧೫ ಕೀ. ಪಾ. ೪ ತಾ. ೨೬-೧-೪೫
೧೦೦ ಕೀ. ಪಾ. ೪ ತಾ. ೨೪-೧-೪೫	೨೩೫ ತೋ. ವಿ. ಕೀ. ಪಾ. ೬ ತಾ. ೩೧-೧-೪೫
೬೦೦	೬೦೦

೯. ಖಾತೆ :–ಶಾಂತಪ್ಪ ಸೂಡಿ

ಜಮೆ ರೂ.	ಖರ್ಚು ರೂ.
೧೧೦ ಕೀ. ಪಾ. ೧ ತಾ. ೧-೧-೪೫	೧೧೦ ತೋ. ವಿ. ಕೀ. ಪಾ. ೬ ತಾ. ೩೧-೧-೪೫
೧೧೦	೧೧೦

೧೦. ಖಾತೆ :–ಕಾಳಪ್ಪ ಬಳೆಗಾರ

ಜಮೆ ರೂ.	ಖರ್ಚು ರೂ.
೧೪೦ ಕೀ. ಪಾ. ೧ ತಾ. ೧-೧-೪೫	೩೦೦ ತೋ. ವಿ. ಕೀ. ಪಾ. ೬ ತಾ. ೩೧-೧-೪೫
೧೬೦ ಕೀ. ಪಾ. ೩ ತಾ. ೧೮-೧-೪೫	
೩೦೦	೩೦೦

೧೧. ಖಾತೆ :– ನಾರಾಯಣರಾವ ಸತ್ತಿ

ಜಮೆ ರೂ.	ಖರ್ಚು ರೂ.
೧೦೦ ಕಿ. ಪಾ. ೨ ತಾ. ೬-೧-೪೫	೧೬೦ ಕಿ. ಪಾ. ೪ ತಾ. ೧೭-೧-೪೫
೫೦ ಕಿ. ಪಾ. ೩ ತಾ. ೧೨-೧-೪೫	೫೦ ಕಿ. ಪಾ. ೪ ತಾ. ೨೭-೧-೪೫
೬೦ ತೋ. ನಿ. ಕಿ. ಪಾ. ೬	
೨೧೦ ತಾ. ೩೧-೧-೪೫	೨೧೦

೧೨. ಖಾತೆ :– ಹರಗೋಲಾಲ ಮಾರವಾಡಿ

ಜಮೆ ರೂ.	ಖರ್ಚು ರೂ.
೨೧೦ ಕಿ. ಪಾ. ೨ ತಾ. ೭-೧-೪೫	೯೦ ಕಿ. ಪಾ. ೩ ತಾ. ೧೯-೧-೪೫
	೧೨೦ ತೋ. ನಿ. ಕಿ. ಪಾ. ೬
೨೧೦	೨೧೦ ತಾ. ೩೧-೧-೪೫

೧೩ ಖಾತೆ :– ಅಮಾನತ

ಜಮೆ ರೂ.	ಖರ್ಚು ರೂ.
೯೦ ಕಿ. ಪಾ. ೨ ತಾ. ೩-೧-೪೫	೯೦ ಕಿ. ಪಾ. ೨ ತಾ. ೯-೧-೪೫
೧೫೦ ಕಿ. ಪಾ. ೨ ತಾ. ೧೦-೧-೩೫	೩೫೦ ತೋ. ನಿ. ಕಿ. ಪಾ. ೭
೨೦೦ ಕಿ. ಪಾ. ೩ ತಾ. ೨೦-೧-೪೫	ತಾ. ೩೧-೧-೪೫
೪೪೦	೪೪೦

೧೪. ಖಾತೆ :– ತಸಲಮಾತ

ಜಮೆ ರೂ.	ಖರ್ಚು ರೂ.
೧೦೦ ಕಿ. ಪಾ. ೪ ತಾ. ೩೦-೧-೪೫	೧೫ ಕಿ. ಪಾ. ೨ ತಾ. ೯-೧-೪೫
೩೫ ತೋ. ನಿ. ಕಿ. ಪಾ. ೬	೧೨೦ ಕಿ. ಪಾ. ೩ ತಾ. ೧೪-೧-೪೫
೧೩೫	೧೩೫

೧೫. ಹುಂಡೀ ಖರೀದಿ ಖಾತೆ

ಜಮೆ ರೂ.	ಖರ್ಚು ರೂ.
೪೫೦ ಕೀ. ಪಾ. ೪ ತಾ. ೨೩-೧.೪೫	೪೫೦ ಕೀ. ಪಾ. ೧ ತಾ. ೩-೧-೪೫
೨೪೦ ತೋ. ನಿ. ಕೀ. ಪಾ. ೬	೨೪೦ ಕೀ. ಪಾ. ೫ ತಾ. ೨೩-೧-೪೫
೬೯೦ ತಾ ೩೧-೧-೪೫	೬೯೦

೧೬. ಹುಂಡೀ ವಿಕ್ರೀ ಖಾತೆ

ಜಮೆ ರೂ.	ಖರ್ಚು ರೂ.
೨೧೦ ಕೀ. ಪಾ. ೧ ತಾ. ೧—೧—೪೫	೨೧೦ ಕೀ. ಪಾ. ೨ ತಾ. ೭—೧—೪೫
೪೦೦ ಕೀ. ಪಾ. ೪ ತಾ. ೨೭—೧—೪೫	೪೦೦ ಕೀ ಪಾ. ೪ ತಾ. ೩೦—೧—೪೫
೬೧೦	೬೧೦

೧೭. ರವಾನಗಿ ಖಾತೆ

ಜಮೆ ರೂ.	ಖರ್ಚು ರೂ.
೧೫೦ ಕೀ. ಪಾ. ೪ ತಾ, ೨೨—೧—೦೫	೧೫೦ ಕೀ. ಪಾ. ೩ ತಾ. ೧೮—೧—೪೫
೧೫೦	೧೫೦

೧೮. ಅಂಗಡಿ ಖಾತೆ

ಜಮೆ ರೂ.	ಖರ್ಚು ರೂ.
೧೫೦೦ ತೋ. ನಿ. ಕೀ. ಪಾ. ತಾ. ೬	೧೫೦೦ ಕೀ. ಪಾ, ೧ ತಾ. ೧—೧—೪೫
೧೫೦೦ ತಾ. ೩೧—೧—೪೫	೧೫೦೦

೧೯. ಅಂಗಡಿ ಸಾಮಾನಿನ ಖಾತೆ

ಜಮೆ ರೂ.	ಖರ್ಚು ರೂ.
೨೨೫ ತೋ. ನಿ. ಕೀ. ಪಾ. ೬	೧೫೦ ಕೀ. ಪಾ. ೧ ತಾ. ೧—೧—೪೫
೨೨೫ ತಾ. ೩೧—೧—೪೫	೭೫ ಕೀ. ಪಾ. ೪ ತಾ. ೨೮—೧—೪೫
	೨೨೫

೨೦. ಜವಳೀ ಖರೀದಿ ಖಾತೆ

ಜಮೆ	ರೂ.	ಖರ್ಚು	ರೂ.
೧೪೯೦	ತೋ. ಖಿ. ಕೀ. ಪಾ. ೬ ತಾ. ೩೧—೧—೪೫	೪೦೦	ಕೀ. ಪಾ. ೧ ತಾ. ೧—೧—೪೫
		೨೫೦	ಕೀ. ಪಾ. ೨ ತಾ. ೨—೧—೪೫
		೮೪೦	ಕೀ. ಪಾ. ೪ ತಾ. ೨೬—೧—೪೫
೧೪೯೦		೧೪೯೦	

೨೧. ಜವಳೀ ವಿಕ್ರೀ ಖಾತೆ

ಜಮೆ	ರೂ.	ಖರ್ಚು	ರೂ.
೧೨೫	ಕೀ. ಪಾ. ೨ ತಾ. ೯—೧—೪೫	೧೩೦೬	ತೋ. ಖಿ. ಕೀ. ಪಾ. ೬
೧೫೫	ಕೀ. ಪಾ. ೨ ತಾ. ೧೦-೧-೪೫	೧೩೦೬	ತಾ. ೩೧—೧—೪೫
೧೮	ಕೀ. ಪಾ. ೩ ತಾ. ೧೧-೧-೪೫		
೮೮೨	ಕೀ. ಪಾ. ೪ ತಾ. ೨೮—೧—೪೫		
೧೨೬	ಕೀ. ಪಾ. ೪ ತಾ. ೨೯—೧—೪೫		
೧೩೦೬			

೨೨. ದಲಾಲಿ ಖಾತೆ

ಜಮೆ	ರೂ.	ಖರ್ಚು	ರೂ.
೨	ಕೀ. ಪಾ. ೨ ತಾ. ೧೦-೧-೪೫	೧೭೭	ತೋ. ಖಿ. ಕೀ. ಪಾ. ೬
೧೨೦	ಕೀ. ಪಾ. ೩ ತಾ. ೨೦-೧-೪೫	೧೭೭	ತಾ. ೩೧-೧-೪೫
೫೫	ಕೀ. ಪಾ. ೫ ತಾ. ೩೧-೧-೪೫		
೧೭೭			

೨೩. ಮ್ಯು. ಕರದ ಖಾತೆ

ಜಮೆ	ರೂ.	ಖರ್ಚು	ರೂ.
೯೦	ಕೀ. ಪಾ. ೧ ತಾ. ೧-೧-೪೫	೯೦	ಕೀ. ಪಾ. ೪ ತಾ. ೨೭-೧-೪೫
೯೦		೯೦	

೨೪. ಪೋಸ್ಟ ಖಾತೆ

ಜಮೆ	ರೂ.	ಖರ್ಚು	ರೂ.
೫ ತೋ. ನಿ. ಕೀ. ಪಾ. ೬ ತಾ. ೩೧-೧-೪೫		೨ ಕೀ. ಪಾ. ೨ ತಾ. ೨-೧-೪೫	
		೩ ಕೀ. ಪಾ. ೪ ತಾ. ೨೯-೧-೪೫	
೫		೫	

೨೫. ಸಾದಿಲವಾರ ಖಾತೆ

ಜಮೆ	ರೂ.	ಖರ್ಚು	ರೂ.
೮ ತೋ. ನಿ. ಕೀ. ಪಾ. ೬ ತಾ. ೩೧-೧-೪೫		೧ ಕೀ. ಪಾ. ೨ ತಾ. ೨-೧-೪೫	
		೧ ಕೀ. ಪಾ. ೨ ತಾ. ೯-೧-೪೫	
		೧ ಕೀ. ಪಾ. ೩ ತಾ. ೧೮-೧-೪೫	
		೧ ಕೀ. ಪಾ. ೪ ತಾ. ೨೭-೧-೪೫	
		೪ ಕೀ. ಪಾ. ೫ ತಾ. ೩೦-೧-೪೫	
೮		೮	

೨೬ ಸೂಟಿ ಖಾತೆ

ಜಮೆ	ರೂ.	ಖರ್ಚು	ರೂ.
೪ ಕೀ. ಪಾ. ೪ ತಾ. ೨೨-೧-೪೫		೫ ಕೀ. ಪಾ. ೨ ತಾ. ೫-೧-೪೫	
೧೫ ಕೀ. ಪಾ. ೪ ತಾ. ೨೬-೧-೪೫		೧೦ ಕೀ. ಪಾ. ೪ ತಾ. ೨೩-೧-೪೫	
		೪ ತೋ. ನಿ. ಕೀ. ಪಾ. ೬ ತಾ. ೩೧-೧-೪೫	
೧೯		೧೯	

೨೭. ವಾರಬಾಂಡ ಖಾತೆ

ಜಮೆ	ರೂ.	ಖರ್ಚು	ರೂ.
೬೬೫ ಕೀ. ಪಾ. ೪ ತಾ. ೨೨-೧-೪೫		೫೬೦ ಕೀ. ಪಾ. ೩ ತಾ. ೨೦-೧-೪೫	
		೧೦೫ ತೋ. ನಿ. ಕೀ. ಪಾ. ೬ ತಾ. ೩೧-೧-೪೫	
೬೬೫		೬೬೫	

೨೮. ಸಕ್ರಾಯಿ ನಕ್ರಾಯಿ ಖಾತೆ

ಜಮೆ ರೂ.	ಖರ್ಚು ರೂ.
೫ ತೊ. ವಿ. ಕೀ. ಪಾ. ೫	೫ ಕೀ. ಪಾ. ೪. ತಾ. ೩೦-೧-೪೫
೫ ತಾ. ೩೧-೧-೪೫	೫

೨೯. ಹುಂಡಾವಳಿ ಖಾತೆ

ಜಮೆ ರೂ.	ಖರ್ಚು ರೂ.
೧ ಕೀ. ಪಾ. ೪ ತಾ. ೨೭.೧-೪೫	೧ ತೋ. ವಿ. ಕೀ. ಪಾ. ೬
೧	೧

೩೦. ಮುಂಗಡ ಬಾಡಿಗೆ ಖಾತೆ

ಜಮೆ ರೂ.	ಖರ್ಚು ರೂ.
೫೦ ಕೀ. ಪಾ. ೫ ತಾ ೩೦.೧.೪೫	೫೦ ಕೀ. ಪಾ. ೧ ತಾ. ೧.೧.೪೫
೫೦	೫೦

೩೧. ಬಾಡಿಗೆ ಖಾತೆ

ಜಮೆ ರೂ.	ಖರ್ಚು ರೂ.
೫೦ ತೋ. ವಿ. ಕೀ. ಪಾ. ೬	೫೦ ಕೀ. ಪಾ. ೫ ತಾ. ೩೧.೧.೪೪
೫೦ ತಾ. ೩೧.೧.೪೫	೫೦

೩೨. ಪಗಾರ ಖಾತೆ

ಜಮೆ ರೂ.	ಖರ್ಚು ರೂ.
೧೦ ತೋ. ವಿ. ಕೀ. ಪಾ. ೬	೧೦ ಕೀ. ಪಾ. ೫ ತಾ. ೩೧.೧.೪೫
೧೦ ತಾ. ೩೧.೧.೯೫	೧೦

೩೩. ಬಡ್ಡೀ ಖಾತೆ

ಜಮೆ	ರೂ.	ಖರ್ಚು	ರೂ.
೩೧ ತೋ. ವಿ. ಕಿ. ಪಾ. ೬		೩೧ ಕೀ. ಪಾ. ೫ ತಾ. ೩೧-೧-೪೫	
೩೧ ತಾ. ೩೧-೧-೪೫		೩೧	

೩೪. ಮಾಸಪತ್ರಿಕೆ ಖಾತೆ.

ಜಮೆ	ರೂ.	ಖರ್ಚು	ರೂ.
೬ ತೋ. ವಿ. ಕೀ. ಪಾ. ೬		೬ ಕೀ. ಪಾ. ೫ ತಾ. ೩೧-೧-೪೫	
೬ ತಾ. ೩೧-೧-೪೫		೬	

೩೫. ಚಿಲ್ಲರ ಕೊಡತಕ್ಕ ಖಾತೆ.

ಜಮೆ	ರೂ.	ಖರ್ಚು	ರೂ.
೬೮ ಕೀ. ಪಾ. ೫ ತಾ. ೩೧-೧-೪೫		೬೮ ತೋ. ವಿ. ಕೀ. ಪಾ. ೬	
೬೮		೬೮ ತಾ ೩೧ ೧-೪೫	

ಅ. ೩೬. ಬಾಕಿಗಳ ತಾಳೆ.

ತಾ. ೩೧—೧—೪೫

ಜಮೆ	ರೂ.	ಖರ್ಚು	ರೂ.
೧೩೦೬	ವಿಕ್ರಿ	೧೪೯೦	ಖರೀದಿ
೧೦೫	ವಾರಬಾಂಡದಿಂದ ಲಾಭ	೫	ಪೋಸ್ಟ ಖರ್ಚು
೧೭೭	ದಲಾಲಿ	೮	ಸಾದಿಲವಾರ
೪	ಸೂಟ	೫	ಸಕ್ರಾಯಿ ನಕ್ರಾಯಿ
೧	ಹುಂಡಾವಳಿ	೫೦	ಬಾಡಿಗೆ
೨೭೩೬	ಭಾಂಡವಲ	೧೦	ಪಗಾರ
೩೫೦	ಅಮಾನತ	೩೧	ಬಡ್ಡಿ
೭೦೮	ಭೀಮಶಾವ ಗದಗ	೬	ಮಾಸ ಪತ್ರಿಕೆ
೬೮೨	ವಾಸಪ್ಪ ಬೋಗಾರ	೫೪೨	ಖುದ್ದ ಖಾತೆ
೨೩೫	ಬಸಪ್ಪ ವಾಣಿ	೭೭೨	ಬ್ಯಾಂಕು

೩೦೦	ಕಾಳಪ್ಪ ಬಳಿಗಾರ	೩೫	ತಸಲಮಾತ
೧೧೨	ಶಾಂತಪ್ಪ ಸೂಡಿ	೨೪೦	ಹುಂಡೀ ಖರೀದಿ
೧೦	ಹರಗೋಲಾಲ ಮಾರವಾಡಿ	೧೫೦೦	ಅಂಗಡಿ
೬೮	ಚಿಲ್ಲರ ಕೊಡತಕ್ಕದ್ದು	೨೨೫	ಅಂಗಡಿ ಸಾಮಾನು
೬೭೯೧		೩೭	ಬಾಳಪ್ಪ ದೇಸಾಯಿ
		೪೪೦	ಫಕೀರಪ್ಪ ಜವಳಿ
		೬೦	ನಾರಾಯಣ ಸತ್ತಿ
		೧೩೩೫	ರೋಖು
		೬೭೯೧	

ಬ. ೩೭. ಖರೀದಿ ವಿಕ್ರೀ ಖಾತೆ.

ತಾ. ೧—೧—೪೫ ರಿಂದ ತಾ. ೩೧—೧—೪೫ ಪೂರ್ಣ

ಜಮೆ	ರೂ.	ಖರ್ಚು	ರೂ.
೧೩೦೬	ವಿಕ್ರಿ	೧೪೯೦	ಖರೀದಿ
೨೯೦	ಶಿಲಕುಮಾಲು	೧೦೬	ಲಾಭ
೧೫೯೬		೧೫೯೬	

೩೮. ಲಾಭಹಾನಿ ಖಾತೆ.

ತಾ. ೧—೧—೪೫ ರಿಂದ ತಾ. ೩೧—೧—೪೫ ಪೂರ್ಣ

ಜಮೆ	ರೂ.	ಖರ್ಚು	ರೂ.
೧೦೬	ಜವಳಿಯಿಂದಾದ ಲಾಭ	೫	ಪೋಸ್ಟ ಖರ್ಚು
೧೦೫	ವಾರಬಾಂಡದಿಂದಾದ ಲಾಭ	೮	ಸಾದಿಲವಾರ
೧೭೭	ದಲಾಲಿ	೫	ಸಕ್ರಾಯಿ ನಕ್ರಾಯಿ
೪	ಸೂಟ	೫೦	ಬಾಡಿಗೆ
೧	ಹುಂಡಾವಳಿ	೧೦	ಪಗಾರ
೩೯೩		೩೧	ಬಡ್ಡಿ
		೬	ಮಾಸಪತ್ರಿಕೆ
		೨೭೮	ನಿವ್ವಳ ಲಾಭ
		೩೯೩	

ಕ. ೩೯. ಅಥಾವೆ.

ತಾ. ೩೧—೧—೪೫

ಜಮೆ	ರೂ.	ಖರ್ಚು	ರೂ.
೨೧೯೫	ಭಾಂಡವಲ	೧೩೩೫	ರೋಖು
೩೫೦	ಅಮಾನತ	೨೯೦	ಶಿಲಕು ಮಾಲು
೭೦೪	ಭೀಮರಾವ ಗದಗ	೭೬೨	ಬ್ಯಾಂಕು
೬೮೨	ವಾಸಪ್ಪ ಬೋಗಾರ	೩೫	ತಸಲಮಾತ
೨೩೫	ಬಸಪ್ಪ ವಾಣಿ	೨೪೦	ಹುಂಡೀ ಖರೀದಿ
೩೦೦	ಕಾಳಪ್ಪ ಬಳಿಗಾರ	೧೫೦೨	ಅಂಗಡಿ
೧೧೦	ಶಾಂತಪ್ಪ ಸೂಡಿ	೨೨೫	ಅಂಗಡೀ ಸಾಮಾನು
೧೨	ಹರಗೋಲ್ಲಾಲ ಮಾರವಾಡಿ	೩೭	ಬಾಳಪ್ಪ ದೇಸಾಯಿ
೬೮	ಚಿಲ್ಲರ ಕೊಡತಕ್ಕದ್ದು	೪೪೦	ಫಕೀರಪ್ಪ ಜವಳಿ
೨೭೮	ನಿವ್ವಳ ಲಾಭ	೬೦	ನಾರಾಯಣರಾವ ಸತ್ತಿ
೪೯೩೪		೪೯೩೪	

೬.

೯. ಕೀರ್ದಿ (ತೋಂಡಮಿಳವಣಿ)

ತಾ. ೩೧—೧—೧೯೪೫

ಜಮೆ	ರೂ.	ಖರ್ಚು	ರೂ.
೧೪೯೦	ಜವಳೀ ಖರೀದಿ ಖಾತೆ:— ತೊಂಡಮಿಳವಣಿ ಮಾಡಿದ್ದರಿಂದ ಖರೀದಿವಿಕ್ರಿ ಖಾತೆಗೆ ಖರ್ಚು. ಖಾ. ಪಾ. ೨೦	೧೫೯೬	ಖರೀದಿ ವಿಕ್ರೀ ಖಾತೆ:— ತೋಂಡಮಿಳವಣಿ ಮಾಡಿದ್ದರಿಂದ ಕೆಳಗೆ ಬರೆದ ಖಾತೆಗಳಿಗೆ ಜಮೆ. ೧೪೯೦ ಜವಳೀ ಖರೀದಿ ಖಾತೆ; ೧೦೬ ಲಾಭಹಾನಿ ಖಾತೆ; ೧೫೯೬ ಅಂತು ಖಾ. ಪಾ. ೩೬
೧೫೯೬	ಖರೀದಿ ವಿಕ್ರೀ ಖಾತೆ:-ತೋಂಡಮಿಳವಣಿ ಮಾಡಿದ್ದರಿಂದ ಕೆಳಗೆ ಬರೆದ ಖಾತೆಗಳಿಗೆ ಖರ್ಚು. ೧೩೦೬ ಜವಳೀ ವಿಕ್ರೀ ಖಾತೆ; ೨೯೦ ಅಥಾವೆ ಖಾತೆ (ಶಿಲ್ಕು ಮಾಲು) ಖಾ. ಪಾ. ೩೭	೧೩೦೬	ಜವಳಿ ವಿಕ್ರಿ ಖಾತೆ:— ತೋ. ಮಿ. ಮಾಡಿದ್ದರಿಂದ ಖರೀದಿ ವಿಕ್ರೀ ಖಾತೆಗೆ ಜಮೆ. ಖಾ. ಪಾ. ೨೧

೩೯೩ ಲಾಭಹಾನಿಯ ಖಾತೆ:—ತೋಂಡಮಿಳವಣಿ ಮಾಡಿದ್ದರಿಂದ ಕೆಳಗೆ ಬರೆದ ಖಾತೆಗಳಿಗೆ ಖರ್ಚು—

೧೦೬	ಖರೀದಿ ವಿಕ್ರೀ ಖಾತೆ	
೧೦೫	ವಾರಬಾಂಡ	,,
೧೭೭	ದಲಾಲಿ	,,
೪	ಸೂಟ	
೧	ಹುಂಡಾವಳಿ	,,
೩೯೩	ಅಂತೂ	

ಖಾ. ಪಾ ೩೮

---

೫ ಪೋಸ್ಟ ಖಾತೆ:— ತೋಂಡ ಮಿಳವಣಿ ಮಾಡಿದ್ದರಿಂದ ಲಾಭ ಹಾನಿ ಖಾತೆಗೆ ಖರ್ಚು.

ಖಾ. ಪಾ ೨೪

---

೮ ಸಾದಿಲವಾರ ಖಾತೆ:— ತೋ. ಮಿ. ಮಾಡಿದ್ದರಿಂದ ಲಾ. ಖಾತೆಗೆ ಖರ್ಚು.

ಖಾ. ಪಾ. ೨೫

---

೫ ಸಕ್ರಾಯಿ ನಕ್ರಾಯಿ ಖಾತೆ:— ತೋ. ಮಿ. ಮಾಡಿದ್ದರಿಂದ ಲಾ. ಹಾ ಖಾತೆಗೆ ಖರ್ಚು.

ಖಾ. ಪಾ. ೨೮

---

೫೦ ಬಾಡಗಿ ಖಾತೆ:— ತೋ. ಮಿ. ಮಾಡಿದ್ದರಿಂದ ಲಾ. ಹಾ. ಖಾತೆಗೆ ಖರ್ಚು. ಖಾ. ಪಾ. ೩೧

---

೧೦೫ ವಾರಬಾಂಡ ಖಾತೆ:— ತೋ. ಮಿ. ಮಾಡಿದ್ದರಿಂದ ಲಾಭಹಾನಿ ಖಾತೆಗೆ ಜಮೆ.

ಖಾ. ಪಾ. ೨೭

---

೧೭೭ ದಲಾಲಿ ಖಾತೆ:— ತೋ. ಮಿ. ಮಾಡಿದ್ದರಿಂದ ಲಾ. ಹಾ. ಖಾತೆಗೆ ಜಮೆ.

ಖಾ. ಪಾ. ೨೨

---

೪ ಸೂಟ ಖಾತೆ:— ತೋ. ಮಿ. ಮಾಡಿದ್ದರಿಂದ ಲಾ. ಹಾ. ಖಾತೆಗೆ ಜಮೆ.

ಖಾ. ಪಾ. ೨೭

---

೧ ಹುಂಡಾವಳಿ ಖಾತೆ:— ತೋ. ಮಿ ಮಾಡಿದ್ದರಿಂದ ಲಾ. ಹಾ. ಖಾತೆಗೆ ಜಮೆ.

ಖಾ. ಪಾ. ೨೭

---

೩೯೩ ಲಾಭಹಾನಿ ಖಾತೆ:— ತೋ. ಮಿ. ಮಾಡಿದ್ದರಿಂದ ಕೆಳಗೆ ಬರೆದ ಖಾತೆಗಳಿಗೆ ಜಮೆ—

೫	ಪೋಸ್ಟ	ಖಾತೆ
೮	ಸಾದಿಲವಾರ	,,
೫	ಸಕ್ರಾಯಿ ನಕ್ರಾಯಿ	,,
೫೦	ಬಾಡಿಗೆ	ಖಾತೆ
೧೦	ಪಗಾರ	,,
೩೧	ಬಡ್ಡಿ	,,
೬	ಮಾಸಪತ್ರಿಕೆ	,,
೨೭೮	ಅಘಾವೆ	,,
೩೯೩	ಅಂತು	ಖಾ. ಪಾ. ೩೮

೧೦ ಪಗಾರ ಖಾತೆ:— ತೋ. ವಿ. ಮಾಡಿದ್ದರಿಂದ ಲಾ. ಹಾ. ಖಾತೆಗೆ ಖರ್ಚು.

ಖಾ. ಪಾ. ೩೨

---

೩೧ ಬಡ್ಡೀ ಖಾತೆ:— ತೋ. ವಿ. ಮಾಡಿದ್ದರಿಂದ ಲಾ. ಹಾ. ಖಾತೆಗೆ ಖರ್ಚು.

ಖಾ. ಪಾ. ೩೩

---

೬ ಮಾಸಪತ್ರಿಕೆಯ ಖಾತೆ:— ತೋ. ವಿ. ಮಾಡಿದ್ದರಿಂದ ಲಾ. ಹಾ. ಖಾತೆಗೆ ಖರ್ಚು.

ಖಾ. ಪಾ. ೩೪

---

೫೪೨ ಖುದ್ದ ಖಾತೆ:— ತೋ. ವಿ. ಮಾಡಿದ್ದರಿಂದ ಭಾಂಡವಲ ಖಾತೆಗೆ ಖರ್ಚು.

ಖಾ. ಪಾ. ೩೫

೪೧೬೮ ಅಥಾವೆ ಖಾತೆ:— ತೋ. ವಿ. ಮಾಡಿದ್ದರಿಂದ ಕೆಳಗೆ ಬರೆದ ಖಾತೆಗಳಿಗೆ ಖರ್ಚು.

೨೧೯೫ ಭಾಂಡವಲ ಖಾತೆ
೩೫೦ ಅಮಾನತ ಖಾತೆ
೭೦೮ ಭೀಮರಾಯರ ಖಾತೆ
೬೮೦ ವಾಸಪ್ಪನ ಖಾತೆ
೨೩೫ ಬಸಪ್ಪನ ,,

೨೭೩೭ ಭಾಂಡವಲ ಖಾತೆ:— ತೋ. ವಿ. ಮಾಡಿದ್ದರಿಂದ ಕೆಳಗೆ ಬರೆದ ಖಾತೆಗಳಿಗೆ ಜಮೆ.

೫೪೨ ಖುದ್ದ ಖಾತೆ
೨೧೯೫ ಅಥಾವೆ ,,

೨೭೩೭ ಅಂತು ಖಾ. ಪಾ ೧

---

೩೫೦ ಅಮಾನತ ಖಾತೆ:— ತೋ. ವಿ. ಮಾಡಿದ್ದರಿಂದ ಅಥಾವೆ ಖಾತೆಗೆ ಜಮೆ.

ಖಾ. ಪಾ. ೧೩

---

೭೦೮ ಭೀಮರಾವ ಗದಗ ಇವರ ಖಾತೆ:— ತೋ. ವಿ. ಮಾಡಿದ್ದರಿಂದ ಅಥಾವೆ ಖಾತೆಗೆ ಜಮೆ.

ಖಾ. ಪಾ ೬

---

೬೮೦ ವಾಸಪ್ಪ ಬೋಗಾರ ಖಾತೆ:— ತೋ. ವಿ. ಮಾಡಿದ್ದರಿಂದ ಅಥಾವೆ ಖಾತೆಗೆ ಜಮೆ.

ಖಾ. ಪಾ. ೭

---

೨೩೫ ಬಸಪ್ಪ ವಾಣಿ ಇವರ ಖಾತೆ:— ತೋ. ವಿ. ಮಾಡಿದ್ದರಿಂದ ಅಥಾವೆ ಖಾತೆಗೆ ಜಮೆ.

ಖಾ. ಪಾ. ೮

೩೦೦ ಕಾಳಪ್ಪನ ,,
೧೧೦ ಶಾಂತಪ್ಪನ ,,
೧೦ ಹರಗೋಲಾಲನ ಖಾತೆ
೬೮ ಚಿಲ್ಲರ ಕೊಡತಕ್ಕವರ ಖಾತೆ
೨೬೮ ಲಾಭಹಾನಿ ,,

೪೯೩೪ ಅಂತು ಖಾ. ಪಾ. ೩೯

---

೭೭೨ ಬ್ಯಾಂಕಿನ ಖಾತೆ:—ತೋ. ಮಿ. ಮಾಡಿದ್ದರಿಂದ ಅಥಾವೆ ಖಾತೆಗೆ ಖರ್ಚು. ಖಾ. ಪಾ ೩

---

೩೫ ತಸಲಮಾತ ಖಾತೆ:— ತೋ. ಮಿ. ಮಾಡಿದ್ದರಿಂದ ಅಥಾವೆಗೆ ಖರ್ಚು. ಖಾ. ಪಾ. ೧೪

---

೩೭ ಬಾಳಪ್ಪ ದೇಸಾಯಿ ಖಾತೆ:— ತೋ. ಮಿ ಮಾಡಿದ್ದರಿಂದ ಅಥಾವೆ ಖಾತೆಗೆ ಖರ್ಚು.

ಖಾ. ಪಾ. ೪.

---

೨೪೦ ಹುಂಡಿ ಖರೀದಿ ಖಾತೆ:_ತೋ. ಮಿ. ಮಾಡಿದ್ದರಿಂದ ಅಥಾವೆ ಖಾತೆಗೆ ಖರ್ಚು.

ಖಾ. ಪಾ. ೧೫

೧೫೦೦ ಅಂಗಡಿ ಖಾತೆ:— ತೋ. ಮಿ. ಮಾಡಿದ್ದರಿಂದ ಅಥಾವೆ ಖಾತೆಗೆ ಖರ್ಚು. ಖಾ. ಪಾ. ೧೮

---

೩೦೦ ಕಾಳಪ್ಪ ಬಳೆಗಾರ ಖಾತೆ:— ತೋ. ಮಿ. ಮಾಡಿದ್ದರಿಂದ ಅಥಾವೆ ಖಾತೆಗೆ ಜಮೆ.

ಖಾ. ಪಾ ೧೦

---

೧೦೦ ಶಾಂತಪ್ಪ ಸೂಡಿ ಖಾತೆ:-ತೋ. ಮಿ. ಮಾಡಿದ್ದರಿಂದ ಅಥಾವೆ ಖಾತೆಗೆ ಜಮೆ. ಖಾ. ಪಾ. ೮

---

೧೦ ಹರಗೋಲಾಲ ಮಾರವಾಡಿ ಖಾತೆ:— ತೋ. ಮಿ. ಮಾಡಿದ್ದರಿಂದ ಅಥಾವೆ ಖಾತೆಗೆ ಜಮೆ

ಖಾ. ಪಾ. ೧೨

---

೬೮ ಚಿಲ್ಲರ ಕೊಡತಕ್ಕ ಖಾತೆ:— ತೋ. ಮಿ. ಮಾಡಿದ್ದರಿಂದ ಅಥಾವೆಗೆ ಜಮೆ,

ಖಾ. ಪಾ. ೩೫

೩೫೯೯ ಅಥಾವೆ ಖಾತೆ:— ತೋ. ಮಿ ಮಾಡಿದ್ದರಿಂದ ಕೆಳಗೆ ಬರೆದ ಖಾತೆಗಳಿಗೆ ಜಮೆ.

೨೯೦ ಖರೀದಿ ವಿಕ್ರೀ ಖಾತೆ-
೭೭೨ ಬ್ಯಾಂಕಿನ ,,
೩೫ ತಸಲಮಾತ ,,
೩೭ ಬಾಳಪ್ಪ ದೇಸಾಯಿ ,,
೨೪೦ ಹುಂಡಿ ಖರೀದಿ ,,

೨೨೫ ಅಂಗಡಿ ಸಾಮಾನಿನ ಖಾತೆ:—
ತೋ. ವಿ. ಮಾಡಿದ್ದರಿಂದ
ಅಥಾವೆ ಖಾತೆ ಖರ್ಚು.
ಖಾ. ಪಾ. ೧೯

೪೪೦ ಜವಳಿ ಫಕೀರಪ್ಪನ ಖಾತೆ:—
ತೋ. ನಿ. ಮಾಡಿದ್ದರಿಂದ
ಅಥಾವೆ ಖಾತೆಗೆ ಖರ್ಚು.
ಖಾ. ಪಾ. ೫

೬೦ ನಾರಾಯಣರಾವ ಸತ್ತಿ ಖಾತೆ:
ತೋ. ವಿ. ಮಾಡಿದ್ದರಿಂದ
ಅಥಾವೆ ಖಾತೆಗೆ ಖರ್ಚು.
ಖಾ. ಪಾ. ೧೧

೧೨೩೭೯

೧೫೦೨ ಅಂಗಡಿ ,,
೨೨೫ ಅಂಗಡಿ ಸಾಮಾನಿನಖಾತೆ
೪೪೦ ಜವಳೀ ಫಕೀರಪ್ಪನ ,,
೬೦ ನಾರಾಯಣರಾವ
ಸತ್ತಿ ,,

೩೫೯೮ ಅಂತು ಖಾ. ಪಾ ೩೯

೧೨೩೭೯

೫. ದಲಾಲಿ ಜೀನಸಿನ ಯಾದಿ

	ತಾರೀಖು	ಮಾಲು ಕಳಿಸಿದವರ ಹೆಸರು	ದಲಾಲಿ ದರ	ರಾಮಕೃಷ್ಣ ಮಿಲ್ ಧೋತರ ಜೋಡು		ಪೈರಣದ ಅರಿವೆ ತಾಗೆ		ನೀಲಸರ್ಜ ಕೋ. ಅರಿವೆ	
				ಸಂಖ್ಯೆ ಜೋಡು	ದರ	ಸಂಖ್ಯೆ	ದರ	ಸಂಖ್ಯೆ	ದರ
ಜಮೆ	೮.೧.೪೫	ಭೀಮಃಶಾವ ಗದಗ	೧೦೦ ಕ್ಕೆ ೫ ರಂತೆ	೬೫	೪	೪೦	೧೦	೩೦	೧೨
ಶಿಲಕು	೮.೧.೪೫	,,	,,	೭೫	೪	೪೦	೧೦	೩೦	೧೦
ಖರ್ಚು	೯.೧.೪೫	,,	,,	•	•	೧	೧೨	•	•
ಶಿಲಕು	೧೦-೧-೪೫	,,	,,	೭೫	೪	೩೯	೧೦	೩೦	೧೦
ಖರ್ಚು	೧೧.೧.೪೫	,,	,,	೪	೫	೫	೧೨	೧೦	೧೩
ಶಿಲಕು	೧೧.೧.೪೫	,,	,,	೬೧	೪	೩[illegible]	೧೦	೨೦	೧೦
ಖರ್ಚು	೧೯.೧.೪೫	,,	,,	೩	೫	•	•	•	•
ಶಿಲಕು	೧೯-೧-೪೫	,,	,,	೬೮	೪	೧೦	೧೮	೨೦	೧೦
ಖರ್ಚು	೨೧-೧-೪೫	,,	,,	೨೧	೫	೨೦	೧೨	•	•
ಶಿಲಕು	೨೨.೧.೪೫	,,	,,	೪೮	೪	೧೪	೧೦	೨೦	೧೦
ಖರ್ಚು	೨೫.೧.೪೫	,,	,,	೪೦	೪	೧೦	೧೦	೨೦	೧೨
ಶಿಲಕು	೨೬-೧-೪೫	,,	,,	೪೮	೪	೪	೧೦	•	•
ಖರ್ಚು	೨೯.೧.೪೫	,,	,,		೫	•	•	•	•
ಶಿಲಕು	೩೦-೧-೪೫	,,	,,	೪	೪	೪	೧೨	•	•

	ತಾರೀಖು.	ಇಳಕಲ್ ಶೀರಿ		ಗದಗಿನ ಶೀರಿ		ಗುಳೇದಗುಡ್ಡದ ಖಣ	
		ಸಂಖ್ಯೆ	ದರ	ಸಂಖ್ಯೆ	ದರ	ಸಂಖ್ಯೆ	ದರ
ಜಮೆ	೧-೧-೪೫	೧೦	೨೫	೫	೧೫	೧೦	೨॥
ಶಿಲಕು	೧-೧-೪೫	೧೦	೨೫	೫	೧೫	೧೦	೨॥
ಜಮೆ	೨-೧-೪೫		•	•	•	•	•
ಖರ್ಚು	೯-೧-೪೫	•	•	೨	೧೮	೫	೩
ಶಿಲಕು	೯-೧-೪೫	೧೦	೨೫	೩	೧೫	೫	೨॥
ಖರ್ಚು	೧೦-೧-೪೫	೫	೨೮	•	•	೫	೩
ಶಿಲಕು	೧೦-೧-೪೫	೫	೨೮	೩	೧೫	•	•
ಖರ್ಚು	೧೧-೧-೪೫	•	•	•	•	•	•
ಶಿಲಕು	೨೧-೧-೪೫	೫	೨೫	೩	೧೫	•	•
ಜಮೆ	೨೬-೧-೪೫	೧೫	೨೧	೨೫	೧೭	೫೦	೨
ಶಿಲಕು	೨೭-೧-೪೫	೨೦	೨೫-೨೧	೨೮	೧೫. ೧೭	೫೦	೨
ಖರ್ಚು	೨೮-೧-೪೫	೧೫	೨೧	೨೫	೧೭	೫೦	೨
ಶಿಲಕು	೨೮-೧-೪೫	೫	೨೫	೩	೧೫	•	•
ಖರ್ಚು	೨೯-೧-೪೫	೨	೩೦	೨	೧೮	•	•
ಶಿಲಕು	೩೦-೧-೪೫	೩	೨೫	೧	೧೫	•	•

ಯಾದಿ

ಬೆಂಗಳೂರಿ ಖಣ		ನಾಗಪೂರದ ಉಡುವ ಧೋತರ ಜೋಡು		ನಾಗಪೂರದ ಹೊರುವ ಧೋತರ ಜೋಡು		ಶರಾ
ಸಂಖ್ಯೆ	ದರ	ಸಂಖ್ಯೆ	ದರ	ಸಂಖ್ಯೆ	ದರ	
೧೦	೫	.	.	.	.	
೧೦	೫	.	.	.	.	
.	.	೧೦	೨೦	೫	೧೦	
.	.	೨	೩	೨	೧೨	
೧೦	೫	೮	೨೦	೪	೧೦	
.	.	.	.	.	.	
೧೦	೫	೮	೩೦	೪	೧೦	
೪	೬	.	.	.	.	
೭	೫	೮	೨೦	೪	೧೦	
.	.		.	.	.	
೭	೫	೮	೨೦	೪	೧೦	
.	.	.	.	.	.	೧೦೦ಕ್ಕೆ
೭	೫	೮	೨೦	೪	೧೦	೫ರಂತೆ ಲಾಭ
೫	೬	.	.	.	.	ತಕ್ಕೊಂಡು ಮಾರಿದೆ
೨	೫	೮	೨೦	೪	೧೦	ತಾರೀಖು ೨-೧-೪೫

೭. ಅಂಗಡಿ ಸಾಮಾನಿನ ಯಾದಿ

ನಂಬರು	ಹೆಸರು	ಸಂಖ್ಯೆ	ತೂಕ	ದರ	ಕಿಮ್ಮತ್ತು	ಕೊಂಡ ತಾರೀಖು	ಶರಾ
				ರೂ.	ರೂ. ಆ.		
೧	ಸಾಗವಾನಿ ಕಪಾಟು	೨	.	೩೦	೬೦-೦	೫.೧೧.೪೫	
೨	ಗುಡಾರ	೧	.	೧೨	೧೨.೦	೧೨-೧೧-೪೫	
೩	ಜಮಖಾನೆ	೧	..	೨೫	೨೫.೦	೨೮-೧೧.೪೫	
೪	ತಕ್ಕೆ	೨	.	೧॥	೩.೦	೪.೧೨-೪೫	
೫	ಗಾದಿ	೨	.	೩	೬-೦	೪.೧೨.೪೫	
೬	ಸವೆ	೨	೧೪ ಸೇರು	.||.	೧೪.೦	೭.೧೨-೪೫	
೭	ತಾಟು	೨	೪ ಸೇರು	.|||.	೩-೦	೭.೧೨-೪೫	
೮	ಹಿತ್ತಾಳಿ ತಕ್ಕಡಿ	೧	.	೧೫॥	೧೫-೮	೧೦-೧೨.೪೫	
೯	ಪೆಟ್ಟಿಗೆ	೨	.	೫॥	೧೧.೦	೨೧.೧೨-೪೫	
೧೦	ತಿಜೋರಿ	೧	.	೭೫	೭೫-೦	೨೯.೫.೪೫	ಮುಂಬಯಿ ಗಾಡ್ರೇಜ ಕಂಪನಿಯಿಂದ ತರಿಸಿದ್ದು
.	.	೧೬	.	.	೨೨೪-೮	.	.

ವ್ಯಾಖ್ಯೆಗಳು

೧

ಯಾವದೊಂದು ಕೆಲಸಕ್ಕೆ ಕೆಲವೊಂದು ರಕಮು ಖರ್ಚು ಮಾಡಬೇಕೆಂಬುದು ಗೊತ್ತಾಗಿದ್ದರೂ ಒಮ್ಮೊಮ್ಮೆ ಇಂತಿಷ್ಟೇ ಹಣವು ಹಿಡಿಯುವದೆಂಬುದು ಮೊದಲಿಗೆ ನಿಶ್ಚಯಿಸಲಾಗದು. ಇಂಥ ಪ್ರಸಂಗಗಳಲ್ಲಿ ಇಂಥದಕ್ಕೇ ಖರ್ಚು ಮಾಡಬೇಕೆಂದು ಹೇಳಿ ಒಬ್ಬನ ಕಡೆಗೆ ಒಪ್ಪಿಸಿಕೊಡುವ ಕೆಲವೊಂದು ರಕಮಿಗೆ **ತಸಲಮಾತ** ಅನ್ನುವರು. ಇಂಥ ರಕಮುಗಳನ್ನು ಬರೆದಿಡುವ ಖಾತೆಗೆ **ತಸಲಮಾತ ಖಾತೆ** ಅನ್ನುವರು.

ಒಬ್ಬರ ಕಡೆಗೆ ಹಣವನ್ನು ಕಳಿಸಿದರೂ ಒಮ್ಮೊಮ್ಮೆ ಯಾತರ ಸಲುವಾಗಿ ಎಂಬದನ್ನು ತಿಳಿಸಿರುವದಿಲ್ಲ. ಯಾವದೊಂದು ಕಾರಣದಿಂದ ವ್ಯಾಪಾರಿಯಿಂದ ತಮಗೆ ಬರತಕ್ಕ ಬಡ್ಡಿ, ಬಾಡಿಗೆ, ಕರ ಮೊದಲಾದವುಗಳ ಹಣವನ್ನು ತೆಗೆದುಕೊಂಡು ಹೋಗಿರುವದಿಲ್ಲ. ಮತ್ತು ಏನು ಮಾಡಬೇಕೆಂಬದನ್ನು ತಿಳಿಸಿರುವದಿಲ್ಲ. ಇಂಥ ರಕಮುಗಳನ್ನು ಬರೆದಿಡುವ ಖಾತೆಗೆ **ಅಮಾನತಖಾತೆ** ಅನ್ನುವರು.

ಸಾವುಕಾರನ ಮನಸಿಗೆ ಬಂದ ಮನುಷ್ಯನು ಸಾಲಗಾರನು ಕೊಡಬೇಕಾದ ಹಣವನ್ನು ತಾನು ಕೊಡುತ್ತೇನೆಂದು ಒಪ್ಪಿಕೊಳ್ಳುವದಕ್ಕೆ **ಹವಾಲಿ ಹಿಡಿಯೋಣ**ವೆನ್ನುವರು.

ಸಾಲಗಾರರು ಬಹಳ ಜನರಿದ್ದರೆ ಯಾವದೊಂದು ಕಾರಣದಿಂದ ಬರತಕ್ಕ ಹಣದಲ್ಲಿ ಕೆಲವಾದರೂ ಮುಳುಗುವದು. ನಿಜವಾಗಿ ಮುಳುಗಿದಷ್ಟು ರಕಮನ್ನು ಖರ್ಚುಬರೆಯುವ ಖಾತೆಗೆ **ಬಾದಖಾತೆ** ಅನ್ನುವರು.

೨

ವ್ಯಾಪಾರಸ್ಥರು ರೋಖು ಖರೀದಿ ಮಾಡಿದವರಿಗೆ ೧೦೦ಕ್ಕೆ ಕೆಲವೊಂದು ರಕಮನ್ನು ಬಿಡುವರು. ಆ ಬಿಡುವ ಹಣಕ್ಕೆ **ಸೂಟ** (ಹಿಡಿತ) ಅನ್ನುವರು.

ದೊಡ್ಡ (ಜೀನಸಿನ) ವ್ಯಾಪಾರದಲ್ಲಿ ಬಹಳ ರಕಮಿನ ಜೀನಸು ಮಾರಾಟವಾದರೆ ಮಾರಿದವನು ಕೊಂಡವನಿಗೆ ಅವನು ಕೊಡತಕ್ಕ ರಕಮಿನಲ್ಲಿ ೧೦೦ಕ್ಕೆ ಕೆಲವೊಂದು ರಕಮನ್ನು ಬಿಡುವನು. ಈ ಬಿಡುವ ಹಣಕ್ಕೆ **ಕಮಿಶನ್** ಅನ್ನುವರು. ಅಥವಾ ೧೦೦ ಕ್ಕೆ (೧೦೦ ಜೀನಸುಗಳಿಗೆ) ಕೆಲವು ಜೀನಸುಗಳನ್ನು ಹೆಚ್ಚು ಕೊಡುವರು. ಈ ಕೊಟ್ಟ ಜೀನಸುಗಳಿಗೆ **ವಠಾವಳಿ** ಅನ್ನುವರು.

ಒಬ್ಬ ವ್ಯಾಪಾರಸ್ಥನು ಮತ್ತೊಬ್ಬನಲ್ಲಿ ಜೀನಸನ್ನು ಕೊಳ್ಳುವಾಗ ಕೆಲವೊಂದು ಮುದ್ದತಿನೊಳಗೆ ಮಾರಿದಷ್ಟು ಜೀನಸಿನ ಬೆಲೆಯನ್ನೂ, ಶಿಲಕು ಉಳಿದ ಜೀನಸನ್ನೂ ತಿರುಗಿ ಕೊಡುವೆನೆಂದು ಮಾಡಿದ ಕರಾರಿಗೆ **ಸಂಜಾಯುತ** ಅನ್ನುವರು.

ಮಾರುವವರ ಕಡೆಯಿಂದಾಗಲಿ ಕೊಳ್ಳುವವರ ಕಡೆಯಿಂದಾಗಲಿ ಅಥವಾ ಇವರಿಬ್ಬರ ಕಡೆಯಿಂದಾಗಲಿ ವ್ಯಾಪಾರಸ್ಥರಲ್ಲಿ ಮಧ್ಯಸ್ಥಿಕೆಯನ್ನು ಮಾಡಿದವನು ತನ್ನ ಶ್ರಮದ ಸಲುವಾಗಿ ತೆಗೆದುಳ್ಳುವ ಹಣಕ್ಕೆ **ದಲಾಲಿ** ಎನ್ನುತ್ತಾರೆ.

೩

ಇಂಥವನಿಗೆ ಇಲ್ಲವೆ ಇವನ ಆಜ್ಞೆಯನ್ನು ಪಡೆದವನಿಗೆ ಅಥವಾ ಪತ್ರವನ್ನು ತಂದವನಿಗೆ ಇಂತಿಷ್ಟು ರಕಮನ್ನು ಬೇಡಿದ ಕೂಡಲೆ ಅಥವಾ ಕೆಲವೊಂದು ಮುದ್ದತಿಗೆ ಕೊಡು ಎಂದು ಒಬ್ಬನು ಇನ್ನೊಬ್ಬನಿಗೆ ತನ್ನ ಸಹಿಯಿಂದ ಬರೆದ ಬೇರೆ ಯಾವ ಪ್ರಕಾರದ ಅಡ್ಡಿ ತೋರಿಸದ ಆಜ್ಞೆಯ ಪತ್ರಕ್ಕೆ **ಹುಂಡಿ** ಅನ್ನುವರು.

ಹುಂಡಿಯನ್ನು ಬರೆಯಿಸಿಕೊಳ್ಳುವವನು **ರಾಖಲೆಯು**.

ರಾಖಲೆಗೆ ಹುಂಡಿ ಹಣ ಕೊಡುವವನು **ಅಡತದಾರನು**.

ರಾಖಲೆಯು ಅಡತದಾರನಿಗೆ ಹುಂಡಿಯನ್ನು ತೋರಿಸಿ, ಅದರ ಮೇಲೆ ಸ್ವೀಕರಿಸಿದೆ (ಒಪ್ಪಿದೆ) ಎಂದು ಬರೆಯಿಸಿ ಮಿತಿಹಾಕಿಸಿ ಅಡತದಾರನ ಸಹಿಯನ್ನು ಮಾಡಿಸುವನು. ಇಂಥದಕ್ಕೆ ಹುಂಡೀ **ಲಾಗೂ ಮಾಡೋಣ** ಅಥವಾ **ಪಟಾಯಿಸೋಣವೆನ್ನು**ವರು. ಮತ್ತು ಅಡತದಾರನು ಹುಂಡಿಯ ರಕಮನ್ನು ಮುಟ್ಟಿಸಿ "ಇಂತಿಷ್ಟು ರಕಮು ಮುಟ್ಟಿತು" ಎಂದು ಹುಂಡಿಯ ಮೇಲೆ ಬರೆಯಿಸಿ ರಾಖಲೆಯ ಸಹಿ ಮಾಡಿಸುವನು. ಇದಕ್ಕೆ **ಭರಪಾಯಿ** ಅನ್ನುವರು.

ಭರಪಾಯಿ ಹಾಕಿದ ಹುಂಡಿಯನ್ನು ಅಡತದಾರನು ಸಾವುಕಾರನ ಕಡೆಗೆ ಕಳಿಸುವನು. ಇದಕ್ಕೆ **ಖೋಕೆ** ಅನ್ನುವರು.

ಸಾವುಕಾರನು ತನಗೆ ಹಣದ ಅಗತ್ಯವಿಲ್ಲದಾಗ ಹುಂಡಿಯನ್ನು ಬರೆದು ಕೊಡಬೇಕಾದರೆ ರಾಖಲೆಯ ಕಡೆಯಿಂದ ಹುಂಡಿಯ ರಕಮಿನ ಮೇಲೆ ೧೦೦ಕ್ಕೆ ಕೆಲವೊಂದು ರಕಮನ್ನು ಅಂದರೆ ಸಾಧಾರಣವಾಗಿ ೪೨ಣೆಯಂತೆ ತೆಗೆದುಕೊಳ್ಳುತ್ತಾನೆ. ಹಣದ ಅಗತ್ಯವಿದ್ದರೆ ತಾನೇ ಕೊಡುತ್ತಾನೆ. ಹೀಗೆ ೧೦೦ ರೂ. ಹುಂಡಿಗೆ ೧೦೦ಕ್ಕಿಂತ ಹೆಚ್ಚು ತೆಗೆದುಕೊಂಡ ಹಣಕ್ಕೆ **ಹೊರಬಟ್ಟಾ** ಎಂದೂ ಕಡಿಮೆ ತೆಗೆದುಕೊಂಡ ಹಣಕ್ಕೆ ಒಳಬಟ್ಟಾ ಎಂದೂ ಅನ್ನುವರು. ಇವೆರಡಕ್ಕೂ ಸಾಮಾನ್ಯವಾಗಿ **ಹುಂಡಾವಳಿ** ಅನ್ನುವರು.

ಹುಂಡಿಯನ್ನು ಪಟಾಯಿಸಿದ ಕೂಡಲೆ ಅಡ ದಾರನು ಹುಂಡಿಯ ರಕಮನ್ನು ಕೊಡಬೇಕೆಂದು ಬರೆದ ಹುಂಡಿಗೆ **ದರ್ಶನಿ ಹುಂಡಿ** ಅನ್ನುವರು.

ಹುಂಡಿಯನ್ನು ಲಾಗೂ ಮಾಡಿದ ಮೇಲೆ ಇಂತಿಷ್ಟು ದಿವಸಕ್ಕೆ ಅಡತದಾರನು ಹುಂಡಿಯ ರಕಮನ್ನು ಕೊಡಬೇಕೆಂದು ಬರೆದಿರುವ ಹುಂಡಿಗೆ **ಮುದ್ದತೀ ಹುಂಡಿ** ಅನ್ನುವರು.

ಹುಂಡಿಯನ್ನು ಬರೆದಂದಿನಿಂದ ಇಂತಿಷ್ಟು ದಿವಸಗಳಲ್ಲಿ ಅಡತದಾರನು ಹುಂಡಿಯ ರಕಮನ್ನು ಕೊಡಬೇಕೆಂದು ಬರೆದಿರುವ ಹುಂಡಿಗೆ **ಬಂದ ಮುದ್ದತಿ ಹುಂಡಿ** ಅನ್ನುವರು.

ಹುಂಡಿಯನ್ನು ತಂದ ಯೋಗ್ಯ ಮನುಷ್ಯನಿಗೆ ಹುಂಡಿಯ ರಕಮನ್ನು ಬೇಡಿದ ಕೂಡಲೆ ಕೊಡಬೇಕೆಂದು ಬರೆದಿರುವ ಹುಂಡಿಗೆ **ಶಹಜೋಗ ದರ್ಶನಿ ಹುಂಡಿ** ಅನ್ನುವರು.

ಹುಂಡಿಯಲ್ಲಿ ಬರೆದ ರಾಖಲೆಗೇ ಹುಂಡಿಯ ರಕಮು ಬೇಡಿದ ಕೂಡಲೆ ಕೊಡಬೇಕೆಂದು ಬರೆದ ಹುಂಡಿಗೆ **ಧನಿಜೋಗ ದರ್ಶನಿ ಹುಂಡಿ** ಅನ್ನುವರು.

ಹುಂಡಿಯ ರಕಮನ್ನು ಗುರುತು ಇಲ್ಲದ ಮನುಷ್ಯನಿಗೆ ಮುಟ್ಟಿಸ ಬೇಕಾದರೆ ಅಂಥವನ ಅವಶ್ಯವಾದ ಗುರುತುಗಳನ್ನು ಬರೆದು ಇಂಥವನಿಗೆ ಬೇಡಿದ ಕೂಡಲೆ ರಕಮನ್ನು ಕೊಡಬೇಕೆಂದು ಬರೆದಿರುವ ಹುಂಡಿಗೆ **ನಿಶಾ(ನ್) ಜೋಗ ದರ್ಶನಿ ಹುಂಡಿ** ಅನ್ನುವರು.

ಹುಂಡಿಯಲ್ಲಿ ರಾಖಲೆಯಲ್ಲದೆ ಮತ್ತೊಬ್ಬ ಮನುಷ್ಯನ ಹೆಸರು ಬರೆದಿದ್ದರೆ, ಅವನಿಗೆ ಹುಂಡಿಯ ರಕಮನ್ನು ಬೇಡಿದ ಕೂಡಲೆ ಕೊಡಬೇಕೆಂದು ಬರೆದಿದ್ದರೆ ಆ ಹುಂಡಿಗೆ **ನಾಮಜೋಗ ದರ್ಶನಿ ಹುಂಡಿ** ಅನ್ನುವರು.

ಬ್ಯಾಂಕಿನ ಮೇಲೆ ಬರೆದ ದರ್ಶನೀ ಹುಂಡಿಗೆ ಇಂಗ್ಲಿಷದಲ್ಲಿ 'ಚೆಕ್' ಅನ್ನುವರು.

ಬ್ಯಾಂಕಿನ ಮೇಲೆ ಬರೆದ ಶಹಜೋಗ ದರ್ಶನೀ ಹುಂಡಿಗೆ ಇಂಗ್ಲಿಷದಲ್ಲಿ 'ಬೆರರ್ ಚಕ್' ಅನ್ನುವರು.

ಬ್ಯಾಂಕಿನ ಮೇಲೆ ಬರೆದ ನಾಮಜೋಗ ಹುಂಡಿಗೆ ಇಂಗ್ಲಿಷದಲ್ಲಿ 'ಆರ್ಡರ್ ಚೆಕ್' ಅನ್ನುವರು.

ನಿನಗೆ ಇಲ್ಲವೆ ನಿನ್ನ ಆಜ್ಞೆಯನ್ನು ಪಡೆದವನಿಗೆ ಅಥವಾ ಇದನ್ನು ತಂದವನಿಗೆ ಇದರಲ್ಲಿ ಬರೆದ ರಕಮನ್ನು ಬೇಡಿದ ಕೂಡಲೆ ಅಥವಾ ಇದನ್ನು ಬರೆದಂದಿನಿಂದ ಇಂತಿಷ್ಟು ಮುದ್ದತಿಗೆ ಕೊಡುತ್ತೇನೆಂದು ಒಬ್ಬನು ಇನ್ನೊಬ್ಬನಿಗೆ ತನ್ನ ಸಹಿಯಿಂದ ಬರಕೊಟ್ಟ ವಚನಪತ್ರಕ್ಕೆ **ಪ್ರಾಮಿಸರಿ ನೋಟು (ಘುಟ್ಟೀ ಹುಂಡಿ)** ಅನ್ನುವರು.

ಸರಕಾರದವರು ಮುದ್ರಿಸಿ ಪ್ರಕಟಿಸಿದ ಶಹಜೋಗ ದರ್ಶನಿ ಪ್ರಾಮಿಸರಿ ನೋಟುಗಳಿಗೆ **ಕರನ್ಸಿನೋಟ** ಅನ್ನುವರು.

ಹುಂಡಿಯ ರಕಮನ್ನು ಕೊಡುವ ವ್ಯವಸ್ಥೆಯನ್ನು ಮಾಡದೆ ವಿಶೇಷ ಪರಿಚಯವಿಲ್ಲದ ಅಡತದಾರನ ಮೇಲೆ ಬರೆದ ಹುಂಡಿಗೆ **ಲಹಣಿ ಹುಂಡಿ** ಅನ್ನುವರು.

ಹುಂಡಿಯಲ್ಲಿ ಹೆಸರು ಇದ್ದವನಿಗೆ ಹುಂಡಿಯ ರಕಮನ್ನು ಮುಟ್ಟಿಸಿ ಅದರ ಪಾವತಿಯನ್ನು ತರಿಸಿಕೊಳ್ಳುವ ಕರಾರ ಇದ್ದ ಹುಂಡಿಗೆ **ಜವಾಬಿ ಹುಂಡಿ** ಅನ್ನುವರು.

ಕಳಕೊಂಡ ಹುಂಡಿಯ ನಕಲಿಗೆ **ಪೇಠ** ಅನ್ನುವರು.

ಪೇಠ ಕಳಕೊಂಡಡೆ ಪೇಠಿನ ನಕಲನ್ನು ಕೊಡುವರು. ಇದಕ್ಕೆ **ಪರಪೇಠ** ಅನ್ನುವರು.

ಯಾರಿಗಾದರೂ (೧) ಹುಂಡಿಯನ್ನು ಬರೆದುಕೊಟ್ಟದ್ದರೆ (೨) ಪ್ರಾಮಿಸರಿ ನೋಟು ಬರೆದುಕೊಟ್ಟರೆ, ಹುಂಡಿಯನ್ನು ವಿಕ್ರೀ ಮಾಡಿದೆ ಎಂದು ತಿಳಿಯಬೇಕು.

(೧) ಹುಂಡಿಯನ್ನು ಬರೆಯಿಸಿಕೊಂಡು ಬಂದರೆ, (೨) ಯಾರಾದರೂ ಇವನಲ್ಲಿ ಹುಂಡೀ ಮುರಿಸಿದರೆ, (೩) ಶರಾ (ಬೇಚಾ) ಹಾಕಿಸಿ ಬಂದರೆ, (೪) ಮತ್ತೊಬ್ಬರಿಂದ ಪ್ರಾಮಿಸರಿ ನೋಟು ಬರೆಯಿಸಿಕೊಂಡರೆ ಹುಂಡಿಯನ್ನು ಖರೀದಿ ಮಾಡಿದೆ ಎಂದು ತಿಳಿಯಬೇಕು.

ಅಡತದಾರನು ಹುಂಡೀ ಸ್ವೀಕರಿಸದಿದ್ದರೆ, ಅಥವಾ ಮೊದಲು ಸ್ವೀಕ-ರಿಸಿ ಹುಂಡಿಯ ಮುದ್ದತು ತುಂಬಿದ ಮೇಲೆ ಹುಂಡೀ ನಾಕರಿಸಿದರೆ (ಹುಂಡಿಯ ರಕಮನ್ನು ಕೊಡದಿದ್ದರೆ) ಸಾವುಕಾರನು ಹುಂಡಿಯ ರಕ-ಮನ್ನೂ ಹುಂಡಾವಳಿಯನ್ನೂ ತಿರುಗಿ ಕೊಡುವದಲ್ಲದೆ ೧೦೦ಕ್ಕೆ ಕೆಲವೊಂದು ಹಾನಿಯನ್ನು ರಾಖಲೆಗೆ ಕೊಡಬೇಕಾಗುವದು. ಇದಕ್ಕೆ **ಸಕ್ರಾಯಿ-ನಕ್ರಾಯಿ** (ಸ್ವೀಕಾರ ನಕಾರ) ಅನ್ನುವರು.

೪

ವ್ಯವಹಾರದಲ್ಲಿ ಸಣ್ಣ ರಕಮುಗಳನ್ನು ಅಲ್ಪಕಾಲದ ವರೆಗೆ ಬಡ್ಡಿಯಿಲ್ಲದೆ ಕೊಡುವತು. ಅದಕ್ಕೆ **ಕೈಗಡ** ಅನ್ನುವರು.

ನೂರಕ್ಕೆ ೧ ವರ್ಷಕ್ಕೆ ಕೆಲವೊಂದು ದರದಂತೆ ಬಡ್ಡಿಯನ್ನೂ ಮುದ್ದತನ್ನೂ ಕರಾರಮಾಡಿ ಹೊಲ, ಮನೆ, ಅಂಗಡಿ, ಗಿರಣಿ ಮುಂತಾದವುಗಳನ್ನು ಅಡವು ಹಾಕಿ ಸಾಲ ಮಾಡುವರು. ಹೀಗೆ ಸಾಲಮಾಡಿ ಬರಕೊಡುವದಕ್ಕೆ **ತೋರ ವತ್ತೆ** ಅನ್ನುವರು.

ಸ್ಥಾವರ ಆಸ್ತಿಗಳನ್ನು ಇಂತಿಷ್ಟು ಅಸಲಿಗೆ ಇಂತಿಷ್ಟು ಮುದ್ದತಿನ ವರೆಗೆ ಉಪಭೋಗಮಾಡಿ ತಿರುಗಿ ಸಾಲಗಾರನಿಗೆ ಒತ್ತೇ ಹಾಕಿದ ಆಸ್ತಿಯನ್ನು ಬಿಡುವರು. ಇದಕ್ಕೆ **ಇಳಿ ಒತ್ತೆ** ಅನ್ನುವರು. ಇಲ್ಲಿ ಆಸ್ತಿಯು ಸಾವುಕಾರನ ಕಬ್ಜೆಯಲ್ಲಿರುವದು.

ಸಾಲತೀರಿಸುವ ವರೆಗೆ ಆಸ್ತಿಯು ಬಡ್ಡಿಗಾಗಿ ಸಾವುಕಾರನ ವಶದಲ್ಲಿರಬೇಕು. ಇದಕ್ಕೆ **ಕಬಜಾ ಒತ್ತೆ** ಅನ್ನುವರು.

ಸ್ವತಃ ಹಣವನ್ನು ಉಪಯೋಗಮಾಡದವರು ಇಲ್ಲವೆ ಮಿತದಿಂದ ವೆಚ್ಚ ಮಾಡಿ ಹಣವನ್ನು ಶಿಲಕು ಉಳಿಸಿದವರು ತಮ್ಮ ಹಣವನ್ನು ಬಡ್ಡೀ ಕರಾರಿನಿಂದ ಸಾವುಕಾರನಲ್ಲಿ ತಂದು ಇಡುವರು. ಇಂಥ ಹಣಕ್ಕೆ ಇಡುಗಂಟು (ಠೇವು) ಅನ್ನುವರು.

ಇಂಥ ಮನುಷ್ಯನಿಗೆ ಗೊತ್ತುಮಾಡಿದ ಮುದ್ದತಿನೊಳಗೆ ಇಂತಿಷ್ಟು ರೂಪಾಯಿ ವರೆಗೆ ಕೊಡಿರಿ ಎಂದು ಒಬ್ಬನು ಇನ್ನೊಬ್ಬನಿಗೆ ತನ್ನ ಸಹಿಯಿಂದ ಬರೆದ ಪತ್ರಕ್ಕೆ **ಭಲಾವಣಿ ಪತ್ರ** ಅನ್ನುವರು.

ಭಲಾವಣಿ ಪತ್ರವನ್ನು ಬರಕೊಡಬೇಕಾದರೆ ಸಾವುಕಾರನು ಸಾಮಾನ್ಯವಾಗಿ ತನ್ನ ಗಿರಾಕಿಯಿಂದ ೧೦೦ಕ್ಕೆ ೨ ಆಣೆಯಿಂದ ೪ ಆಣೆಯ ವರೆಗೆ ರಕಮನ್ನು ತೆಗೆದುಕೊಳ್ಳುತ್ತಾನೆ. ಹೀಗೆ ತೆಗೆದುಕೊಳ್ಳುವ ಹಣಕ್ಕೆ **ಮನೋತಿ** ಅನ್ನುವರು.

ಗೊತ್ತುಮಾಡಿದ ದರದ ಪ್ರಕಾರ ಆಕಾರ ಮಾಡಿದ ಬಡ್ಡಿಯಲ್ಲಿ ಸಾವುಕಾರನು ಕೆಲವು ಹಣವನ್ನು ಬಿಡುವನು. ಈ ಬಿಟ್ಟ ಹಣಕ್ಕೆ **ಸೂಟ** ಅನ್ನುವರು.

ಜಮಾಖರ್ಚಿನ ಪರೀಕ್ಷೆಯ ಪ್ರಶ್ನೆಗಳು.

೧

(ಹೆಣ್ಣುಮಕ್ಕಳ ಪ್ರಾ. ಶಾ. ಪ್ರ. ಪ ಪರೀಕ್ಷೆ ೧೯೪೫)

೧. ಕೆಳಗಿನ ವ್ಯವಹಾರಗಳನ್ನು ನಿಮ್ಮ ರೋಜ ಕೀರ್ದಿಯಲ್ಲಿ ಬರೆದು ಶಿಲಕು ತೆಗೆಯಿರಿ. ಆರಂಭದ ಶಿಲಕು ೧೨೫ರೂ. ೬ ಆಣೆ:—

(ಅ) ೧೨½ ತೊಲೆ ತೂಕದ ಒಂದು ಬೆಳ್ಳಿಯ ಪಾತ್ರೆಯನ್ನು ೧ ತೊಲೆಗೆ ೧ ರೂ. ೮ ಆಣೆಯಂತೆ ಕೊಂಡಿರಿ.

(ಬ) ಬಸಪ್ಪ ಕರ್ಜಗಿ ಇವರಿಗೆ ಕೊಡತಕ್ಕ ನಿಮ್ಮ ೨೦೦ ರೂ. ಸಾಲವನ್ನು ಕರ್ನಾಟಕ ಸೆಂಟ್ರಲ ಬ್ಯಾಂಕಿನ ಮೇಲೆ ಚೆಕ್ಕು ಕೊಟ್ಟು ತೀರಿಸಿದಿರಿ.

(ಕ) ಕೆಳಗಿನ ಸಾಮಾನುಗಳನ್ನು ರೋಖಕೊಟ್ಟು ಕೊಂಡಿರಿ—

(೧) ೩ ಜೋಡಿ ಬಳೆಗಳು, ದರ ೧೪ ಆಣೆಗೆ ೧ ಜೋಡಿ.

(೨) ೭ ವಾರ ಅರಿವೆ, ದರ ವಾರಿಗೆ ೧೧ ಆಣೆ ೬ ಪೈ.

(೩) ೩ ಖುರ್ಚಿಗಳು ದರ ೭ ರೂ. ೧೨ ಆಣೆಗೆ ಒಂದು.

(ಡ) ಸುಂದರವ್ವನು ತಾನು ಕೊಡಬೇಕಾದ ಸಾಲದ ಬಗ್ಗೆ ೭೫ರೂ. ಬೆಲೆ ಬಾಳುವ ಒಂದು ಆಕಳನ್ನು ಕೊಟ್ಟಳು.

(ಇ) ಗಂಗವ್ವನ ಸ್ಕಾಲರಶಿಪ್ಪು ೬ ರೂ. ಬಂದಿತು. ಅದರಲ್ಲಿ ೪ರೂ. ೧೯೪೫ನೆಯ ಇಸ್ವಿ ಮಾರ್ಚ ತಿಂಗಳ ಫೀ ಬಗ್ಗೆ ಕೊಟ್ಟಿತು. ಮತ್ತು ೨ ರೂ. ಬಡ ವಿದ್ಯಾರ್ಥಿನಿಯರ ಸಹಾಯಕ್ಕಾಗಿ ವರ್ಗಣಿ ಕೊಟ್ಟಿತು.

(ಫ) ಈ ಕೆಳಗಿನ ಸಾಮಾನುಗಳನ್ನು ಉದ್ದರೀ ಕೊಂಡಿತು—

(೧) ೭ರೂ. ೬ ಆಣೆಗೆ ಒಂದರಂತೆ ೨ ಶೀರಿಗಳು.
(೨) ೧ರೂ. ೪ಆ. ಗೆ ಒಂದರಂತೆ ೩ ಟುವಾಲುಗಳು

} ಪುನಮು ಚಂದ ಮಾ ರ ವಾಡಿ ಇವರಲ್ಲಿ

(೩) ೭ ಆಣೆ ೬ ಪೈಗೆ ಸೇರಿನಂತೆ ೧೯ ಸೇರು ಕೊಬ್ಬರಿ ಎಣ್ಣೆ— ಬನ್ನೂರ ಇವರಲ್ಲಿ.

೨. ಕೆಳಗೆ ಕೊಟ್ಟ ವ್ಯವಹಾರಗಳನ್ನು ನಿಮ್ಮ ರೋಜ ಕೀರ್ದಿಯಲ್ಲಿ ಬರೆದು ಶಿಲಕು ತೆಗೆಯಿರಿ:—

ಆರಂಭದ ಶಿಲಕು ೫೦ ರೂ. ೮ ಆಣೆ.

(ಅ) ಹಿರಾಚಂದ ಮಾರವಾಡಿ ಇವರ ಅಂಗಡಿಯಲ್ಲಿ ೧೨೫ ರೂ. ಗಳ ಅರಿವೆ ಕೊಂಡು ಸೆಂಟ್ರಲ್ ಬ್ಯಾಂಕಿನ ಮೇಲೆ ೧೦೦ ರೂ. ಗಳ ಚೆಕ್ಕು ಕೊಟ್ಟೆತು; ಉಳಿದ ರಕಮನ್ನು ಮುಂದೆ ಕೊಡಲಾಗುವದು.

(ಬ) ೧ ರೂ. ೨ ಆ. ಗೆ ಒಂದು ಡಝನ್ನಿನಂತೆ ೨೪ ಡಝನ್ ಪಾತ್ರೆಗಳನ್ನು ಕಲಾಯಿ ಮಾಡಿಸಿತು. ಕಲಾಯಿಗಾರನಿಗೆ ೨ ಆ. ಗೆ ಸೇರಿನಂತೆ ೧೦ ಸೇ. ಇದ್ದಲಿಯನ್ನು ಕೊಟ್ಟಿತು. ಉಳಿದ ಹಣವನ್ನು ರೋಖ ಕೊಟ್ಟಿತು.

(ಕ) ಹುಬ್ಬಳ್ಳಿಯ ಅನಾಥ ಬಾಲಿಕಾಶ್ರಮಕ್ಕೆ ೧೦೦ ರೂ. ದೇಣಗೀ ಕೊಡುವದಾಗಿ ವಚನ ಕೊಟ್ಟಿದೆ; ಅದರ ಬಗ್ಗೆ ಮೊದಲನೆಯ ಕಂತಿನ ೨೫ ರೂ. ರೋಖ ಕೊಟ್ಟಿತು.

(ಡ) ಮನೆಯ ಹೊಲದಿಂದ ಬಂದ ೧೯ ಖಂಡಗ ಬತ್ತವನ್ನು ೭ ರೂ. ಗಳಿಗೆ ಒಂದು ಮಣದಂತೆ (೨ ಮಣ=೧ ಹೇರು) ಸರಕಾರಿ ಕೊಳ್ಳುವ ಅಂಗಡಿಗೆ ಮಾರಿತು. ಬಂದ ಹಣದಲ್ಲಿ ಹೊಲದ ತೆರಿಗೆ ೨೫ ರೂ. ೮ ಆ. ಕೊಟ್ಟು, ಉಳಿದ ಹಣದ ಅರ್ಧವನ್ನು ಲಾವಣಿ ಹಿಡಿದ ಭೀಮಪ್ಪ ನರೇಗಲ್ಲ ಇವನಿಗೆ ಹೊಲದ ಖರ್ಚಿಗಾಗಿ ಮುಂಗಡ ಕೊಟ್ಟಿತು.

(ಇ) ಘೋಡಕೆ ಸುಬ್ಬರಾಯನು ತಾನು ಒಯ್ದ ೨೫೭ ರೂ. ಗಳ ಸಾಲವನ್ನು ಕೆಳಗಿನಂತೆ ಮುಟ್ಟಿಸಿದನು:—

(೧) ರೋಖ ೯೦ ರೂ. ಗಳನ್ನೂ, ಮುಂಬಯಿ ಬ್ಯಾಂಕಿನ ಮೇಲೆ ೧೦೦ ರೂ. ಗಳ ಬೇರರ ಚೆಕ್ಕನ್ನೂ ಕೊಟ್ಟನು.

(೨) ೪೦ ರೂ. ಗಳಿಗೆ ರಾಮಜಿ ಪಾಟೀಲನ ಹವಾಲಿ ಕೊಟ್ಟನು.

(೩) ಉಳಿದ ಹಣವನ್ನು ೧ ರೂ. ಗೆ ೩ ಸೇರಿನಂತೆ ಗೋದಿಯನ್ನು ಕೊಟ್ಟು ಮುಟ್ಟಿಸಿದನು.

೨

(ಗಂಡುಮಕ್ಕಳ ಪ್ರಾ ಶಾ. ಪ. ಪರೀಕ್ಷೆ. ೧೯೪೫)

೧. ಕೆಳಗೆ ಕೊಟ್ಟವುಗಳ ಪ್ರಯೋಜನಗಳೇನು ?:—

(ಅ) ತೇರೀಜ; ಬ) ಅವ್ವಲ ಅಧಾವೆ; (ಕ) ಖತಾವಣಿ; (ಡ) ಸಾಮಾನುಗಳ ಖತಾವಣಿ (ಜಾಂಗಡ ವಹಿ); (ಇ) ಆಯವ್ಯಯದ ಮುಂಗಡ ಪತ್ರಿಕೆ

ಕೆಳಗೆ ಕೊಟ್ಟ ಜೋಡಿಗಳಲ್ಲಿಯ ಭೇದಗಳನ್ನು ಸ್ಪಷ್ಟಮಾಡಿರಿ :—

(ಅ) ನಾಮಜೋಗ ದರ್ಶನಿ ಹುಂಡಿ (ಡ್ರಾಫ್ಟ) ಮತ್ತು ಚೆಕ್ಕು; (ಬ) ಹುಂಡಿ ಮತ್ತು ಚೆಕ್ಕು; (ಕ) ಜಾಮೀನ ಮತ್ತು ಹವಾಲಿ; (ಡ) ರೋಖ ಮತ್ತು ಉದ್ದರಿ ವ್ಯವಹಾರ; (ಇ) ಖತಾವಣಿ, ಪಠಾಣ ವಹಿ.

೩. ತೆರವಿದ್ದ ಸ್ಥಳಗಳನ್ನು ಸರಿಯಾಗಿ ತುಂಬಿರಿ :—

(ಅ) ಕಚ್ಚಾ ಖಾತೆಯ ಜಮೆಯ ಮತ್ತು ಖರ್ಚಿನ ಬಾಜುಗಳಿಗೆ __________ ಕೂಡಿಸಿದರೆ, ಆ ಬಾಜುಗಳು ಸರಿಯಾಗುವವು; ಮತ್ತು ಪಕ್ಕಾ ಖಾತೆಯ ಜಮೆಯ ಮತ್ತು ಖರ್ಚಿನ ಬಾಜುಗಳಿಗೆ __________ ಕೂಡಿಸಿದರೆ ಆ ಬಾಜುಗಳು ಸರಿಯಾಗುವವು.

(ಬ) ಮನೆಯ ಉಪಯೋಗಕ್ಕಾಗಿ ಸ್ವಂತ ಅಂಗಡಿಯಿಂದ ಒಯ್ದ ಸಾಮಾನುಗಳ ಬೆಲೆಯನ್ನು ಅಂಗಡಿಕಾರನ ಜಮಾಖರ್ಚಿನ ಪುಸ್ತಕದಲ್ಲಿ __________ ಖಾತೆಗೆ __________ ಬರೆಯಬೇಕು

(ಕ ಅನ ಖಾತೆಗೆ ಖರ್ಚು ಬರೆಯಬೇಕಾದ ಹಣವನ್ನು ತಪ್ಪಿ ಬನ ಖಾತೆಗೆ ಖರ್ಚು ಬರೆದರೆ ಆ ತಪ್ಪು __________ ಕಾಲಕ್ಕೆ ಕಂಡು ಬರುವದು; ಮತ್ತು ಅದನ್ನು ತಿದ್ದಬೇಕಾದರೆ ಆ ರಕಮನ್ನು __________ ಖಾತೆಗೆ __________ ಹಿಡಿದು __________ ಖಾತೆಗೆ __________ ಬರೆಯಬೇಕು

(ಡ) ಕ್ರಾಸ್ಡ ಚೆಕ್ಕನ್ನು ಅದೇ ಬ್ಯಾಂಕಿಗೆ ಒಯ್ದರೆ ಬ್ಯಾಂಕಿನವರು ಹಣವನ್ನು __________

(ಇ) ಹಣವನ್ನು ಎರಡನೆಯವರಿಗೆ __________, __________ ಮತ್ತು __________ ಈ ಪ್ರಕಾರ ಕಳುಹಿಸಬಹುದು.

೪. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷೇಪವಾಗಿ ಉತ್ತರ ಬರೆಯಿರಿ:—

(೧) ಪೋಸ್ಟ ಆಫೀಸ ಸೇವ್ಹಿಂಗ್ಸ ಬ್ಯಾಂಕಿನ ಚಾಲತಿ ಬಡ್ಡಿಯ ದರ ವೆಷ್ಟು?

(೨) ಆರಂಭದಲ್ಲಿ ರೋಜ ಕೀರ್ದಿಯ ಮೇಲೆ ಯಾವ ಯಾವ ಸಂಗತಿಗಳನ್ನು (ಒಕ್ಕಣಿಯನ್ನು) ಬರೆಯುವರು?

(೩) ಕೆಳಗಿನವುಗಳನ್ನು ಯಾವ ಯಾವ ಖಾತೆಗಳಿಗೆ ಬರೆಯುವಿರಿ:—

(ಅ) ಉತ್ಪನ್ನದ ಮೇಲಿನ ಕರದ ರಕಮನ್ನು ಕೊಟ್ಟಿದ್ದು;

(ಬ) ಲಗ್ನದ ಕಾಲಕ್ಕೆ ಉಡುಗರೆ ಕೊಟ್ಟಿದ್ದು;

(ಕ) ವಿಮೆಯ ಕಂತನ್ನು ಕೊಟ್ಟಿದ್ದು;

(ಡ) ೫ ವರ್ಷದ ಕ್ಯಾಶ ಸರ್ಟಿಫಿಕೇಟನ್ನು ಮುರಿಸಿದ್ದು.

(ಇ) ಬಾವಿಯನ್ನು ತೋಡಿಸಲಿಕ್ಕೆ ಹಣ ಖರ್ಚು ಮಾಡಿದ್ದು.

(ಫ) ನಿಮ್ಮ ನೆರೆಮನೆಯವರು ಎರಡು ಬಂಗಾರದ ಬಳಿಗಳನ್ನು ಭದ್ರತೆಗಾಗಿ ನಿಮ್ಮ ಕೈಯಲ್ಲಿ ಕೊಟ್ಟಿದ್ದು?

೩

(ಗಂಡು ಮಕ್ಕಳ ಟ್ರೇ. ಕಾ. ಸರ್ಟಿಫಿಕೇಟ ಪರೀಕ್ಷೆ ೧೯೪೫)

(೧) ಕೆಳಗಿನ ವ್ಯವಹಾರಗಳನ್ನು ನಿಮ್ಮ ರೋಜಕೀರ್ದಿಯಲ್ಲಿ ಬರೆದು ಶಿಲ್ಕು ತೆಗೆಯಿರಿ.

ಆರಂಭದ ಶಿಲ್ಕು. ೨೩೮ರೂ. ೧೪ಆ. ೩ ಪೈ.

(೧) ಧಾರವಾಡ ಸೆಂಟ್ರಲ್ ಬ್ಯಾಂಕಿನ ಮೇಲೆ ತೆಗೆದ ೧೫೦ರೂ. ಗಳ ಚೆಕ್ಕನ್ನು ಲೋಕೂರ ಇವರು ಕಳಿಸಿದರು. ಅದನ್ನು ಹುಬ್ಬಳ್ಳಿ ಇಂಪೀರಿಯಲ್ ಬ್ಯಾಂಕಿನಲ್ಲಿ ನಿಮ್ಮ ಚಾಲತೀ ಖಾತೆಗೆ ಜಮಾ ಮಾಡಿದಿರಿ.

(೨) ೬ ಸೀರೆ ದರ ಸೀರೆಗೆ ೬ರೂ. ೧೨ ಆ. ಮತ್ತು ೪ ರಗು (ಕಂಬಳಿ) ದರ ರಗ್ಗಿಗೆ ೧೮ ರೂ. ೧೨ಆ. ಜೋಶಿ ಅಂಗಡಿಯಲ್ಲಿ ಕೊಂಡಿತು. ಅವುಗಳ ಬೆಲೆಗಾಗಿ ಹುಬ್ಬಳ್ಳಿ ಇಂಪೀರಿಯಲ್ ಬ್ಯಾಂಕಿನ ಮೇಲೆ ಚೆಕ್ ಕೊಟ್ಟಿತು.

(೩) ತನ್ನ ಸಾಲದ ಒಂದು ವರ್ಷದ ಬಡ್ಡಿಯನ್ನು ಬಸಪ್ಪನು ಕೆಳಗಿನಂತೆ ಕೊಟ್ಟನು.

(ಅ) ೪ ಮಣ ಗೋದಿ ದರ ಮಣಕ್ಕೆ ೧೦ರೂ. ೮೪- (ಬ) ರೋಖ ೪೮ ರೂ.

(೪) ೪೮೦ ರೂಪಾಯಿಗೆ ನವಲೂರ ಹೊಲವನ್ನು ಅಡಿವೆಪ್ಪನಿಗೆ ಲಾವಣಿ ಕೊಟ್ಟಿತು. ಅರ್ಧ ರಕಮು ಮುಂಗಡ ಬಂದಿತು

(೫) ಡಾ. ಗೋರೆ ಇವರ ಕಡೆಯಿಂದ ೩೫ರೂ. ೮೪. ೦ಪೈ.ಯಾದಿ (ಬಿಲ್) ಬಂದಿತು ಆದರ ಪೈಕಿ ೨೫ರೂ. ರೋಖ ಕೊಟ್ಟಿತು.

(೬) ೨೫ ರೂ. ಗಳ ಪುಸ್ತಕಗಳನ್ನು ಕೊಂಡು ಬಾಲವಾರುತಿ ಲಾಯಬ್ರರಿಗೆ ಕಾಣಿಕೆಯಾಗಿ ಕೊಟ್ಟಿತು.

(೨) (ಅ) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಕೊಡಿರಿ.

(೧) ರೋಜಕೀರ್ದಿಯಲ್ಲಿ ಬರೆದ ಯಾವ ರಕಮುಗಳು ಖತಾವಣಿಗೆ ಏರುವದಿಲ್ಲ? ಖತಾವಣಿಗೆ ಸಂಬಂಧಿಸಿದ್ದ ರೂ'ಬರಿಯ ರೋಜ ಕೀರ್ದಿಯಲ್ಲಿಯೇ ಜಮಾ ಖರ್ಚು ಆಗುವ ಖಾತೆಗಳು ಯಾವು.

(೨) ಅನ ಕಡೆಯಿಂದ ಬಂದ ರಕಮು ಬನ ಖಾತೆಗೆ ಜಮಾ ಮಾಡಿದ ತಪ್ಪು ಯಾವಾಗ ತಿಳಿಯುವದು? ಆ ತಪ್ಪನ್ನು ಹೇಗೆ ತಿದ್ದು-ವಿರಿ?

(೩) ಯಾವ ಯಾವ ಪ್ರಕಾರದ ಡಿಪಾಜಿಟುಗಳು ಬ್ಯಾಂಕಿಗೆ ಬರು-ವವು? ಬೇರೆ ಬೇರೆ ಡಿಪಾಜಿಟಗಳ ಬಡ್ಡಿಯ ದರವು ಯಾವ ಕಾರಣಗಳಿಂದ ಹೆಚ್ಚು ಕಡಿಮೆಯಾಗುತ್ತದೆ?

(ಬ) ರೋಖ ಶಿಲಕು (ಕೈಯಲ್ಲಿದ್ದ) ರೋಜ ಕೀರ್ದಿಯಲ್ಲಿ ತೆಗೆದ ಶಿಲಕಿಗಿಂತ ಹೆಚ್ಚು ಅಥವಾ ಕಡಿಮೆಯಾದರೆ ಯಾವ ಯಾವ ಅನುಮಾನಗಳನ್ನು ನೀವು ತೆಗೆಯುವಿರಿ? ಇವುಗಳಿಂದ ಸಂಭವಿಸುವ ತಪ್ಪುಗಳನ್ನು ಹೇಗೆ ತಿದ್ದುವಿರಿ?

೪

(ವರ್ಧಾ ರಾಷ್ಟ್ರೀಯ ಅಧ್ಯಾಪನ ಕೇಂದ್ರ ಪ್ರಮಾಣ ಪತ್ರಿಕೆಯ ಪರೀಕ್ಷೆ ೧೯೪೫)

(೧) ಒಬ್ಬ ಸಾವುಕಾರನ ಖಾತಾವಣಿಯಲ್ಲಿ ಈಶ್ವರನೆಂಬ ಒಬ್ಬ ರೈತನ ಖಾತೆಯು ವಿಕ್ರಮ ಸಂವತ್ಸರದಲ್ಲಿ ಕೆಳಗೆ ಕೊಟ್ಟಂತೆ ಅದೆ. ಬಡ್ಡಿಯ ದರವು ೫ ಆಣೆಗಳಂತೆ ತನ್ನ ಖಾತೆಯ ಲೆಕ್ಕವನ್ನು ವರ್ಷದ ಕೊನೆಗೆ ತೀರಿಸಬೇಕಾದರೆ ಆ ರೈತನು ಸಾವುಕಾರನಿಗೆ ಎಷ್ಟು ಹಣವನ್ನು ಕೊಡಬೇಕು.

ಜಮಾ ರೂ.	ಖರ್ಚು ರೂ.
೭೫ ರೂ. ಮಾಘ ಶುದ್ಧ ೧೧.	೧೫೦ ರೂ. ಕಾರ್ತಿಕ ವದ್ಯ ೫.
೧೨೫ ,, ಜ್ಯೇಷ್ಠ ಶುದ್ಧ ೧೫.	೧೫೦ ರೂ. ಶ್ರಾವಣ ಶುದ್ಧ ೧.

(೨) ೪೦ ರೂ. ಗಳಿಗೆ ೩ ತಿಂಗಳಲ್ಲಾಗುವ ಬಡ್ಡಿಯನ್ನು ೫ ಆಣೆ ಬಡ್ಡಿಯ ದರದಿಂದ ಕೆಳಗೆ ಕಾಣಿಸಿದಂತೆ ದೇಶೀ ಪದ್ಧತಿಯಿಂದ ತೆಗೆದಿದೆ:—

೪೦×೩ = ೧೨೦; ೧೨೦×೫ = ೬೦೦;

೬೦೦ ಬದಾಮು ಅಥವಾ ಕವಡಿಗಳು = ೬ ಆಣೆ.

ಈ ರೀತಿಯಲ್ಲಿ ಏಕಮಾನ ಪದ್ಧತಿಯ ತತ್ವವು ಹೇಗೆ ಅಡಕವಾಗಿದೆಂಬುದನ್ನು ತೋರಿಸಿರಿ.

(೩) ಕೆಳಗಿನ ವ್ಯವಹಾರವು ಅ, ಬ, ಕ, ಇವರಲ್ಲಿ ನಡೆದಿದೆ. ಪ್ರತಿಯೊಬ್ಬನು ತನ್ನ ಜಮಾಖರ್ಚಿನ ಪುಸ್ತಕದಲ್ಲಿ ಹೇಗೆ ಜಮಾಖರ್ಚು ಮಾಡುವನೆಂಬುದನ್ನು ಬರೆದು ತೋರಿಸಿರಿ:—

'ಅ' ರೈತನು 'ಬ' ರೈತನಿಂದ ೫೦೦ರೂ. ಬೆಲೆಯುಳ್ಳ ಒಂದು ಎತ್ತನ್ನು ಕೊಂಡು ಬನಿಗೆ ೧೦೦ರೂ. ರೋಖು ಕೊಟ್ಟನು ಮತ್ತು ೧೨೫ ರೂ. ಬೆಲೆಯ ಒಂದು ಎಮ್ಮೆಯನ್ನು ಕೊಟ್ಟನು; ಬನು 'ಕ' ವ್ಯಾಪಾರಸ್ಥನಲ್ಲಿ ಹೋದ ತಿಂಗಳಲ್ಲಿ ಜವಳಿ ಖರೀದಿ ಬಾಬತು ಕನಿಗೆ ಕೊಡಬೇಕಾದ ೧೭೫ರೂ. ಗಳ ಬಾಕಿಯನ್ನು ಅನು ಕೊಡಲು ಒಪ್ಪಿಕೊಂಡನು ಮತ್ತು ಅನು ಬನಿಗೆ ಕೊಡ-

ಬೇಕಾದ ಉಳಿದ ಹಣವನ್ನು ರೋಖು ತನ್ನ ನಂಬಿಗೆಯ ಮೇಲೆ ಕೊಡಬೇಕೆಂದು ಕನಿಗೆ ಹೇಳಿದನು.

೫

(ಹೆಣ್ಣುಮಕ್ಕಳ ಸರಕಾರೀ ಟ್ರೇನಿಂಗ್ ಕಾಲೇಜದ ವಾರ್ಷಿಕ ಪರೀಕ್ಷೆ ೧೯೪೫)

(೬) ಕೆಳಗಿನ ವ್ಯವಹಾರಗಳನ್ನು ನಿಮ್ಮ ರೋಜಕಿರ್ದಿಯಲ್ಲಿ ಬರೆದು ಶಿಲ್ಕು ತೆಗೆಯಿರಿ.

(೧) ಆರಂಭದ ಶಿಲ್ಕು ೧೩೭ರೂ. ೫ ಆ. ೬ ಪೈ.

(೨) ಎರಡು ಹಳೆಯ ಖುರ್ಚಿಗಳು ಮತ್ತು ಒಂದು ಮೇಜು—ಇವುಗಳನ್ನು ೮ ರೂಪಾಯಿ ೭ ಆ. ಗೆ ಮಾರಿವೆ. ಈ ರಕಮಿಗೆ ೫ ರೂಪಾಯಿ ಕೂಡಿಸಿ ಎರಡು ಹೊಸ ಖುರ್ಚಿಗಳನ್ನು ಕೊಂಡಿದೆ.

(೩) ಪೋಸ್ಟಆಫೀಸು ಸೇವಿಂಗ್ಸ ಬ್ಯಾಂಕಿನಿಂದ ೫೦ ರೂಪಾಯಿ ತೆಗೆದಿದೆ.

(೪) ಮೂರು ಹಳೆಯ ಹರಕ ಸೀರೆಗಳನ್ನು ಕೊಟ್ಟು ಎರಡು ಕಪ್ಪು ಬಸಿಗಳನ್ನು ಕೊಂಡಿದೆ. ದರ ಒಂದು ಕಪ್ಪು ಬಸಿಗೆ ೧೪ ಆ. ೬ ಪೈ?

(೫) ಕಳೆದ ತಿಂಗಳಲ್ಲಿ ೧ ಮಣ ೫ ಪೌಂಡು ಹಾಲು ಮನೆಯಲ್ಲಿ ಖರ್ಚಾಗಿದೆ. ದರ ೧ ಮಣ ಹಾಲಿಗೆ ೨೦ ರೂ. ಗೌಳಿಗೆ ೩೦ ರೂ. ಕೊಟ್ಟದೆ?

(೬) ಸ್ತ್ರೀ ಶಿಕ್ಷಣದ ಮೇಲೆ ಬರೆದ ಉತ್ತಮ ನಿಬಂಧಕ್ಕೆ ೫೦ ರೂ. ಇನಾಮು ಕಾದಿಟ್ಟಿದೆ. ಆ ರಕಮಿನಲ್ಲಿ ೫ ರೂಪಾಯಿಗಳನ್ನು ಬಡ ವಿದ್ಯಾರ್ಥಿಗಳ ಸಹಾಯಕ್ಕಾಗಿ ಕಾದಿಟ್ಟದೆ?

(೭) ಗಾಣಿಗೇರ ನಿಂಗಪ್ಪನು ೨೦ ಪೌಂಡು ಸೇಂಗಾದ ಎಣ್ಣೆ ದರ ಒಂದು ಮಣಕ್ಕೆ ೨೮ ರೂ. ಯಂತೆ ಉದ್ರಿ ಕೊಂಡಿದೆ ಈ ಎಣ್ಣೆಯಲ್ಲಿ ೫ ಪೌಂಡು ಬಸಪ್ಪನಿಗೆ ಕೊಟ್ಟದೆ. ಅದರ ಬೆಲೆಯ ಪೈಕಿ ಅವಳು ೪ ರೂಪಾಯಿ ಕೊಟ್ಟಳು:

(೭) ಕೆಳಗೆ ಕೊಟ್ಟವುಗಳನ್ನು ಸ್ಪಷ್ಟೀಕರಿಸಿರಿ:–
ರೋಜಕೀರ್ದಿ; ಖತಾವಣಿ, ಕ್ರಾಸ್ಡ ಚಕ್ಕು, ಟ್ರೇಜರೀ ಬಿಲ್, ಕ್ಯಾಶ್ ಸರ್ಟಿಫಿಕೇಟು.

ಅಥವಾ

ನಿಮ್ಮ ರೋಜಕೀರ್ದಿಯಲ್ಲಿ ಕೆಳಗಿನ ವ್ಯವಹಾರಗಳ ಜಮಾಖರ್ಚು ಹೇಗೆ ಬರೆಯುವಿರಿ.

(ಅ) ೧೦೦ ರೂಪಾಯಿ ಸರಕಾರೀ ಸಾಲದ ಪತ್ರವನ್ನು ೯೭ ರೂ. ೬ ಆಣೆಗೆ ಕೊಂಡಿದೆ. ೧೦೦ಕ್ಕೆ ೧ರಂತೆ ಕಮೀಶನ್ ಕೊಟ್ಟಿತು?

(ಬ) ೧೨ ರೂ. ಸೀರೆ ನಿಮ್ಮ ಅಣ್ಣನಿಂದ ನಿಮಗೆ ಬಂದಿತು?

(ಕ) ನಿಮ್ಮ ಮನೆಯ ಅರ್ಧಮಣ ಗೋದಿ ಅನಾಥಾಶ್ರಮಕ್ಕೆ ಕೊಟ್ಟಿರಿ?

(ಡ) ನಿಮ್ಮ ಬೆಂಡವಲೆ ನಿಮ್ಮ ತಂಗಿಗೆ ಇನಾಮಾಗಿ ಕೊಟ್ಟಿರಿ?

(ಇ) ಕಮಲಾಬಾಯಿಯು ರಾಧಾಬಾಯಿಗೆ ಕೊಡತಕ್ಕ ೧೦ ರೂ.ಗಳನ್ನು ರಾಧಾಬಾಯಿಗೆ ಕೊಡಲಿಕ್ಕೆ ಒಪ್ಪಿದಿರಿ?

೭

(ಹೆಣ್ಣುಮಕ್ಕಳ ಟ್ರೇನಿಂಗ್ ಕಾಲೇಜದ ಸರ್ಟಿಫಿಕೇಟ ಪರೀಕ್ಷೆ ೧೯೪೫)

೧. ರೋಜಕೀರ್ದಿಯಲ್ಲಿ ಕೆಳಗಿನ ವ್ಯವಹಾರಗಳನ್ನು ಹೇಗೆ ಬರೆಯುವಿರಿ? :—

(ಅ) ಪೋಸ್ಟಲ್ ಸೇವಿಂಗ್ಸ ಬ್ಯಾಂಕಿನಲ್ಲಿ ನಿಮ್ಮ ಖಾತೆಗೆ ಜಮಾ ಮಾಡಿದೆ.

(ಬ) ೮ ರೂ. ೧೩ ಆ. ಗೆ ಕೊಂಡ ೫ ವರ್ಷದ ಪೋಸ್ಟಲ್ ಕ್ಯಾಶ್ ಸರ್ಟಿಫಿಕೇಟು ಮುದ್ದತ ತುಂಬಿದ್ದರಿಂದ ಮುರಿಸಿತು.

(ಕ) ರಾಧಾಬಾಯಿಯು ೧೦೦ ರೂ. ಸಾಲವನ್ನು ಈ ರೀತಿಯಿಂದ ತೀರಿಸಿದಳು (೧) ೫೦ ರೂ. ಚೆಕ್ ಶಿಕ್ಷಕರ ಬ್ಯಾಂಕಿನ ಮೇಲೆ ಕೊಟ್ಟಳು

(೨) ೫ ಸೇರು ತುಪ್ಪ, ದರ ೪೫ರೂ. ಶೇರಿಗೆ. (೩) ಉಳಿದ ರಕಮಿಗೆ ಒಂದು ಪ್ರಾಮಿಸರಿ ನೋಟು ಬರೆದು ಕೊಟ್ಟಳು.

(ಡ) ಜಾಧವನ ಅಂಗಡಿಯಲ್ಲಿ ಎರಡು ಸೀರೆಗಳನ್ನು ಪರ ೨೫ ರೂ. ಗೆ ಒಂದರಂತೆ ಕೊಂಡಿತು ಅವುಗಳಲ್ಲಿ ಒಂದು ಸುಮಾರು ಆದದ್ದರಿಂದ ೨ ರೂ ಕಡಿಮೆ ಮಾಡಿ ಸೀರೆಯನ್ನು ಆವನಿಗೆ ತಿರುಗಿ ಕೊಟ್ಟಿತು.

(ಇ) ಅನಾಥ ಬಾಲಿಕಾಶ್ರಮಕ್ಕೆ ೧೦೧ ರೂ. ದೇಣಿಗೆ ಕೊಡಲಿಕ್ಕೆ ಒಪ್ಪಿತು ಅದರ ಪೈಕಿ ೪೦ ರೂ. ರೋಖ ಕೊಟ್ಟಿತು.

೨. ಕೆಳಗೆ ಕೊಟ್ಟವುಗಳಲ್ಲಿ ೫ ಪ್ರಶ್ನೆಗಳಿಗೆ ಸ್ವಲ್ಪದರಲ್ಲಿ ಉತ್ತರ ಗಳನ್ನು ಬರೆಯಿರಿ -

(ಅ) ಚೆಕ್ಕಿನ ಮೇಲೆ ಅಡ್ಡಗೀಟು (ಕ್ರಾಸ) ಯಾಕೆ ಮಾಡುತ್ತಾರೆ?

(ಬ) (ಕೈಯಲ್ಲಿದ್ದ) ರೋಖ ಶಿಲ್ಕು ಮತ್ತು ರೋಜಕಿರ್ದಿಯಲ್ಲಿ ತೆಗೆದ ಶಿಲಕು ಸರಿಯಾಗದಿದ್ದರೆ ಕೀರ್ದಿಯನ್ನು ಹೇಗೆ ಬಾಯಿಗೂಡಿಸುವಿರಿ? (೧) ರೋಖ ಶಿಲಕು ಕೀರ್ದಿಯಲ್ಲಿ ತೆಗೆದ ಶಿಲಕಿಗಿಂತ ಹೆಚ್ಚಾದರೆ? ಅಥವಾ (೨) ರೋಖ ಶಿಲಕು ಕೀರ್ದಿಯಲ್ಲಿ ತೆಗೆದ ಶಿಲಕಿಗಿಂತ ಕಡಿಮೆ ಯಾದರೆ?

(ಕ) ಕೀರ್ದಿಯ ತೇರೀಜು ಮತ್ತು ಖತಾವಣಿಯ ತೇರಿಜು ಎಷ್ಟರ ಮಟ್ಟಿಗೆ ಸರಿಯಾಗುವವು ಎಂಬುದರ ಕಾರಣವನ್ನು ಹೇಳಿರಿ-

(ಡ) ಇಸಮಿನ ಮತ್ತು ಬಾಬಿನ ಖಾತೆಗಳಲ್ಲಿ ಭೇದವೇನು? ಇವು ಗಳಲ್ಲಿ ಹೆಚ್ಚು ಮಹತ್ವದವು ಯಾವವು? ಯಾಕೆ?

(ಇ) ನಿಮಗೆ ಕೊಟ್ಟ ಶಹಾಜೋಗ ದರ್ಶನೀ (ಬೇರರ) ಚೆಕ್ ಹೇಗೆ ಮುರಿಸುವಿರಿ?